ಸಂಪುಟ: 13 Volume | ಸಂಚಿಕೆ: 329 Issue | ಪುಟಗಳು 08 Pages | ಗುರುವಾರ 19 ಫೆಬ್ರವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಮಹತ್ವಾಕಾಂಕ್ಷೆ ಇಲ್ಲದ ಬುದ್ಧಿವಂತಿಕೆ ರೆಕ್ಕೆಗಳಿಲ್ಲದ ಹಕ್ಕಿಯಂತೆ.
–ಸಾಲ್ವಡೋರ್ ಡಾಲಿ.

ದೇವದಾಸಿಯರ ಪುನರ್ ಸರ್ವೆಗೆ ಆಗ್ರಹ 6
ಶಿವಸಿಂಪಿ ಸಮಾಜದಿಂದ ಶಿವದಾಸಿಮಯ್ಯ ಜಯಂತಿ 7
ಸಫಾರಿ ಹಂತಹಂತವಾಗಿ ಪುನಾರಂಭ: ಖಂಡ್ರೆ 8

## ಕತ್ತು ಹಿಸುಕಿ ಪತ್ನಿಯ ಕೊಲೆ




**ಬೆಂಗಳೂರು:** ಬೆಂಗಳೂರಿನಲ್ಲಿ 65 ವರ್ಷದ ನಿವೃತ್ತ ಇಸ್ರೊ ಉದ್ಯೋಗಿಯೊಬ್ಬರು ಬುಧವಾರ ತಮ್ಮ ನಿವಾಸದಲ್ಲಿ ಟವಲ್‌ನಿಂದ ಪತ್ನಿಯ ಕತ್ತು ಹಿಸುಕಿ ಕೊಲೆ ಮಾಡಿರುದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಕೊಲೆ ನಡೆದಿದ್ದು, ಆರೋಪಿ ನಾಗೇಶ್ವರ ರಾವ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಾಥಮಿಕ ತನಿಖೆಯನ್ನು ಉಲ್ಲೇಖಿಸಿ, ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ರಾವ್ ಖಿನ್ನತೆಗೆ ಒಳಗಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ವಿವರಿಸಿದ್ದಾರೆ.

## ಪೊಲೀಸರ ಸೋಗಲ್ಲಿ 20 ಲಕ್ಷ ಲೂಟಿ

**ಬೆಂಗಳೂರು:** ತಾವು ಪೊಲೀಸರೆಂದು ಹೇಳಿಕೊಂಡು ಬೆಂಗಳೂರಿನ ಬಿಇಎಲ್ ಲೇಔಟ್‌ನಲ್ಲಿರುವ ಉದ್ಯಮಿಯೊಬ್ಬರ ಮನೆಗೆ ನುಗ್ಗಿದ ನಾಲ್ವರು ದರೋಡೆಕೋರರ ಗ್ಯಾಂಗ್, 20 ಲಕ್ಷ ರೂ. ನಗದು, 500 ಗ್ರಾಂ ಚಿನ್ನಾಭರಣ ದೋಚಿದ್ದಾರೆ. ಈ ಸಂಬಂಧ ಬ್ಯಾಡರಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ದರೋಡೆಕೋರರ ಬಂಧನಕ್ಕೆ ಬಲೆ ಬೀಸಿದ್ದಾರೆ. ನಾಲ್ವರು ಆರೋಪಿಗಳಲ್ಲಿ ಇಬ್ಬರು ತಾವು ಯಲಹಂಕ ಪೊಲೀಸ್ ಠಾಣೆಗೆ ಸೇರಿದ ಪೊಲೀಸರು ಎಂದು ಹೇಳಿಕೊಂಡಿದ್ದು, ಈ ಪ್ರದೇಶದಲ್ಲಿ ಕಳ್ಳತನಗಳು ಹೆಚ್ಚು ನಡೆಯುತ್ತಿವೆ.




ಫೆಬ್ರವರಿ 21–22ರಂದು ನಡೆಯಲಿರುವ ಸಿಎಂ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಬಿಡುಗಡೆ ಮಾಡಿದರು.




ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಕ್ವೀನ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಕೆಪಿಸಿಸಿ ಸಾಮಾಜಿಕ ಜಾಲತಾಣ ವಿಭಾಗದ ಪರಿಶೀಲನಾ ಸಭೆ ನಡೆಸಿದರು. ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ, ಕೆಪಿಸಿಸಿ ಅಧ್ಯಕ್ಷರ ರಾಜಕೀಯ ಕಾರ್ಯದರ್ಶಿ ದೀಪಕ್ ತಿಮ್ಮಯ , ಕೆಪಿಸಿಸಿ ಸಾಮಾಜಿಕ ಜಾಲತಾಣ ವಿಭಾಗದ ಅಧ್ಯಕ್ಷೆ ಐಶ್ವರ್ಯ ಮಹದೇವ್ ಮತ್ತಿತರರು ಉಪಸ್ಥಿತರಿದ್ದರು.

## ಆರೆಸ್ಸೆಸ್ ಬಗ್ಗೆ ಸರ್ಕಾರ ಕಾನೂನು..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ನೋಂದಣಿ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದರೆ, ಅದನ್ನುಎದುರಿಸಲು ಸರ್ಕಾರ ಕಾನೂನು ತರಲು ಪರಿಗಣಿಸಬಹುದು ಎಂದಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಕುರಿತು ನೀಡಿದ ತಮ್ಮ ಹೇಳಿಕೆಗಳನ್ನು ಹಾಗೂ ಕರಾವಳಿ ಕರ್ನಾಟಕದಲ್ಲಿ ಸಾಮುದಾಯಿಕ ಉದ್ವಿಗ್ನತೆ ಹೂಡಿಕೆಗಳ ಮೇಲೆ ಪರಿಣಾಮ ಬೀರುತ್ತಿದೆ ಎಂಬ ತಮ್ಮ ಅಭಿಪ್ರಾಯವನ್ನು ಸಮರ್ಥಿಸಿಕೊಂಡಿದ್ದಾರೆ.

ಆರ್‌ಎಸ್‌ಎಸ್ ಸಂಬಂಧಿತ ಕಾನೂನು ನೋಂದಣಿ ವಿಚಾರವನ್ನುಪ್ರಸ್ತಾಪಿಸಿದ ಪ್ರಿಯಾಂಕ್ ಖರ್ಗೆ, ಸಂಸ್ಥೆ ದೇಣಿಗೆಗಳನ್ನುಸ್ವೀಕರಿಸುತ್ತಿದ್ದರೂ ಸಂಬಂಧಿತ ಕಾನೂನುಗಳಡಿ ನೋಂದಾಯಿತವಾಗಿಲ. ಕಾನೂನಿನ ಪ್ರಕಾರ ದೇಣಿಗೆಗಳನ್ನುಸ್ವೀಕರಿಸುವ ಸಂಸ್ಥೆಗಳು ನೋಂದಾಯಿತವಾಗಿರಬೇಕು. ಯಾವುದೇ ಸಂಸ್ಥೆ ನೋಂದಣಿ ಮಾಡಿಕೊಳ್ಳಲು ನಿರಾಕರಿಸಿದರೆ ಅದು ಕಾನೂನುಬಾಹಿರ. ಅಂತಹ ಸಂಸ್ಥೆಯನ್ನು ನಡೆಸಲು ಅವಕಾಶ ಇದೆಯೇ ಎಂದು ಪ್ರಶ್ನಿಸಿದ್ದಾರೆ.

## ರಾಜ್ಯಸಭೆಯ 37 ಸ್ಥಾನಕ್ಕೆ ಎಲೆಕ್ಷನ್

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ



ಏಪ್ರಿಲ್‌ನಲ್ಲಿ ವಿವಿಧ ದಿನಾಂಕಗಳಲ್ಲಿ ಖಾಲಿಯಾಗುತ್ತಿರುವ 10 ರಾಜ್ಯಗಳ 37 ರಾಜ್ಯಸಭಾ ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣೆ ನಡೆಸುವ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗ ಪ್ರಕಟಿಸಿದೆ. ಮಹಾರಾಷ್ಟ್ರ, ಒಡಿಶಾ, ತಮಿಳುನಾಡು, ಪಶ್ಚಿಮ ಬಂಗಾಳ, ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ಹರಿಯಾಣ, ಹಿಮಾಚಲ ಪ್ರದೇಶ ಮತ್ತು ತೆಲಂಗಾಣದಲ್ಲಿ ಖಾಲಿಯಾಗುತ್ತಿರುವ 37 ಸ್ಥಾನಗಳಿಗೆ ಮಾರ್ಚ್ 16 ರಂದು ಚುನಾವಣೆ ನಡೆಯಲಿದೆ.

ವೇಳಾಪಟ್ಟಿಯ ಪ್ರಕಾರ, ಫೆಬ್ರವರಿ 26 ರಂದು ಅಧಿಸೂಚನೆ ಹೊರಡಿಸುವುದರೊಂದಿಗೆ ಚುನಾವಣಾ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ. ನಾಮಪತ್ರ ಸಲ್ಲಿಸಲು ಮಾರ್ಚ್ 5 ಕೊನೆಯ ದಿನವಾಗಿದ್ದು, ಮಾರ್ಚ್ 6 ರಂದು ಪರಿಶೀಲನೆ ನಡೆಯಲಿದೆ. ಅಭ್ಯರ್ಥಿಗಳು ಮಾರ್ಚ್ 9 ರವರೆಗೆ ತಮ್ಮ ನಾಮಪತ್ರಗಳನ್ನು ಹಿಂಪಡೆಯಲು ಅವಕಾಶವಿದೆ.

# ಬಜೆಟ್ ನತ್ತ ಯುವ ಚಿತ್ತ

### 56,000 ಹುದ್ದೆ ಭರ್ತಿಗೆ ಸರ್ಕಾರ ಅಸ್ತು | ಇನ್ನೂ ನೇಮಕ ಪ್ರಕ್ರಿಯೆ ಇಲ್ಲ | ಸಿಎಂ ನಡೆಯತ್ತ ನಿರುದ್ಯೋಗಿ ಭವಿಷ್ಯ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರೈಸುತ್ತಿದ್ದರೂ ಖಾಲಿ ಹುದ್ದೆಗಳಿಗೆ ನೇಮಕ ಭಾಗ್ಯ ಇನ್ನೂ ಸಿಕ್ಕಿಲ್ಲಎಂದು ನಿರುದ್ಯೋಗಿಗಳು ಕಾತರ ವ್ಯಕ್ತಪಡಿಸಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷ ಮುಗಿಯುತ್ತಿದ್ದು, 56,000 ಹುದ್ದೆ ಭರ್ತಿಗೆ ಸರಕಾರ ಅನುಮೋದನೆ ನೀಡಿದರೂ ನೇಮಕ ಪ್ರಕ್ರಿಯೆ ಶುರುವಾಗಿಲ್ಲ.

**ಉದ್ಯೋಗಾಂಕ್ಷಿಗಳ ನಿರೀಕ್ಷೆ:** 2026–27ನೇ ಸಾಲಿನ ಬಜೆಟ್‌ನಲ್ಲಾದರೂ ಈ 56,000 ಹುದ್ದೆ ಜತೆಗೆ ಒಟ್ಟು 1 ಲಕ್ಷ ಹುದ್ದೆ ಭರ್ತಿಗೆ ಅನುದಾನ ಒದಗಿಸಿ ನೇಮಕ ಮಾಡಬೇಕೆಂಬ ಉದ್ಯೋಗಾಕಾಂಕ್ಷಿಗಳು ನಿರೀಕ್ಷಿಸಿದ್ದಾರೆ.

ಸರಕಾರಿ ಹುದ್ದೆಗಳ ಪೈಕಿ 2.76 ಲಕ್ಷ ಹುದ್ದೆ ಖಾಲಿ ಇರುವುದು ಕಾರ್ಯಾಂಗದ ಮೇಲೆ ಒತ್ತಡ ಹೆಚ್ಚಾಗಿದ್ದರೆ ಉದ್ಯೋಗಾಕಾಂಕ್ಷಿಗಳಿಂದ ಒತ್ತಾಯವೂ ತೀವ್ರವಾಗಿದೆ.

**ಖಾಲಿ ಇರುವ ಹುದ್ದೆಗಳು:** ಶಿಕ್ಷಣ, ಪೊಲೀಸ್ ಇಲಾಖೆಯಲ್ಲಿನ ಖಾಲಿ ಹುದ್ದೆ ಭರ್ತಿ ಮಾಡಬೇಕಿದೆ. ಯುವ ಜನತೆ ಹಾಗೂ ಉದ್ಯೋಗಾಕಾಂಕ್ಷಿಗಳು ಬಜೆಟ್‌ನತ್ತ ದೃಷ್ಟಿ ನೆಟ್ಟಿದ್ದಾರೆ. ಖಾಲಿಯಿರುವ ಒಟ್ಟು 2.76 ಲಕ್ಷ ಹುದ್ದೆ ಪೈಕಿ ಅತಿ ಹೆಚ್ಚು ಅಂದರೆ 'ಸಿ' ಶ್ರೇಣಿಯ 1,66,021 ಹಾಗೂ 'ಡಿ' ಶ್ರೇಣಿಯ 77,614 ಹುದ್ದೆ ಖಾಲಿಯಿದೆ.



### ಹೊರ ಗುತ್ತಿಗೆ ನೌಕರರು..?

ರಾಜ್ಯ ಸರ್ಕಾರ ಸೇವೆಗಾಗಿ ಇದುವರೆಗೆ 37,000 ಹುದ್ದೆ ಹೊರ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿದ್ದಾರೆ. ಆದರೆ ಕಾಯಂ ನೌಕರರು ಕಾರ್ಯ ನಿರ್ವಹಿಸಿದಷ್ಟು ಪರಿಣಾಮಕಾರಿ ಎನಿಸದು ಎಂಬ ದೂರು ವ್ಯಾಪಕವಾಗಿದೆ. ಗುತ್ತಿಗೆ ನೇಮಕ ಹೊರತಾಗಿಯೂ 2.40 ಲಕ್ಷ ಹುದ್ದೆ ಖಾಲಿ ಉಳಿದಿರುವುದು ಸೇವಾನಿರತ ನೌಕರರು, ಸಿಬ್ಬಂದಿ ಮೇಲೆ ಕಾರ್ಯ ಒತ್ತಡ ಹೆಚ್ಚಿಸಿದ್ದು, ಕಾಯಂ ನೌಕರರ ಅಗತ್ಯಕ್ಕೆ ಸಾಕ್ಷಿಯಾಗಿದೆ.

### ಅತಿಥಿ ಲೆಕ್ಚರರ್ಸ್ ಪಾಡು

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲೇ 79,694 ಹುದ್ದೆ ಖಾಲಿ ಇವೆ ಎಂಬ ಅಂದಾಜಿದೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ 13,599 ಹುದ್ದೆ ಖಾಲಿಯಿವೆ. ಅತಿಥಿ ಶಿಕ್ಷಕರು, ಅತಿಥಿ ಉಪನ್ಯಾಸಕರನ್ನು ದೊಡ್ಡ ಪ್ರಮಾಣದಲ್ಲಿ ನೇಮಿಸಿಕೊಂಡು ಶಿಕ್ಷಣ ನೀಡಬೇಕಾದ ಸ್ಥಿತಿಯಿದೆ. ಸರ್ಕಾರಿ ಶಾಲೆಗಳಿಗೆ 51,000 ಅತಿಥಿ ಶಿಕ್ಷಕರು ನೇಮಕಗೊಂಡಿರುವುದು ಕೊರತೆಯ ತೀವ್ರತೆಗೆ ಪೂರಕವಾಗಿದೆ.

### ಖಾಕಿ ಸಿಬ್ಬಂದಿ ಕೊರತೆ

ಪೊಲೀಸ್ ಇಲಾಖೆಯಲ್ಲೇ 17,479 ಹುದ್ದೆ ಖಾಲಿಯಿವೆ. 8717 ಹುದ್ದೆ ಭರ್ತಿಗೆ ಅನುಮತಿ ನೀಡಿದ್ದರೂ ಮೀಸಲು ವಿಚಾರವಾಗಿನ ಪ್ರಕರಣಗಳ ಹಿನ್ನೆಲೆಯಲ್ಲಿ ನೇಮಕದ ಅಧಿಸೂಚನೆ ಹೊರಡಿಸಿಲ್ಲ. ಈ ನಡುವೆ 4379 ಹುದ್ದೆ ನೇಮಕಾತಿ ಸಂಬಂಧ ಗೃಹ ಇಲಾಖೆಯು ಸರಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದು, ಹಣಕಾಸು ಇಲಾಖೆ ಅನುಮೋದನೆ ನಿರೀಕ್ಷೆಯಲ್ಲಿದೆ. ಇದು ಕೇವಲ ಉದಾಹರಣೆ.

### ಎ, ಬಿ, ಸಿ ಹುದ್ದೆ ಭರ್ತಿ?

ಸರಕಾರಿ ಸೇವೆಯಲ್ಲಿ ಖಾಲಿಯಿರುವ ಎ, ಬಿ, ಸಿ ವೃಂದದ ಹುದ್ದೆ ಭರ್ತಿ ಮಾಡಬೇಕೆಂಬುದು ಸಿಎಂ ಅವರ ಚಿಂತನೆ. ಈ ಸಂಬಂಧ ಆಗಾಗ್ಗೆ ಸೂಚನೆ ನೀಡುತ್ತಲೇ ಇದ್ದಾರೆ. 2025–26ನೇ ಸಾಲಿಗೆ 56,000 ಹುದ್ದೆ ಭರ್ತಿಗೆ ಹಣಕಾಸು ಇಲಾಖೆ ಅನುಮೋದನೆ ನೀಡಿದೆ. ನ್ಯಾಯಾಲಯದಲ್ಲಿನ ಪ್ರಕರಣಗಳು ಇತ್ಯರ್ಥವಾಗುತ್ತಿದ್ದಂತೆ ಅರ್ಜಿ ಆಹ್ವಾನ, ಇತರೆ ಪ್ರಕ್ರಿಯೆ ನಡೆಯಲಿದೆ.

### ನೇಮಕಕ್ಕೆ ಕ್ರಮ ಎಂದು?

ಮುಂದಿನ ಶೈಕ್ಷಣಿಕ ವರ್ಷಾರಂಭದ ಹೊತ್ತಿಗೆ 18,000 ಶಿಕ್ಷಕರ ನೇಮಕಕ್ಕೆ ಕ್ರಮ ಕೈಗೊಳ್ಳುವುದಾಗಿ ಶಿಕ್ಷಣ ಇಲಾಖೆ ಹೇಳುತ್ತಿದ್ದರೂ ಸದ್ಯಕ್ಕೆ ನೇಮಕದ ಲಕ್ಷಣ ಕಾಣುತ್ತಿಲ್ಲ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಕಾಲೇಜು ಹಾಗೂ ಯುವಿಸಿಇ ವಿವಿಗೆ ಒಟ್ಟು 2000 ಬೋಧಕರ ಹುದ್ದೆ ನೇಮಕಕ್ಕೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ. ಇನ್ನಷ್ಟೇ ಮುಂದಿನ ಪ್ರಕ್ರಿಯೆ ನಡೆಯಬೇಕಿದೆ.

## ವಿದೇಶಕ್ಕೆ ತೆರಳಿದ ಕಾಂಗ್ರೆಸ್ ಶಾಸಕರು..?

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸಿಎಂ ಸಿದ್ದರಾಮಯ್ಯ ಆಪ್ತ ಬಣದ ಹಲವು ಶಾಸಕರು ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಮೊದಲು ಸರ್ಕಾರಿ ಪ್ರಾಯೋಜಿತ ಟೂರ್ ಎಂದು ಹೇಳಲಾಗುತ್ತಿದ್ದರೂ ಇದೀಗ ಅವರು ಸ್ವಂತ ಖರ್ಚಿನಲ್ಲಿ ಹೋಗುತ್ತಿದ್ದಾರೆ ಎನ್ನಲಾಗಿದೆ. ಮಧ್ಯರಾತ್ರಿ 12.20ರ ವಿಮಾನದಲ್ಲಿ 11 ಶಾಸಕರು, ಎಂಎಲ್ಸಿಗಳು ವಿದೇಶಕ್ಕೆ ಹಾರಿದ್ದಾರೆ.

ಮಲೇಷಿಯನ್ ಏರ್‌ಲೈನ್ಸ್‌ನ ವಿಮಾನದಲ್ಲಿ ಶಾಸಕರು ತೆರಳಿದ್ದಾರೆ. ಆಸ್ಟ್ರೇಲಿಯಾಗೆ ನೇರ ವಿಮಾನ ಇಲ್ಲದ್ದರಿಂದ ಟ್ರಾನ್ಸಿಟ್ ಫ್ಲೈಟ್ ಮೂಲಕ ಹೋಗುತ್ತಿದ್ದಾರೆ. ಬೆಂಗಳೂರಿನಿಂದ ಮಲೇಷ್ಯಾ ರಾಜಧಾನಿ ಕೌಲಾಲಂಪುರಕ್ಕೆ ತೆರಳುವ ಶಾಸಕರು, ಅಲ್ಲಿಂದ ಆಸ್ಟ್ರೇಲಿಯಾಗೆ ಪ್ರಯಾಣ ಬೆಳೆಸುತ್ತಾರೆ. ದೇವೇಂದ್ರಪ್ಪ, ಜಗಳೂರು ಶಾಸಕ, ಹೆಚ್.ಡಿ ತಮ್ಮಯ್ಯ, ಚಿಕ್ಕಮಗಳೂರು ಶಾಸಕ, ಹಂಪನಗೌಡ ಬಾದರ್ಲಿ, ಸಿಂಧನೂರು ಶಾಸಕ, ಪುಟ್ಟರಂಗಶೆಟ್ಟಿ, ಚಾಮರಾಜನಗರ ಶಾಸಕ, ಬಿ.ಎಂ ನಾಗರಾಜ್, ಸಿರಗುಪ್ಪ ಶಾಸಕ, ವಸಂತ್ ಕುಮಾರ್, ಎಂಎಲ್ಸಿ, ನಾಗರಾಜ್ ಯಾದವ್, ಎಂಎಲ್ಸಿ, ಡಾ. ಡಿ. ತಿಮಯ್ಯ, ಎಂಎಲ್ಸಿ ಇತರರು ಹೋಗಿದ್ದಾರೆ.

## ಉತ್ತಮ ಸಾಧನೆಗೆ ಕ್ರೀಡೆ ಸಹಕಾರಿ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ




ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಸಾಧನೆ ಮಾಡಬೇಕಾದರೆ ಕ್ರೀಡಾ ಕ್ಷೇತ್ರ ಸಹಕಾರಿಯಾಗಿದೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದ್ದಾರೆ.

ಪಟ್ಟಣದ ಹೊರ ವಲಯದ ಸಾಯಿ ಮಂದಿರ ಹತ್ತಿರದಲ್ಲಿ ಶ್ರೀನಿವಾಸ ದುದಗುಂಡಿ ಅವರ ವತಿಯಿಂದ ಆಯೋಜಿಸಿದ್ದ ಚಿಟಗುಪ್ಪ ಪ್ರಿಮಿಯರ್ ಲೀಗ್ 07 ಕ್ರಿಕೆಟ್ ಟೂರ್ನಮೆಂಟ್ ವಿಜೇತ ತಂಡಕ್ಕೆ ಬಹುಮಾನ, ಟ್ರೋಫಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಕ್ರೀಡೆಯಲ್ಲಿ ಸೋಲು–ಗೆಲವು ಸಹಜ. ಆದರೆ ಸೋಲಿನಿಂದ ಯಾರು ಕೂಡಾ ಹತಾಶೆ ಆಗಬಾರದು. ಮುಂದಿನ ಗೆಲುವಿಗಾಗಿ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದ್ದಾರೆ.

## ಯತ್ನಾಳ್ ಜೊತೆ ಕಾಣಿಸಿದ್ರೆ ಕ್ರಮ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ





ಬಿಜೆಪಿಯ ಪಾಲಿಕೆ ಸದಸ್ಯರು ಪಕ್ಷದಿಂದ ಉಚ್ಛಾಟಿತರಾಗಿರುವ ಶಾಸಕ ಯತ್ನಾಳ್ ಅವರ ಜೊತೆ ಗುರುತಿಸಿಕೊಂಡರೆ ಖಂಡಿತವಾಗಿಯೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಎಚ್ಚರಿಕೆ ನೀಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿ ಸದಸ್ಯರು ಪಕ್ಷ ಉಚ್ಛಾಟಿಸಿದವರ ಜೊತೆ ಕಾಣಿಸಿಕೊಳ್ಳುವುದು ಸರಿಯಲ್ಲ. ಬಿಎಸ್‌ಯಡಿಯೂರಪ್ಪ, ಬಿವೈವಿಜಯೇಂದ್ರ ಬಗ್ಗೆ ಶಾಸಕ ಯತ್ನಾಳ್ ಟೀಕೆ ಸಲ್ಲ. ಪದೇ ಪದೆ ಹೇಳಿಕೆ ನೀಡುವುದು ಶೋಭೆ ತರಲ್ಲಎಂದು ನುಡಿದಿದ್ದಾರೆ.

ವಿಜಯೇಂದ್ರ ಪಕ್ಷದ ರಾಜ್ಯಾಧ್ಯಕ್ಷರಾಗಿ ಸಿಎಂ ಆಗುವ ಹಂತಕ್ಕೆ ಬಂದಿದ್ದಾರೆ. ಆದರೆ, ನಮ್ಮ ಪಕ್ಷದಲ್ಲಿಯೇ ಇರದ ಯತ್ನಾಳರು ತಾವು ಸಿಎಂ ಆಗುತ್ತೇನೆ ಎಂದು ಹೇಳುವುದು ಹಾಸ್ಯಾಸ್ಪದವಾಗಿದೆ. ಯಡಿಯೂರಪ್ಪನವರೇ ನನ್ನನ್ನು ಬೆಳೆಸಿದರು, ಬಿಜೆಪಿಗೆ ಕರೆದು–ಕೊಂಡು ಬಂದಿದ್ದರು ಎಂದು ಹೇಳಿಕೆ ನೀಡಿದ್ದೀರಿ. ಈಗ ಅಂತಹವರ ವಿರುದ್ಧ ಹೇಳಿಕೆ ನೀಡುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ. ಸಾವಿರ ದಿನದ ಸಾಧನೆ ಮಾಡುತ್ತಿರುವ ರಾಜ್ಯದ ಸರ್ಕಾರ ಸಾವಿರ ಸಮಸ್ಯೆ ಹುಟ್ಟುಹಾಕಿದೆ. ಈಗ ಬಜೆಟ್ ತಯಾರಿಯಲ್ಲಿ ಇದ್ದು, ವಿಜಯಪುರ ಜಿಲ್ಲೆಯ ಸಮಸ್ಯೆ ಬಗ್ಗೆ ಚರ್ಚೆ ಅಗತ್ಯ ಇದೆ. ಈ ನಿಟ್ಟಿನಲ್ಲಿ ಎಂ.ಬಿ.ಪಾಟೀಲ, ಶಿವಾನಂದ ಪಾಟೀಲ ಪಕ್ಷಾತೀತವಾಗಿ ಸಭೆ ಕರೆಯಬೇಕು ಎಂದು ಒತ್ತಾಯಿಸಿದ್ದಾರೆ.

ಬಿಜೆಪಿ ಮುಖಂಡ ಡಾ.ಸುರೇಶ ಬಿರಾದಾರ, ಚಿದಾನಂದ ಚಲವಾದಿ, ವಿಜಯ ಜೋಶಿ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಮುಷ್ಕರ: ಬಸ್ ಸೇವೆ ಅಬಾಧಿತ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಸಾರಿಗೆ ನೌಕರರು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರದ ಗಮನ ಸೆಳೆಯಲು ಬೆಂಗಳೂರು ಚಲೊ ನಡೆಸುತ್ತಾರೆ. ಬಸ್ ಸೇವೆಯನ್ನು ಸ್ಥಗಿತಗೊಳಿಸುವುದಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.


ಸುದ್ದಿಗಾರರೊಂದಿಗೆ ಮಾತನಾಡಿ, ಮುಷ್ಕರಕ್ಕೆ ಕರೆ ನೀಡಿರುವ ನಾಲ್ಕು ಸಾರಿಗೆ ನಿಗಮಗಳ ಸಂಘಟನೆಗಳ ಮುಖಂಡರ ಜೊತೆ ಮಾತುಕತೆ ನಡೆಸುವಂತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಅವರಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ.

### ಸಾರಿಗೆ ನೌಕರರ ವಿರುದ್ಧ ಎಸ್ಮಾ ಜಾರಿಯ ಸಾಧ್ಯತೆ.?

**ಸರ್ಕಾರದ ನಿಯಮ ಉಲ್ಲಂಘಿಸಿ ತಮ ಬೇಡಿಕೆಗಳ ಈಡೇರಿಕೆಗಾಗಿ ಕರ್ತವ್ಯಕ್ಕೆ ಹಾಜರಾಗದೇ ಮುಷ್ಕರದಲ್ಲಿ ಪಾಲ್ಗೊಳ್ಳುವ ಸಾರಿಗೆ ನೌಕರರ ವಿರುದ್ಧ ಅಗತ್ಯ ಸೇವಾ ನಿರ್ವಹಣಾ ಕಾಯ್ದೆ (ಎಸ್ಮಾ) ಜಾರಿ ಮಾಡುವ ಬಗ್ಗೆಯೂ ಚಿಂತನೆ ನಡೆದಿದೆ. ಇಂದು ನಡೆಯಲಿರುವ ಸಾರಿಗೆ ಇಲಾಖೆ ನೌಕರರ ಮುಷ್ಕರದಲ್ಲಿ ಪಾಲ್ಗೊಳ್ಳುವವರಿಗೆ ನೋ ವರ್ಕ್, ನೋ ಪೇ (ಕೆಲಸಕ್ಕೆ ಬಾರದಿದ್ದರೆ ವೇತನವಿಲ್ಲ) ಜಾರಿ ಮಾಡಲಾಗಿದೆ.**

## ಪತ್ರಕರ್ತರ ಕಾರ್ಯವ್ಯಾಪ್ತಿಗೆ ನಿಯಮ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ವಿಧಾನಸೌಧದಲ್ಲಿ ಮಾಧ್ಯಮ ಪ್ರತಿನಿಧಿಗಳ ಕಾರ್ಯವ್ಯಾಪ್ತಿಯನ್ನು ನಿರ್ಬಂಧಿಸುವ ಕುರಿತು ವಾರ್ತಾ ಇಲಾಖೆಗೆ ಸರ್ಕಾರ ಪತ್ರ ಬರೆದಿದೆ. ಪತ್ರದಲ್ಲಿ, ಮಾಧ್ಯಮಗಳು ರಾಜಕೀಯ ನಾಯಕರ ಪ್ರತಿಕ್ರಿಯೆಗಳನ್ನು ಪೋರ್ಟಿಕೋ ಅಥವಾ ಕೆಂಗಲ್‌ಗೇಟ್ ಬಳಿಯ ನಿಗದಿತ ಸ್ಥಳದಲ್ಲಿ ಮಾತ್ರ ತೆಗೆದುಕೊಳ್ಳಬೇಕು. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು ಅಥವಾ ಶಾಸಕರನ್ನು ವಿಧಾನಸೌಧದ ಇತರ ಯಾವುದೇ ಸ್ಥಳದಲ್ಲಿ ಹಿಂಬಾಲಿಸಿ ಪ್ರತಿಕ್ರಿಯೆ ತೆಗೆದುಕೊಳ್ಳಬಾರದು ಎಂದು ನಿಯಮ ತಂದಿದೆ.

ಸರ್ಕಾರದ ಈ ನಡೆ ಮಾಧ್ಯಮ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಖಂಡಿಸಿದ್ದಾರೆ. ಮಾಧ್ಯಮಗಳು ಜನರ ಮತ್ತು ಸರ್ಕಾರದ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ. ಕಳೆದ ವಾರ ವಿಧಾನಸೌಧದಲ್ಲಿ ನಡೆದ ಭದ್ರತಾ ಲೋಪಗಳನ್ನು ಮಾಧ್ಯಮಗಳ ಮೇಲೆ ನಿಯಂತ್ರಣ ಹೇರಲು ನೆಪವಾಗಿ ಬಳಸಲಾಗುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

**ರಾಜ್ಯದ ಕಾಂಗ್ರೆಸ್ ಸರಕಾರವು ವಿಧಾನಸೌಧದ ಒಳಗೆ ಮಾಧ್ಯಮಗಳಿಗೆ ನಿರ್ಬಂಧ ಹೇರಿದ್ದು, ಇದು ಪ್ರಜಾಪ್ರಭುತ್ವ ಮತ್ತು ವಾಕ್ ಸ್ವಾತಂತ್ರ್ಯದ ಮೇಲಿನ ದಾಳಿ: ಶಾಸಕ ಎಸ್.ಆರ್.ವಿಶ್ವನಾಥ್**

# ಶ್ರೀ ರೇಣುಕಾಚಾರ್ಯ ಜಯಂತಿ ವಿಜೃಂಭಣೆಯಿಂದ ಆಚರಿಸೋಣ: ಎಡಿಸಿ



• ಮಲ್ಲಮ್ಮ ನುಡಿ ವಾರ್ತೆ, ಬೀದರ

ಮಾರ್ಚ.1ರಂದು ಜರುಗಲಿರುವ ರೇಣುಕಾಚಾರ್ಯ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸೋಣ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಬಿ.ಕರಾಳೆ ತಿಳಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಾರ್ಚ 1ರಂದು ಜರುಗುವ ರೇಣುಕಾಚಾರ್ಯ ಜಯಂತಿ ಅಂಗವಾಗಿ ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬೆಳಿಗ್ಗೆ 9 ಗಂಟೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ 9.30 ಗಂಟೆಗೆ ಗಣೇಶ ಮೈದಾನದಿಂದ ಮೆರವಣಿಗೆ ಪ್ರಾರಂಭಗೊಂಡು ಶಿವಾಜಿ ವೃತ್ತ, ಭಗತಸಿಂಗ ವೃತ್ತ, ಬಸವೇಶ್ವರ ವೃತ್ತ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತ, ಜನರಲ್ ಕರಿಯಪ್ಪ ವೃತ್ತದಿಂದ ಮಾರ್ಗವಾಗಿ ಡಾ.ಚನ್ನಬಸವ ಪಟ್ಟದೇವರು ರಂಗಮಂದಿರಕ್ಕೆ ತಲುಪಲಿದೆ. ನಂತರ ಮಧ್ಯಾಹ್ನ 12 ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದರು.

ಮಾರ್ಚ.1 ರಂದು ಶಾಲಾ ಕಾಲೇಜುಗಳಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಎಲ್ಲಾ ಅಧಿಕಾರಿ, ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಮೆರವಣಿಗೆ ನಡೆಯುವ ಸ್ಥಳಗಳಲ್ಲಿ ಸ್ವಚ್ಚತೆ ಹಾಗೂ ಭಾವಚಿತ್ರ ಮೆರವಣಿಗೆ ವಾಹನಕ್ಕೆ ಅಲಂಕಾರ, ಕುಡಿಯುವ ನೀರಿನ ವ್ಯವಸ್ಥೆ, ಎಲ್ಲಾ ವೃತ್ತಗಳ ಮೇಲೆ ದೀಪಾಲಂಕಾರ ವ್ಯವಸ್ಥೆ ಮಾಡುವಂತೆ ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು. ಹಾಗೂ ಮೆರವಣಿಗೆ ಹೋಗುವ ಸ್ಥಳಗಳಲ್ಲಿ ಪೊಲೀಸ್ ಇಲಾಖೆ ಬಂದೋಬಸ್ತ ವ್ಯವಸ್ಥೆ ಕಲ್ಪಿಸಬೇಕೆಂದರು.

ಈ ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರ,ಡಾ.ರಾಜಶೇಖರ ಶಿವಾಚಾರ್ಯರು, ಸಿದ್ರಾಮಯ್ಯಾ ಸ್ವಾಮಿ, ಶಿವಯ್ಯ ಸ್ವಾಮಿ,ಮಾಹಾಂತೇಶ ಬಿರಾದರ, ಶಿವಕುಮಾರ ಪಾಟೀಲ,ಶಿವಶರಣಪ್ಪಾ ವಾಲಿ, ಮಹೇಶ ಪಾಟೀಲ್, ವಿಜಯಕುಮಾರ ಸೋನಾರೆ ಸೇರಿದಂತೆ ಸಮಾಜದ ಮುಖಂಡರು,ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಇಂದಿನಿಂದ ಜಗದ್ಗುರು ರೇವಣಸಿದ್ದೇಶ್ವರ ಜಾತ್ರಾ ಮಹೋತ್ಸವ ಆರಂಭ



• ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ

ಪಟ್ಟಣದ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಜಾತ್ರಾ ಮಹೋತ್ಸವ ಮತ್ತು ದ್ವಿತೀಯ ರಥೋತ್ಸವ ಅಂಗವಾಗಿ ಇಂದಿನಿಂದ ಆರಂಭವಾಗಿ ಮಾರ್ಚ 1ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಡಗರ ಸಂಭ್ರಮದಿಂದ ಜರುಗಲಿವೆ. ಚಾಂಗಲೇರಾ ಮತ್ತು ಚಿಟಗುಪ್ಪ ಹಿರೇಮಠದ ಪೂಜ್ಯ ಗುರುಲಿಂಗ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಇಂದಿನಿಂದ ಮಾರ್ಚ 1ರ ವರೆಗೆ ಪ್ರತಿ ದಿನ ಸಾಯಂಕಾಲ 7ಘಂಟೆಯಿಂದ 9ಘಂಟೆ ವರೆಗೆ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಶ್ರೀ ಮಲ್ಲಮಾಂಬೆ ಮಹಾಪುರಾಣ ಜರುಗಲಿದೆ.

ಪುರಾಣಿಕರು: ವೇ. ಮಡಿವಾಳಯ್ಯಾ ಶಾಸ್ತ್ರಿಗಳು ಜೇರಟಗಿ, ಸಂಗೀತ : ವೇ. ವೀರಭದ್ರಯ್ಯಾ ಕಟ್ಟಿಸಂಗಾವಿ, ತಬಲಾ: ರಾಜಶೇಖರ ಕಟ್ಟಿಸಂಗಾವಿ. ಫೆಬ್ರವರಿ 26ರಂದು ಸಾಯಂಕಾಲ 4 ಘಂಟೆಗೆ ಶ್ರೀಶ್ರೀಶ್ರೀ 1008 ಜಗದ್ಗುರು ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ರಾಹುಲ ಪದವಿ ವಿಧಾಷಿತ ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಶೇದಾರ ಮಹಾಪೀರ ಸನ್ನಿಧಿಯರವರ ಭವ್ಯ ಅಡ್ಡಪಲ್ಲಕ್ಕಿ ಉತ್ಸವ ಪಟ್ಟಣದ ಗಣೇಶ ಮಂದಿರದಿಂದ ಜಗದ್ಗುರು ರೇವಣಸಿದ್ದೇಶ್ವರ ದೇವಸ್ಥಾನಕ್ಕೆ ತಲಪುವುದು ನಂತರ ಧರ್ಮ ಸಭೆ ಜರುಗಲಿದೆ. ಫೆಬ್ರವರಿ 27ರಂದು ಬೆಳಿಗ್ಗೆ 8 ಘಂಟೆಗೆ ಶ್ರೀಶ್ರೀಶ್ರೀ 1008 ಜಗದ್ಗುರು ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ರಾಹುಲ ಪದವಿ ವಿಭೂಷಿತ ಭೀಮಾ ಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಕೇದಾರ ಮಹಾಪೀರ ಸನ್ನಿಧಿಯವರ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ನಂತರ ಮಹಾ ಪ್ರಸಾದ ಇರುತ್ತದೆ. ಫೆಬ್ರವರಿ 28ರಂದು ರಾತ್ರಿ 8 ಗಂಟೆಗೆ ಸಕಲ ಸದ್ಭಕ್ತ–ರಿಂದ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ ಪಲ್ಲಕ್ಕಿ ಉತ್ಸವ ಪಾದ ಗಟ್ಟೆಯವರೆಗೆ ಜರಗುವುದು ನಂತರ ಮಹಾ ಪ್ರಸಾದ ಇರುತ್ತದೆ. ಮಾರ್ಚ್ 1ರಂದು ಸಾಯಂಕಾಲ 4ಗಂಟೆಗೆ ಪುರಾಣ ಮಂಗಲ, ಸಮಾರೋಪ ಸಮಾರಂಭ ಮತ್ತು ಸಾಯಂಕಾಲ 6:30 ಗಂಟೆಗೆ ಮಹಾ ರಥೋತ್ಸವ ಜರುಗಲಿದೆ. ರಾತ್ರಿ 7:30 ಘಂಟೆಗೆ ಗಂಗಾವತಿ ಪ್ರಾಣೇಶ ಹಾಗೂ ಅವರ ಸಂಗಡಿಗರಿಂದ "ನಗೆ ಹಬ್ಬ" ಮನೋರಂಜನೆ ಕಾರ್ಯಕ್ರಮ ಜರುಗಲಿವೆ ಎಂದು ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ವಿಜಯಕುಮಾರ ಬೊಮ್ಮಣಿ ಹಾಗೂ ಪದಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯೋಗವು ದೈನಂದಿನ ಜೀವನದ ಭಾಗವಾಗಲಿ: ಗೋರಖನಾಥ



• ಮಲ್ಲಮ್ಮ ನುಡಿ ವಾರ್ತೆ, ಬೀದರ

ಯೋಗವು ನಿರಂತರವಾಗಿ ಮಾಡುವುದರಿಂದ ದೈಹಿಕ,ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಹೆಚ್ಚಿಸಲು ಉಪಯುಕ್ತವಾಗುತ್ತದೆ ಈ ನಿಟ್ಟಿನಲ್ಲಿ ಯೋಗವು ಪ್ರತಿಯೊಬ್ಬರ ಜೀವನದ ಭಾಗವಾಗಲಿ ಎಂದು ಯೋಗಗುರು ಗೋರಖನಾಥ ಕುಂಬಾರ ಹೇಳಿದರು.

ನಗರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಆವರಣದಲ್ಲಿನ ವಿವೇಕಾನಂದ ಆರೋಗ್ಯ ಧಾಮದಲ್ಲಿ ಮೂರು ದಿನಗಳ ಕಾಲ ಹಮ್ಮಿಕೊಂಡ ಯೋಗ ಹಾಗೂ ಸೌಂಡ್ ಹಿಲಿಂಗ್ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯೋಗ ಹಾಗೂ ಸೌಂಡ್ ಹೀಲಿಂಗ್ ಪದ್ಧತಿಯು ಯೋಗ ಮತ್ತು ಧ್ವನಿ ಚಿಕಿತ್ಸೆಯ ಸಂಯೋಜನೆಯಾಗಿದ್ದು ಪುನಶ್ಚೈತನ್ಯಕಾರಿ ಶಬ್ದಗಳು ಮತ್ತು ಸಾವಧಾನಿಕ ಚಲನೆಗಳ ಮೂಲಕ ದೇಹದಲ್ಲಿ ಸಮತೋಲನವನ್ನು ಹೆಚ್ಚಿಸುತ್ತದೆ.


ಸೌಂಡ ಹಿಲಿಂಗ್ ಯೋಗಾಭ್ಯಾಸವು ಬಟ್ಟಲುಗಳು, ಗಾಂಗ್‌ಗಳು, ಚೈಮ್ಸ್ ಮತ್ತು ಟ್ಯೂನಿಂಗ್ ಫೋರ್ಕ್‌ಗಳಂತಹ ವಾದ್ಯಗಳಿಂದ ಬರುವ ಧ್ವನಿ ಕಂಪನಗಳೊಂದಿಗೆ ಬೆರೆಸುವ ಅಭ್ಯಾಸವಾಗಿದೆ ಇದ–ರಿಂದ ದೇಹ, ಮನಸ್ಸು ಮತ್ತು ಆತ್ಮದೊಂದಿಗೆ ಪ್ರತಿಧ್ವನಿಸುವ ಕಂಪನಗಳನ್ನು ಸೃಷ್ಟಿಯಾಗುತ್ತವೆ ಜೊತೆಗೆ ಉಸಿರಾಟದ ಪ್ರಕ್ರಿಯೆ ಮತ್ತು ಒತ್ತಡದಿಂದ ಮುಕ್ತಿಗೊಂಡು ದೇಹಕ್ಕೆ ಬೇಕಾದ ವಿಶ್ರಾಂತಿ ಕೂಡ ಸಿಗುತ್ತದೆ ಎಂದರು.

ವಿವೇಕಾನಂದ ಆರೋಗ್ಯಧಾಮ ಪ್ರಮುಖರಾದ ಜಗದೀಶ ಮುಖೇಡಕರ್ ಮಾತನಾಡಿ ಯೋಗ ಶಿಬಿರಗಳು ಜಿಲ್ಲೆಯ ಎಲ್ಲಾ ಕಡೆ ನಡೆಯುತ್ತಿರಬೇಕು ನಮ್ಮದೆ ಆದ ಯೋಗ,ಆಯುರ್ವೇದ,ಪ್ರಾಕೃತಿಕ ಚಿಕಿತ್ಸಾ ಪದ್ಧತಿಯನ್ನ ಇನ್ನಷ್ಟು ಪ್ರಚಾರ ಪ್ರಸಾರಗೋಳಿಸಬೇಕಿದೆ ಈ ನಿಟ್ಟಿನಲ್ಲಿ ಯೋಗಗುರು ಗೋರಖನಾಥ ಕುಂಬಾರ ಅವರು ಜಿಲ್ಲೆಯಾದ್ಯಂತ ಇವೆಲ್ಲವುಗಳ ಕುರಿತು ಜಾಗೃತಿ ಮೂಡಿಸಲು ಅಹರ್ನಿಶಿಯಾಗಿ ಶ್ರಮಿಸುತ್ತಿರುವುದು ಅತ್ಯಂತ ಶ್ಲಾಘನೀಯ ಮತ್ತು ಪ್ರೇರಣದಾಯಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ಡಾ.ಗಂಗಾಬಿಕಾ ರೋಟ್ಟೆ, ಚಿಂತನ ತ್ರೀವೆದಿ, ಲೀನಾ ತ್ರೀವೆದಿ, ಸೋಹಾನಿ ಕುಮಾರಿ, ಸಚೀನ ಸೋಲಪುರೆ, ರತಿಕಾಂತ ಜೋಜನಾ, ಆನಂದ ರೆಡ್ಡಿ, ರಾಘವೇಂದ್ರರೆಡ್ಡಿ ಸೇರಿದಂತೆ ಇತರರಿದ್ದರು.

## ಹಣ ದುರ್ಬಳಕೆ ಆರೋಪ:

# ಗೋರಚಿಂಚೋಳಿ ಗ್ರಾ, ಪಂ, ವಿರುದ್ಧ ದೂರು



• ಮಲ್ಲಮ್ಮ ನುಡಿ ವಾರ್ತೆ, ಬೀದರ

ಭಾಲ್ಕಿ ತಾಲೂಕಿನ ಗೋರಚಿಂಚೋಳಿ ಗ್ರಾಮ ಪಂಚಾಯತಿಯಲ್ಲಿ 15ನೇ ಹಣಕಾಸು ಯೋಜನೆ ಸೇರಿದಂತೆ ವಿವಿಧ ಕಾಮಗಾರಿಗಳಲ್ಲಿ ಸಾರ್ವಜನಿಕ ಹಣ ದುರ್ಬಳಕೆ ನಡೆದಿದೆ ಎಂದು ಆರೋಪಿಸಿ ಡಾ.ಬಿ.ಆರ್. ಅಂಬೇಡ್ಕರ್ ಯೂತ್ ಬ್ರಿಗೇಡ್ ಸಂಘಟನೆಯು ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದೆ.

ಮನವಿ ಪತ್ರದಲ್ಲಿ, ಗ್ರಾಮ ಪಂಚಾಯತಿಯಲ್ಲಿ 15ನೇ ಹಣಕಾಸು ಯೋಜನೆಯ ಅನುದಾನವನ್ನು ನಿಯಮ ಬಾಹಿರವಾಗಿ ಬಳಸಲಾಗಿದೆ ಎಂಬ ಆರೋಪದ ಜೊತೆಗೆ, ಕರ ವಸೂಲಿಗಾರ ಬಾಲಾಜಿ ಅವರ ಖಾತೆಗೆ ಸಂಶಯಾಸ್ಪದವಾಗಿ ಹಣ ಜಮಾ ಆಗಿರುವ ಕುರಿತು ಉಲ್ಲೇಖಿಸಲಾಗಿದೆ. ದಿ.12–06–2025 ರಂದು ಕರ ವಸೂಲಿಗಾರರ ಖಾತೆಗೆ ರೂ.64,540/– ಜಮಾ ಆಗಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದು ಸಂಘಟನೆ ತಿಳಿಸಿದೆ.

ಇದಲ್ಲದೆ, ಕರ ವಸೂಲಿಗಾರರ ನೇಮಕಾತಿಯಲ್ಲಿ ಸುಳ್ಳು ದಾಖಲೆಗಳ ಆಧಾರದಲ್ಲಿ ಅಕ್ರಮ ನಡೆದಿದೆ ಎಂಬ ಶಂಕೆಯೂ ವ್ಯಕ್ತವಾಗಿದೆ. ಈ ಎಲ್ಲ ವಿಷಯಗಳ ಕುರಿತು ನೇರ ಹಾಗೂ ಸಮಗ್ರ ತನಿಖೆ ನಡೆಸಿ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಂಘಟನೆ ಒತ್ತಾಯಿಸಿದೆ.

ಸಾರ್ವಜನಿಕ ಹಣದ ದುರ್ಬಳಕೆ ನಡೆದಿದೆ ಎಂಬ ಶಂಕೆಯ ಹಿನ್ನೆಲೆಯಲ್ಲಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಕಆಔ), ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಕರ ವಸೂಲಿಗಾರರ ವಿರುದ್ಧ ಗ್ರಾಮಸ್ಥರ ಪರವಾಗಿ ಈ ದೂರು ಸಲ್ಲಿಸಲಾಗಿದೆ ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಸಂಘಟನೆಯ ಅಧ್ಯಕ್ಷ ಉದಯ ನಾಯಕ್, ಜಿಲ್ಲಾ ಖಜಾಂಚಿ ಗೌತಮ್ ಬೋಸ್ಲೆ, ತಾಲೂಕಾಧ್ಯಕ್ಷ ಗೋಪಾಲ್ ಸೂರ್ಯವಂಶಿ, ಸತೀಶ್ ಲಕ್ಕಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಲಿಂಗತ್ವ, ಲೈಂಗಿಕ ಅಲ್ಪಸಂಖ್ಯಾತರಿಗಾಗಿ ಬಜೆಟ್‌ನಲ್ಲಿ 200 ಕೋಟಿ ಅನುದಾನ ಮೀಸಲಿಡಿ: ಭೀಮಾ



• ಮಲ್ಲಮ್ಮ ನುಡಿ ವಾರ್ತೆ, ಬೀದರ

2026–2027ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಕನಿಷ್ಠ –200 ಕೋಟಿಯನ್ನು ತಕ್ಷಣ ಮೀಸಲಿಡುವಂತೆ ಎಮ್.ಜಿ.ಎಶ್.ಪಿ ಸದಸ್ಯರಾದ ಭೀಮಾ ಹೇಳಿದರು.

ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿ ವತಿಯಿಂದ ಬುಧವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯುದ್ದೇಶಿಸಿ ಮಾತನಾಡಿರುವ ಅವರು, ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮೊದಲು ಕಾಂಗ್ರೆಸ್ ಸರ್ಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ವಾರ್ಷಿಕ 200 ಕೋಟಿ ಮೀಸಲಿಡುವುದಾಗಿ ಘೋಷಿಸಿತ್ತು. ಆದರೆ ಈಗ ಆ ವಾಗ್ದಾನವನ್ನು ನೈಜವಾಗಿ ಅನುಷ್ಠಾನಗೊಳಿಸಬೇಕಾದ ಹೊಣೆಗಾರಿಕೆಯಿಂದ ಸರ್ಕಾರ ಹಿಂದೆ ಸರಿಯಬಾರದು ಎಂದು ಹೇಳಿದರು. 2026ರ ಮಾರ್ಚ್ ಮೊದಲ ವಾರದಲ್ಲಿ ಆರಂಭವಾಗಲಿರುವ ಬಜೆಟ್ ಅಧಿವೇಶನದಲ್ಲಿ ಈ ಸಮುದಾಯಕ್ಕಾಗಿ ಪ್ರತ್ಯೇಕ ಮತ್ತು ಕಡ್ಡಾಯ ಅನುದಾನ ಘೋಷಿಸಲೇಬೇಕು ಎಂದು ಅವರು ಒತ್ತಾಯಿಸಿದರು.

ಕರ್ನಾಟಕ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವನ್ನು ತಕ್ಷಣ ಸ್ಥಾಪಿಸುವುದು, ಸಮುದಾಯದ ಸದಸ್ಯರಿಗೆ ವಸತಿ, ಹಾಸ್ಟೆಲ್ ಹಾಗೂ ಶಾರ್ಟ್ ಸ್ಟೇ ಹೋಮ್‌ಗಳನ್ನು ತಕ್ಷಣ ಒದಗಿಸಬೇಕು, ಪ್ರತಿ ವರ್ಷ ಕನಿಷ್ಠ 500 ಮನೆಗಳನ್ನು ಹಂಚಿಕೆ ಮಾಡಬೇಕು ಎಂದು ಆಗ್ರಹಿಸಿದರು. ಜೀವನೋಪಾಯ ಮತ್ತು ಸಾಮಾಜಿಕ ಭದ್ರತೆ ಅಡಿ

ಕೃಷಿಯಲ್ಲಿ ಆಸಕ್ತಿ ಹೊಂದಿರುವವರಿಗೆ 2 ಎಕರೆ ಕೃಷಿಯೋಗ್ಯ ಭೂಮಿಯನ್ನು ನೀಡುವುದು, ಗೋಮಾಳ ಜಮೀನನ್ನು ಗುತ್ತಿಗೆ ಆಧಾರದಲ್ಲಿ ಹಂಚಿಕೆ ಮಾಡುವುದು, ಉದ್ಯಮಶೀಲತೆಗೆ ಬ್ಯಾಂಕ್–ಲಿಂಕ್ ಯೋಜನೆಯಡಿ ಪ್ರತಿ ವ್ಯಕ್ತಿಗೆ 2 ಲಕ್ಷ ಸಬ್ಸಿಡಿ ನೀಡಬೇಕು ಎಂದು ಒತ್ತಾಯಿಸಿದರು.

ಸ್ವಸಹಾಯ ಗುಂಪುಗಳ ಬಲಪಡಿಸಲು ಅನುದಾನ, ಬಡ್ಡಿರಹಿತ ಸಾಲ, ಮೈತ್ರಿ ಪಿಂಚಣಿಯನ್ನು ತಿಂಗಳಿಗೆ 2,000ಕ್ಕೆ ಹೆಚ್ಚಿಸುವುದು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ 5,000 ವೃದ್ಧಾಪ್ಯ ಪಿಂಚಣಿ ನೀಡಬೇಕು, .ಸರ್ಕಾರಿ ಉದ್ಯೋಗಗಳಲ್ಲಿ ಘೋಷಿಸಿರುವ 1% ಮೀಸಲಾತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಮತ್ತು ಕೋಚಿಂಗ್ ಒದಗಿಸಬೇಕು ಎಂದರು. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಲಿಂಗತ್ವ ದೃಢೀಕರಣ ಶಸ್ತ್ರಚಿಕಿತ್ಸೆಗಳನ್ನು ಜಾರಿಗೊಳಿಸಬೇಕು. ಶಸ್ತ್ರಚಿಕಿತ್ಸೆಯ ನಂತರ ಕನಿಷ್ಠ 6 ತಿಂಗಳು ಪ್ರತಿ ತಿಂಗಳು 5,000 ಪುನರ್ವಸತಿ ನೆರವು ನೀಡಬೇಕು. ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಒಂದು ವಿಶೇಷ ಆರೋಗ್ಯ ಕೇಂದ್ರವನ್ನು ತೆರೆಯಬೇಕು ಎಂದ ಅವರು, ಈ ವರ್ಷದ ಬಜೆಟ್ ನಲ್ಲಿ 200 ಕೋಟಿ ಘೋಷಿಸದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸುವುದಾಗಿ ಭೀಮಾ ಹೇಳಿದರು.

ಬುದ್ದ ಬೆಳಕು ಟ್ರಸ್ಟ್ ಅಧ್ಯಕ್ಷ ಮಹೇಶ ಗೋರನಾಳಕರ್ ಹಾಗೂ ಸಾಹಿತಿ ಜಗದೀಶ್ವರ ಬಿರಾದಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದರು.

# ಪರಿಶಿಷ್ಟ ಜಾತಿ ಮಹಿಳಾ ಸ್ವ-ಸಹಾಯ

## ಗುಂಪು/ಸದಸ್ಯರಿಂದ ಸಾಲ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ದೀನ್ ದಯಾಳ್ ಜನ ಅಜೀವಿಕ ಯೋಜನೆ–ಶಹರಿ (ಡಿಜೆಎವೈ–ಎಸ್) ಅಡಿಯಲ್ಲಿ 2025–26ನೇ ಸಾಲಿಗೆ ಎಸ್.ಸಿ.ಎ. ಮತ್ತು ಎಸ್.ಸಿ.ಎಸ್.ಪಿ. ಕಾರ್ಯಕ್ರಮಗಳನ್ನು ಆಯೋಜಿಸಲು ಜಿಲ್ಲಾವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗದಿಪಡಿಸಿ, ಪರಿಶಿಷ್ಟ ಜಾತಿ ಮಹಿಳಾ ಸ್ವ–ಸಹಾಯ ಗುಂಪು/ಸದಸ್ಯರಿಂದ ಸಾಲ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ. ಸ್ವ–ಸಹಾಯ ಗುಂಪು/ಸದಸ್ಯರು ಕ್ರಿಯಾತ್ಮಕ ಸದಸ್ಯರಾಗಿರಬೇಕು. ಫಲಾನುಭವಿಗಳು ಪರಿಶಿಷ್ಟ ಜಾತಿಗೆ ಸೇರಿದ ಮಹಿಳಾ ಸ್ವ–ಸಹಾಯ ಗುಂಪಿನ ಸದಸ್ಯರಾಗಿರಬೇಕು. ತಹಸೀಲ್ದಾರರಿಂದ ಪಡೆದ ಜಾತಿ ಪ್ರಮಾಣಪತ್ರ (ಆರ್.ಡಿ. ನಂ.) ಹೊಂದಿರಬೇಕು. ಈ ಮೊದಲು ಈ ಯೋಜನೆಯಡಿ ಅನುದಾನ ಪಡೆದಿರಬಾರದು. ಮೊಬೈಲ್ ಕ್ಯಾಟರಿಂಗ್–1, ಕಾಟನ್ ಬ್ಯಾಗ್, ಜೂಟ್ ಕ್ಲಾಥ್, ಫ್ಲಾವರ್ ಪಾಟ್ಸ್, ಸ್ಟ್ರಾ, ಪ್ಲೇಟ್ಸ್ ಹಾಗೂ ಕಪ್ ಇತ್ಯಾದಿ–1, ಸೇಲ್ಫ್–ಹೆಲ್ಫ್ ಮಾರ್ಕೇಟಿಂಗ್ ಔಟ್‌ಲೆಟ್ಸ್–1, ಮೋಬೈಲ್ ಕೆಫೆ–1, ಸ್ಯಾನಿಟರಿ ನ್ಯಾಪಕೀನ್ ಪ್ರೋಡೆಕ್ಷನ್–1, ಸಪೋರ್ಟ ಫಾರ್ ಎಸ್.ಸಿ. ವುಮೇನ್ ಫಾರ್ ಮೈಕ್ರೋ ಎಂಟರಪ್ರೈಜಸ್–10, ಎಂಟರಪ್ರೈನರ್‌ಶೀಪ್ ಬಿಸಿನೆಸ್ ಡೆವಲೇಪ್‌ಮೆಂಟ್ ಸಾಫ್ಟ್ ಸ್ಕಿಲ್ ಟ್ರೈನಿಂಗ್ ಟೂ ದ ಬೇನಫೀಷಿಯರಿಸ್ 15 ಗುರಿ ನಿಗದಿಪಡಿಸಲಾಗಿದ್ದು, ಈಗಾಗಲೇ ಡೇ–ನಲ್ಮ್ ಯೋಜನೆಯಡಿ ಹೆಸರು ನೋಂದಾಯಿಸಿರುವ ಸ್ವ–ಸಹಾಯ ಗುಂಪುಗಳು ಹಾಗೂ ಅದರಲ್ಲಿ ಸದಸ್ಯತ್ವ ಹೊಂದಿದ ಸದಸ್ಯರುಗಳಿಂದ ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



# ಕಬ್ಬು ಬೆಳೆದ ರೈತರ ನೆರವಿಗೆ - ಸಕ್ಕರೆಕಾರ್ಖಾನೆಗಳು ಮುಂದೆ ಬರಬೇಕು

ರಾಜ್ಯದಲ್ಲಿ ಕಬ್ಬು ಕೃಷಿಯೇ ಸಾವಿರಾರು ಕುಟುಂಬಗಳ ಜೀವನಾಧಾರ. ಆದರೆ ಕಟಾವು ಸಮಯ ಬಂದಾಗ ಸಕ್ಕರೆಕಾರ್ಖಾನೆಗಳಿಂದ ಸಕಾಲಕ್ಕೆ ಬಿಲ್ ಪಾವತಿ ಆಗದೇ ರೈತರು ಸಾಲದ ಬಲೆಗೆ ಸಿಲುಕುತ್ತಿರುವುದು ಅತ್ಯಂತ ದುಃಖಕರ. ಕರ್ನಾಟಕದಲ್ಲಿ ವರ್ಷದಿಂದ ವರ್ಷಕ್ಕೆ ಇದೇ ಸಮಸ್ಯೆ ಮರುಕಳಿಸುತ್ತಿದ್ದು, ಆಡಳಿತ ಯಂತ್ರವೂ ಮೌನ ವಹಿಸಿರುವುದು ವಿಷಾದನೀಯ.

ರೈತನು ಬೆವರು ಸುರಿಸಿ ಬೆಳೆ ಬೆಳೆಸುತ್ತಾನೆ. ಆದರೆ ಬೆಳೆ ಮಾರಾಟ ಮಾಡಿದ ಹಣಕ್ಕಾಗಿ ತಿಂಗಳುಗಟ್ಟಲೆ ಕಚೇರಿಗಳ ಸುತ್ತಾಟ ಮಾಡಬೇಕಾಗುತ್ತದೆ. ಬಾಕಿ ಉಳಿದ ಹಣದಿಂದ ಗೊಬ್ಬರ, ಬೀಜ, ಕುಟುಂಬದ ಖರ್ಚು ಎಲ್ಲವೂ ಅಸ್ತವ್ಯಸ್ತವಾಗುತ್ತದೆ. ಇದು ಕೇವಲ ಆರ್ಥಿಕ ಸಮಸ್ಯೆಯಲ್ಲ – ರೈತನ ಆತ್ಮಸ್ಥೈರ್ಯಕ್ಕೆ ಬಡಿತ.

### ಕಟಾವು ನೆರವಿಲ್ಲದೆ ರೈತ ಸಂಕಷ್ಟ

ಇನ್ನೊಂದು ಕಡೆ ಕಾರ್ಮಿಕರ ಕೊರತೆ, ದುಬಾರಿ ಕೂಲಿ ಕಾರಣ ಕಬ್ಬು ಕಟಾವು ರೈತರಿಗೆ ದೊಡ್ಡ ತಲೆನೋವಾಗಿದೆ. ಸಕ್ಕರೆಕಾರ್ಖಾನೆಗಳು ಕಟಾವು ಯಂತ್ರಗಳು, ಸಾಗಾಣಿಕೆ ವ್ಯವಸ್ಥೆ ಒದಗಿಸದೆ ಇದ್ದರೆ ರೈತರು ಸಮಯಕ್ಕೆ ಬೆಳೆ ಮಾರಾಟ ಮಾಡಲಾಗದೇ ನಷ್ಟ ಅನುಭವಿಸುತ್ತಾರೆ. ಕಾರ್ಖಾನೆಗಳಿಗೆ ಕಚ್ಚಾ ವಸ್ತು ಬೇಕು, ಆದರೆ ಅದನ್ನು ತರುವ ರೈತನ ಕಷ್ಟ ಯಾರಿಗೂ ಕಾಣುವುದಿಲ್ಲ.

- **ಸರ್ಕಾರ ಹಾಗೂ ಕಾರ್ಖಾನೆಗಳಿಗೆ ಸ್ಪಷ್ಟ ಸಂದೇಶ**
- **ಕಬ್ಬು ಬಿಲ್‌ಗಳನ್ನು ನಿಗದಿತ ಅವಧಿಯಲ್ಲಿ ಕಡ್ಡಾಯವಾಗಿ ಪಾವತಿಸಬೇಕು**
- **ಬಾಕಿ ಉಳಿದ ಹಣಕ್ಕೆ ದಂಡ ಹಾಗೂ ಬಡ್ಡಿ ವಿಧಿಸಬೇಕು**
- **ಕಟಾವು ಮತ್ತು ಸಾಗಾಣಿಕೆಗೆ ಕಾರ್ಖಾನೆಗಳೇ ವ್ಯವಸ್ಥೆ ಮಾಡಬೇಕು**
- **ರೈತ ಪ್ರತಿನಿಧಿಗಳೊಂದಿಗೆ ನೇರ ಸಂವಾದ ನಡೆಯಬೇಕು**
- **ಇವು ಕಾಗದದ ಘೋಷಣೆ ಆಗದೇ ಜಾರಿಗೆ ಬರಬೇಕು.**

ಅಂತಿಮವಾಗಿ ರೈತ ಉಳಿದರೆ ಮಾತ್ರ ಕೃಷಿ ಉಳಿಯುತ್ತದೆ. ಕೃಷಿ ಉಳಿದರೆ ಮಾತ್ರ ರಾಜ್ಯದ ಆರ್ಥಿಕತೆ ಬಲವಾಗುತ್ತದೆ.

ಸಕ್ಕರೆಕಾರ್ಖಾನೆಗಳು ಲಾಭದ ಲೆಕ್ಕಾಚಾರದಲ್ಲಿ ಮಾತ್ರ ತೊಡಗದೆ, ರೈತನ ಬದುಕಿನ ಹೊಣೆಗಾರಿಕೆ ವಹಿಸಬೇಕಾದ ಸಮಯ ಬಂದಿದೆ.

ಸಕಾಲದ ಬಿಲ್ ಪಾವತಿ ಮತ್ತು ಕಬ್ಬು ಕಟಾವು ನೆರವು

ಇವೆರಡೇ ಇಂದು ರೈತರ ಬದುಕಿನ ಆಧಾರ. ಇದನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಕೃಷಿ ಕ್ಷೇತ್ರವೇ ಕುಸಿಯುವುದು ನಿಶ್ಚಿತ.

# ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿನಲ್ಲಿ ಆಹಾರ ವಾಹಿನಿ (ಆಹಾರಕಿಯೋಸ್ಕ್) ಯೋಜನೆಯಡಿ ಅರ್ಹರಿಂದ ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಹಾರ ವಾಹಿನಿ (ಆಹಾರಕಿಯೋಸ್ಕ್) ಯೋಜನೆಯಡಿ ಸ್ಥಳಾಂತರಿಸಬಹುದಾದ ತಿಂಡಿ ಮಳಿಗೆಗಳನ್ನು ನಾಲ್ಕು ಚಕ್ರಗಳ ಇವಿ–ಗೂಡ್ಸ್ ವಾಹನಗಳನ್ನು ಅಗತ್ಯಕ್ಕೆ ತಕ್ಕಂತೆ ನವೀಕರಿಸಿ ಫಲಾನುಭವಿಗಳಿಗೆ ವಿತರಿಸುವ ಯೋಜನೆಯಾಗಿದೆ. ನಿಗಮದಿಂದ ವಾಹನ ಖರೀದಿಗೆ ರೂ.03 ಲಕ್ಷ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು. ಉಳಿಕೆ ಮೊತ್ತವನ್ನು ಬ್ಯಾಂಕ್, ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬಹುದಾಗಿದೆ.

ಅರ್ಜಿ ಸಲ್ಲಿಸಲು ಬಳ್ಳಾರಿ ನಗರ ಕ್ಷೇತ್ರದ ಹಿಂದುಳಿದ ವರ್ಗಗಳ ಪ್ರವರ್ಗ–2ಎ ರಲ್ಲಿ ಬರುವ ಮಡಿವಾಳ ಮತ್ತು ಇದರ ಉಪಜಾತಿಗಳಾದ ಅಗಸ, ಚಕಲ, ಧೋಬಿ, ಮಡಿವಾಳ, ಮನ್ನನ್, ಪರಿತ್, ರಾಜಕ, ಸಕಲ, ವನ್ನನ್, ವೆಲ್ಲುತೇಡನ್ ಮತ್ತು ಸಾಕಲವಾಡು ಸೇರಿದವರಾಗಿರಬೇಕು. ಮಾ.06 ಅರ್ಜಿ ಸಲ್ಲಿಸಲು ಕೊನೆಯ ದಿನ.ಕುಟುಂಬದ ವಾರ್ಷಿಕ ವರಮಾನ ರೂ.3,00,000 ಗಳ ಒಳಗಿರಬೇಕು. ಅರ್ಜಿದಾರರ ವಯಸ್ಸು 21 ರಿಂದ 45 ವರ್ಷಗಳ ಮಿತಿಯಲ್ಲಿರಬೇಕು.

ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿರುವಂತೆ ಅರ್ಜಿದಾರರ ಹೆಸರು, (ಶ್ರೀ/ಶ್ರೀಮತಿ ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಬುಕ್ ಪುಸ್ತಕದಲ್ಲಿಯೂ ಇದ್ದು ಹೊಂದಾಣಿಕೆಯಾಗಬೇಕು.ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ(ನಿ), ಜಿಲ್ಲಾಡಳಿತ ಭವನ, ಬಿ ಬ್ಲಾಕ್, 2ನೇ ಮಹಡಿ, ಕೊಠಡಿ ಸಂ.53, ಅನಂತಪುರ ರಸ್ತೆ, ಬಳ್ಳಾರಿ ಕಚೇರಿ ಅಥವಾ ದೂ.08392–267038 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ(ನಿ)ದ ಜಿಲ್ಲಾ ವ್ಯವಸ್ಥಾಪಕ ಭಾವಿಕಟ್ಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತರು ಯಾವುದೇ ಕೃಷಿ ಪೂರ್ವ ಚಟುವಟಿಕೆ ಕೈಗೊಳ್ಳಬಾರದೆಂದು ಸೂಚನೆ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕಲಬುರಗಿ ತಾಲೂಕಿನ ಫರಹತಾಬಾದ ಹೋಬಳಿಯ ನದಿಸಿನ್ನೂರ ಮತ್ತು ಹೊನ್ನಕಿರಣಗಿ ಗ್ರಾಮಗಳ ವ್ಯಾಪ್ತಿಗೆ ಸೇರಿದ ವಿವಿಧ ಸರ್ವೆ ನಂಬರ್‌ಗಳ 1000 ಎಕರೆ ಪ್ರದೇಶದಲ್ಲಿ ಪಿ.ಪಿ.ಪಿ. ಮಾದರಿಯಲ್ಲಿ ಮೆಗಾ ಟೆಕ್ಸ್‌ಟೈಲ್ ಪಾರ್ಕ್‌ನ್ನು ಸ್ಥಾಪಿಸಲಾಗುತ್ತಿದೆ. ಈ ಉದ್ದೇಶಕ್ಕಾಗಿ ಸದರಿ 1,000 ಎಕರೆ ಜಮೀನನ್ನು ಪಿಎಂ–ಮಿತ್ರಾ ಮೆಗಾ ಜವಳಿ ಪಾರ್ಕ್ ಕರ್ನಾಟಕ ಲಿ., ಈ ಎಸ್‌ಪಿವಿ ಗೆ ಹಸ್ತಾಂತರಿಸಲಾಗಿದೆ.

ಈ ಮೆಗಾ ಜವಳಿ ಪಾರ್ಕ್‌ಗೆ ರಸ್ತೆ, ವಿದ್ಯುತ್, ನೀರು ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಿವಿಧ ಅನುಷ್ಠಾನ ಇಲಾಖೆಗಳಿಂದ ಕಾಮಗಾರಿಗಳ ಪೂರ್ವ ಚಟುವಟಿಕೆ ಪ್ರಾರಂಭಿಸಲಾಗಿದ್ದು, ಆದ್ದರಿಂದ ನದಿಸಿನ್ನೂರು ಮತ್ತು ಹೊನ್ನಕಿರಣಗಿ ಗ್ರಾಮಗಳ ವ್ಯಾಪ್ತಿಯಲ್ಲಿನ ಪಿಎಂ–ಮಿತ್ರ ಮೆಗಾ ಜವಳಿ ಪಾರ್ಕ್‌ನ 1,000 ಎಕರೆ ಜಾಗದಲ್ಲಿ ರೈತರು ಯಾವುದೇ ಕೃಷಿ ಪೂರ್ವ/ಬಿತ್ತನೆ/ಕುಂಟಿ/ನೇಗಿಲು ಚಟುವಟಿಕೆ ಕೈಗೊಳ್ಳಬಾರದೆಂದು ಕಲಬುರಗಿ ಜಿಲ್ಲಾ ಪಂಚಾಯತ್ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

# ವಿಬಿ ಜಿರಾಮ್‌ಜಿ ಜಾರಿಯಿಂದ ಭ್ರಷ್ಟರಿಗೆ ಭಯ: ಪ್ರಭು ಚವ್ಹಾಣ



ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಮನರೇಗಾ ಯೋಜನೆಯ ಮೂಲಕ ಸರ್ಕಾರವನ್ನು ಲೂಟಿ ಮಾಡುತ್ತಿದ್ದ ಭ್ರಷ್ಟರಿಗೆ ವಿಬಿ ಜಿರಾಮ್‌ಜಿ ಜಾರಿಯಿಂದಾಗಿ ಭಯ ಹುಟ್ಟಿಕೊಂಡಿದೆ ಎಂದು ಶಾಸಕ ಪ್ರಭು ಬಿ.ಚವ್ಹಾಣ ಅವರು ಹೇಳಿದರು.

ಭಾರತೀಯ ಜನತಾ ಪಕ್ಷ ಔರಾದ(ಬಿ) ಮಂಡಲದ ವತಿಯಿಂದ ಬುಧವಾರ ಕಮಲನಗರ ಪಟ್ಟಣದ ಎಂ.ಎ ಬಿರಾದಾರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ವಿಬಿ–ಜಿರಾಮ್‌ಜಿ ಯೋಜನೆಯ ಜನಜಾಗೃತಿ ಅಭಿಯಾನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೆಲವರು ಮನರೇಗಾ ಮೂಲಕ ಗ್ರಾಮೀಣ ಭಾಗದ ಜನತೆಗೆ ಉದ್ಯೋಗದ ಭರವಸೆ ನೀಡಿ ಭ್ರಷ್ಟಾಚಾರಕ್ಕೆ ಹಾದಿ ಮಾಡಿಕೊಂಡಿದ್ದರು. ಸರಿಯಾದ ಸಮಯಕ್ಕೆ ಉದ್ಯೋಗಗಳು ಕೊಡುತ್ತಿರಲಿಲ್ಲ. ಸಕಾಲಕ್ಕೆ ಕೂಲಿ ಹಣ ಪಾವತಿಸುತ್ತಿರಲಿಲ್ಲ. ಬೋಗಸ್ ಬಿಲ್ಲುಗಳನ್ನು ಸೃಷ್ಟಿಸಿ ಸರ್ಕಾರದ ಹಣ ದುರ್ಬಳಕೆ ಮಾಡುವುದು ವಿಪರೀತವಾಗಿ ನಡೆಯುತ್ತಿತ್ತು. ಇದನ್ನು ಗಮನಿಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸರ್ಕಾರ ಯೋಜನೆಯನ್ನು ವಿಬಿ ಜಿರಾಮ್‌ಜಿ ಎಂದು ಬದಲಾಯಿಸಿ ಅಕ್ರಮಗಳ ತಡೆಗೆ ಸಾಕಷ್ಟು ಸುಧಾರಣೆಗಳನ್ನು ತಂದಿದ್ದು, ಯೋಜನೆ ಸಂಪೂರ್ಣ ಪಾರದರ್ಶಕವಾಗಿದೆ ಎಂದರು.

ಕೇಂದ್ರ ಸರ್ಕಾರದ ಜನಹಿತ ಕೆಲಸವನ್ನು ಸಹಿಸದ ಕಾಂಗ್ರೆಸ್‌ನವರು ಇಲ್ಲ ಸಲ್ಲದ ಸುಳ್ಳುಗಳನ್ನು ಹೇಳುತ್ತಾ ಜನರಲ್ಲಿ ಗೊಂದಲವುಂಟು ಮಾಡಲು ಯತ್ನಿಸುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಇದಕ್ಕೆಂದೇ ವಿಶೇಷ ಅಧಿವೇಶನವನ್ನು ನಡೆಸಿದೆ. ರಾಜ್ಯಪಾಲರ ಮೂಲಕ ಸುಳ್ಳುಗಳನ್ನು ಹೇಳಿಸಲು ಯತ್ನಿಸಿದ್ದಾರೆ. ನಮ್ಮ ಕಾರ್ಯಕರ್ತರು ಕಾಂಗ್ರೆಸ್‌ನವರ ಹೇಳಿಕೆಗಳಿಗೆ ಜಗ್ಗದೇ ಜನತೆಗೆ ಸತ್ಯಾಂಶವನ್ನು ತಿಳಿಸಬೇಕು. ವಿಬಿ ಜಿರಾಮ್‌ಜಿ ಯೋಜನೆಯ ಅನುಕೂಲತೆಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ವಿಶೇಷ ಉಪನ್ಯಾಸ ನೀಡಿದ ಹಿರಿಯ ಮುಖಂಡರಾದ ಗುರುನಾಥ ಜ್ಯಾಂತಿಕರ್ ಮಾತನಾಡಿ, ಕಾಂಗ್ರೆಸ್‌ಗೆ ಮಹಾತ್ಮ ಗಾಂಧೀಜಿಯ ಬಗ್ಗೆ ಯಾವುದೇ ರೀತಿಯ ಅಭಿಮಾನವಿಲ್ಲ. ಕೇವಲ ಜನರಲ್ಲಿ ಗೊಂದಲ ಹುಟ್ಟಿಸಲೆಂದೇ ವಿಬಿ–ಜಿರಾಮ್‌ಜಿ ಯೋಜನೆಯ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಹೊಸ ಯೋಜನೆ ಮೂಲಕ ಕೆಲಸದ ದಿನಗಳನ್ನು ಹೆಚ್ಚಿಸಲಾಗಿದೆ. ನಕಲಿ ಜಾಬ್ ಕಾರ್ಡ್, ಹಣ ದುರುಪಯೋಗಕ್ಕೆ ಕಡಿವಾಣ ಬಿದ್ದಿದೆ. ಹಾಜರಾತಿ, ಕಾಮಗಾರಿಯ ಸ್ಥಳ ಖಚಿತತೆಗೆ ತಂತ್ರಜ್ಞಾನದ ನೆರವು ಪಡೆಯಲಾಗಿದೆ ಎಂದು ಹೇಳಿದರು.

ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಜಯಲಕ್ಷ್ಮಿ ಕೌಟಗೆ ಅವರು ಮಾತನಾಡಿ, 'ವಿಬಿ ಜಿರಾಮ್‌ಜಿ' ಯೋಜನೆ ಕುರಿತು ಕಾಂಗ್ರೆಸ್ ನೇತೃತ್ವದ ಸರ್ಕಾರದಿಂದ ಅಪಪ್ರಚಾರ ನಡೆಯುತ್ತಿದೆ. ಪಕ್ಷದ ಕಾರ್ಯಕರ್ತರು ಜನರೆದುರು ಸತ್ಯಾಂಶವನ್ನು ಬಿಚ್ಚಿಡುವ ಕೆಲಸ ಮಾಡಬೇಕು ಎಂದು ತಿಳಿಸಿದರು. ಬಿಜೆಪಿ ಮಂಡಲ ಅಧ್ಯಕ್ಷರಾದ ರಾಮಶೆಟ್ಟಿ ಪನ್ನಾಳೆ ಪ್ರಾಸ್ತಾವಿಕ ಮಾತನಾಡಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಅರಹಂತ ಸಾವಳೆ, ಪ್ರಧಾನ ಕಾರ್ಯದರ್ಶಿ ಕಿರಣ ಪಾಟೀಲ, ಮಂಡಲ ಪ್ರಭಾರಿ ಮಹೇಶ್ವರ ಸ್ವಾಮಿ, ರೈತ ಮೋರ್ಚಾ ಅಧ್ಯಕ್ಷ ಶಿವರಾಜ ಅಲ್ಮಾಜೆ, ಮೈನಾರಿಟಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಾಕೀರ್ ಶೇಖ್, ಮಹಿಳಾ ಮೋರ್ಚಾ ಅಧ್ಯಕ್ಷೆ ಶಕುಂತಲಾ ಮುತ್ತಂಗೆ, ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಶೀಲಾ ಮಹೇಶ ಸಜ್ಜನ್, ಮುಖಂಡರಾದ ಧೊಂಡಿಬಾ ನರೋಟೆ, ವಸಂತ ಬಿರಾದಾರ, ಸತೀಷ ಪಾಟೀಲ, ರಂಗರಾವ ಜಾಧವ, ಶಿವಾನಂದ ವಡ್ಡೆ, ನಾಗೇಶ ಪತ್ರೆ, ಗಣೇಶ ಕಾರೆಗಾವೆ, ವಿಜಯಕುಮಾರ ದೇಶಮುಖ ಸೇರಿದಂತೆ ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು, ಬೂತ್ ಅಧ್ಯಕ್ಷರು, ಶಕ್ತಿ ಕೇಂದ್ರ, ಮಹಾಶಕ್ತಿ ಕೇಂದ್ರಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮಂಡಲ ಮತ್ತು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಮಂಡಲ ಪ್ರಧಾನ ಕಾರ್ಯದರ್ಶಿ ಖಂಡೋಬಾ ಕಂಗಟೆ ಸ್ವಾಗತಿಸಿದರು. ಕಮಲನಗರ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಬಂಟಿ ರಾಂಪೂರೆ ನಿರೂಪಿಸಿ ವಂದಿಸಿದರು.



ಕಲಬುರಗಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಲಬುರಗಿ 22ನೇ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡ ಭವನ ಸರದಾರ ವಲ್ಲಭಬಾಯಿ ಪಟೇಲ್ ವೃತ್ತ, ಕಲಬುರಗಿ ವತಿಯಿಂದ ಪತ್ರಿಕೆರಂಗದಲ್ಲಿ ಸುಮಾರು 15ವರ್ಷಗಳಿಂದ ವೃತ್ತಿಯಲ್ಲಿದ್ದು ಗುರುತಿಸಿ ಅಪ್ಜಲ ಪಾಷಾ ಗೋಟೂರ ರವರಿಗೆ ಸನ್ಮಾನಿಸಲಾಯಿತು. ಚಿತ್ರ ಮಲ್ಲಮ್ಮ ನುಡಿ.

### ಸಂಭ್ರಮದಿಂದ ನಡೆದ ಶ್ರೀ ಗುರು ಭದ್ರೇಶ್ವರ ರಥೋತ್ಸವ

# ಧರ್ಮಸಭೆಗಳಿಂದ ಮನಕುಲದ ಏಳಿಗೆ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯ ಅಭಿಮತ

- ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:



ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳನ್ನು ಬೋಧಿಸುವಂತಹ ಧರ್ಮ ಸಭೆಗಳು ಹೆಚ್ಚು ನಡೆಯುವುದರಿಂದ ಮನುಕುಲ ಏಳಿಗೆ ಸಾಧ್ಯ ಎಂದು ಶಿವಸಿದ್ದ ಸೋಮೇಶ್ವರ ಶಿವಾಚಾರ್ಯ ಹೇಳಿದರು. ತಾಲೂಕಿನ ಇಟಗಾ ಗ್ರಾಮದ ಶಿವಸಿದ್ಧ ಯೋಗಾಶ್ರಮ ಶಾಖಾ ಮುಕ್ತಿಮಠ ಶ್ರೀಕ್ಷೇತ್ರ ಇಟಗಾ ಗ್ರಾಮದಲ್ಲಿ ಶ್ರೀ ಗುರು ಭದ್ರೇಶ್ವರರ 49ನೇ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವ ಅಂಗವಾಗಿ ಆಯೋಜಿಸಿದ್ದ ಧರ್ಮ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

> **ಭಕ್ತರಿಂದ ತುಲಾಭಾರ**
>
> "ವಿರಕ್ತ ಮಠ ಭರತನೂರಿನ ಪೂಜ್ಯ ಚಿಕ್ಕ ಗುರು ನಂಜೇಶ್ವರ ಸ್ವಾಮಿಗಳಿಗೆ ಶ್ರೀ ಮಠದ ವತಿಯಿಂದ ತುಲಾಭಾರ ಮಾಡಲಾಯಿತು. ಹಾಗೂ ಶ್ರೀಶ್ರೀಶ್ರೀ ಷ.ಬ್ರ. ಮಹರ್ಷಿ ಧರ್ಮಶ್ರೀ ತಪೋರತ್ನ ಶಿವಸಿದ್ದ ಸೋಮೇಶ್ವರ ಶಿವಾಚಾರ್ಯ ಮಹಾ ಸ್ವಾಮಿಗಳಿಗೆ ಭಕ್ತರು ತುಲಾಭಾರ ನೆರವೇರಿಸಿದರು.



ಇಂದಿನ ಜನ ಮಾನಸದಲ್ಲಿ ಭಕ್ತಿ ಮಾರ್ಗ ಕಡಿಮೆಯಾಗುತ್ತಿವೆ. ಮಠ–ಮಂದಿರಗಳು ನಮ್ಮ ಸಂಸ್ಕೃತಿ, ಧರ್ಮ ಬೋಧನೆ ನೀಡುವ ಕೇಂದ್ರಗಳಾಗಿದ್ದು, ನಿರಂತರವಾಗಿ ಇಂತಹ ಧರ್ಮ ಸಭೆಗಳನ್ನು ನಡೆಸುವ ಮೂಲಕ ಮಾನವ ಕುಲ ಉದ್ಧಾರಕ್ಕಾಗಿ ಎಲ್ಲರೂ ತೊಡಗಿಕೊಳ್ಳಬೇಕು, ನಮ್ಮ ಯುವ ಪೀಳಿಗೆಗೆ ನಮ್ಮ ಧರ್ಮಚಾರಣೆ, ಸಂಸ್ಕಾರಯುತ ಜೀವನದಿಂದ ದೂರಾಗುತ್ತಿದ್ದು, ಜಾತ್ರೆ, ದೇವಸ್ಥಾನಗಳಲ್ಲಿ ನಡೆಯುವ ಧರ್ಮ ಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ನಮ್ಮ ಸಂಸ್ಕೃತಿ, ಧರ್ಮದ ಅರಿವು ಮುಡಲು ಸಾಧ್ಯ ಎಂದು ಹೇಳಿದರು. ಮುಂಬರುವ 50ನೇ ಜಾತ್ರಾ ಮಹೋತ್ಸವವನ್ನು ಸುವರ್ಣ ಮಹೋತ್ಸವನ್ನಾಗಿ ಆಚರಣೆ ಮಾಡೋಣ ಎಂದರು. ನಂತರ ಸಂಜೆ 6 ಘಂಟೆಗೆ ಶ್ರೀ ಗುರು ಭದ್ರೇಶ್ವರನ ರಥೋತ್ಸವಕ್ಕೆ ಶಾಸಕ ಡಾ. ಸಿದ್ದು ಪಾಟೀಲ್ ಚಾಲನೆ ನೀಡಿದರು. ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂ–ರಿಯಾಗಿ ಜರುಗಿತು. ಸುಖದೇವ

ಮಹಾರಾಜರು ಶಂಕರಲಿಂಗ ಸಂಸ್ಥಾನ ಮಠ ಉದಗಿರ್ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಚಿಕ್ಕ ಗುರು ನಂಜೇಶ್ವರ ಸ್ವಾಮಿಗಳು ವಿರಕ್ತಮಠ ಭರತನೂರ್, ಶಂಭುಲಿಂಗ ಶಿವಾಚಾರ್ಯರು ಹಿರೇಮುನ್ನಳ್ಳಿ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಸವಕಲ್ಯಾಣ, ಶಾಂತವೀರಯ್ಯಾ ಸ್ವಾಮಿಗಳು ನಾವದಗಿ, ಪ್ರಭಯ್ಯ ಸ್ವಾಮಿಗಳು ಬೆನಕನಹಳ್ಳಿ, ಉದ್ಭವಾನಂದ ಮಹಾರಾಜರು ಉದಗಿರ್, ಸಿದ್ದಯ್ಯ ಈಶ್ವರಯ್ಯ ದೇವರು ಶ್ರೀ ಚನ್ನಮಲ್ಲೇಶ್ವರ ವಿರಕ್ತಮಠ, ಪರಿಸರವಾದಿ ಶೈಲೇಂದ್ರ ಕಾವಡಿ, ಮಲ್ಲಿಕಾರ್ಜುನ ಪಾಟೀಲ್ ಬೆಳಕೇರಾ, ರಾಜಣ್ಣಾ ಹುಡಗಿಕ್ಕರ್, ಸಂಗಮೇಶ ಜವಾದಿ, ರೇವಪ್ಪಾ ಪಾಟೀಲ್, ಮಹಮ್ಮದ ಅಸ್ಲಾಂಮಿಯಾ, ನೀಲಕಂಠರಾವ ತುಗಾಂವ, ನೀಲಕಂಠರಾವ ಇಸ್ಲಾಂಪುರ್, ಅಣ್ಣೇಪ್ಪ ಇಸ್ಲಾಂಪುರ್, ಸಿದ್ದಪ್ಪವಾಲಿ, ಆನಂದಸಾಗರ್ ನಾರಾಯಣಪುರ್, ಕಲಯ್ಯಾ ಸ್ವಾಮಿ, ಇಂದ್ರಣ್ಣ ಮೈಲುರಕ್ಕರ್, ಅಶೋಕ ಚೌದರಿ, ಮಾಣಿಕ ಚಿನಕೇರಾ, ಚಂದ್ರಕಾಂತ ನಾರಾಯಣಪುರ್, ಉಮೇಶ್ ಸೊಲ್ಲಾಪುರೇ, ವಿಜಯದಾಸ್ ಖೇಣಿ, ಮಲ್ಲಿಕಾರ್ಜುನ ರೆಡ್ಡಿ, ಕಂಠಯ್ಯಾಸ್ವಾಮಿ, ಆಕಾಶ ಅನಾದೆ, ಹಾಗೂ ಜಾತ್ರಾ ಮಹೋತ್ಸವ ಸಮಿತಿಯ ಪದಾಧಿಕಾರಿಗಳು ಸೇರಿದಂತೆ ಸಾವಿರಾರು ಭಕ್ತರು ಉಪಸ್ಥಿತರಿದ್ದರು.

# ವಿಶ್ವದಲ್ಲಿ ಭಾವೈಕ್ಯತೆ ನೆಲೆಗೊಳ್ಳಲು ಆಧ್ಯಾತ್ಮ ಭದ್ರ ಬುನಾದಿ: ಚಂದ್ರಶೇಖರ್

- ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ನಮ್ಮ ಭಾರತ ದೇಶ ವಿವಿಧ ವೇಷ ಭಾಷೆ ಧರ್ಮ ಸಂಸ್ಕೃತಿಗಳನ್ನು ಹೊಂದಿದ್ದರೂ ವಿವಿಧತೆಯಲ್ಲಿ ಏಕತೆ ಹೊಂದಿರುವ ದೇಶ. ವಿಶ್ವದಲ್ಲಿ ಭಾವೈಕ್ಯತೆ ನೆಲೆಗೊಳ್ಳಬೇಕಾದರೆ ಅದಕ್ಕೆ ಭದ್ರಬುನಾದಿ ಅಧ್ಯಾತ್ಮ ಎಂದು ಜೆಡಿಎಸ್ ಪಕ್ಷದ ರಾಷ್ಟ್ರೀಯ ಕಾರ್ಯಕಾರಣಿ ಸಮಿತಿ ಸದಸ್ಯ ಹಾಗೂ ಕೊಪ್ಪಳದ ಹಿರಿಯ ಸಮಾಜ ಸೇವಕ ಸಿ .ವಿ. ಚಂದ್ರಶೇಖರ್ ಹೇಳಿದರು.

ಅವರು ನಗರದ ದೇವರಾಜ್ ಅರಸ್ ಕಾಲೋನಿ ಯಲ್ಲಿರುವ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಏರ್ಪಡಿಸಿದ ಭಾವೈಕ್ಯತ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು ,ಮುಂದುವರೆದು ಮಾತನಾಡಿ ಮನುಷ್ಯ ಬುದ್ಧಿಜೀವಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿ ನಾವು ಪರಮಾತ್ಮನ ಮೆಚ್ಚುಗೆಗೆ ಪಾತ್ರರಾಗಬೇಕು ಸಿವಿ ಚಂದ್ರಶೇಖರ್ ಅಭಿಪ್ರಾಯ ವ್ಯಕ್ತಪಡಿಸಿದರು.



ಈಶ್ವರಿ ವಿಶ್ವವಿದ್ಯಾಲಯದ ಬ್ರಹ್ಮಕುಮಾರಿ ಯೋಗಿನಿ ಅಕ್ಕ ಮಾತನಾಡಿ ಭಾವೈಕ್ಯತಾ ಸಂದೇಶವನ್ನು ನೀಡುತ್ತಾ ವಿಶ್ವದಲ್ಲಿ ಏಕತೆ ಸೋದರತೆ ಸೌಹಾರ್ದತೆ ಭಾವೈಕ್ಯತೆ ನೆಲೆಸಬೇಕಾದರೆ ವ್ಯಕ್ತಿ ವ್ಯಕ್ತಿಗಳ ಮಧ್ಯೆ ರಾಷ್ಟ್ರ ರಾಷ್ಟ್ರಗಳ ಮಧ್ಯೆ ಈರ್ಷೆ ದ್ವೇಷ ಸಮಾಪ್ತಿಯಾಗಿ ಸ್ನೇಹ ಸಹಯೋಗ ಸಹಬಾಳ್ವೆ ನೆಲೆಸಬೇಕಾದರೆ ಪ್ರತಿಯೊಬ್ಬ ವ್ಯಕ್ತಿಗೂ ಅಧ್ಯಾತ್ಮ ಶಿಕ್ಷಣ ಅತ್ಯಗತ್ಯವಾಗಿದೆ ಎಂದರು.ವಸು ದೈವ ಕುಟುಂಬಕಂ ಎನ್ನುವಂತೆ ವಿಶ್ವವೇ ಒಂದು ಕುಟುಂಬ ನಾವೆಲ್ಲರೂ ವಿಶ್ವಪಿತ ಪರಮಾತ್ಮನ ಮಕ್ಕಳು ಎಂಬ ಸತ್ಯತೆ ಅರಿವಾದಾಗ ಸಮಾಜದಲ್ಲಿ ಏಕತೆ ವಿಶ್ವಾಸ ನೆಲೆಗೊಳ್ಳಲು ಸಾಧ್ಯ ಎಂದರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶರಣಪ್ಪ ಚೌಹಾಣ್ ಮಾತನಾಡುತ್ತಾ ದೈನಂದಿನ ಒತ್ತಡದ ಬದುಕಿನಲ್ಲಿ ಶಾಂತಿಯನ್ನು ಪಡೆಯಲು ಇಂತಹ ಕಾರ್ಯಕ್ರಮಗಳು ದಾರಿದೀಪವಾಗಿದೆ ಎಂದರು.

ನಗರಸಭೆಯ ಮಾಜಿ ಸದಸ್ಯರಾದ ರಫೀಕ್ ಅಹಮದ್ ಮಾತನಾಡುತ್ತಾ ನಾವೆಲ್ಲರೂ ಒಂದೇ ನಾವೆಲ್ಲರೂ ಒಂದಾಗಿ ಸಮಾಜ ಸೇವೆಯಲ್ಲಿ ನಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳೋಣ ಎಂದರು ವೇದಿಕೆಯಲ್ಲಿ ಭಾವೈಕ್ಯತೆಯನ್ನು ಸಾರುವ ನೃತ್ಯ ಹಾಗೂ ಕಿರು ನಾಟಕ ಎಲ್ಲರ ಮನಸ್ಸೆಳೆಯಿತು ವೇದಿಕೆಯಲ್ಲಿ ವೀರೇಶ್ ಮಾಂತಯ್ಯ ಮಠ, ಕೊಪ್ಪಳ ಇನ್ನರ್ ವೀಲ್ ಕ್ಲಬ್ಬಿನ ಮಾಜಿ ಅಧ್ಯಕ್ಷರಾದ ಪದ್ಮ ಜೈನ್, ಪತ್ರಕರ್ತರಾದ ಸಿದ್ದಪ್ಪ ಹಂಚಿನಾಳ, ಶಿವರಾಜ್ ನುಗಡೋಣಿ, ಫಕೀರಪ್ಪ ಗೋಟುರ್, ಹರೀಶ್ ಕುಲಕರ್ಣಿ ಉಪಸ್ಥಿತರಿದ್ದರು, ಇದೇ ಸಂದರ್ಭದಲ್ಲಿ ಪತ್ರಕರ್ತರನ್ನು ಸನ್ಮಾನಿಸಲಾಯಿತು. ಬಿ.ಕೆ. ಸ್ನೇಹಕ್ಕ ಕಾರ್ಯಕ್ರಮ ನಿರೂಪಿಸಿದರು.

### ಸತ್ಯನಿಕೇತನ ಕಾಲೇಜಿನಲ್ಲಿ ಬೀಳ್ಕೊಡುಗೆ ಕಾರ್ಯಕ್ರಮ

# ಶೈಕ್ಷಣಿಕ ವ್ಯವಸ್ಥೆಯಲ್ಲಿ ಪಿಯುಸಿ ಪ್ರಮುಖ ಘಟ್ಟ



- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ದ್ವಿತೀಯ ಪಿಯುಸಿ ನಿಮ್ಮ ಭವಿಷ್ಯದ ಬದುಕಿನ ಮಾರ್ಗ ನಿರ್ಧರಿಸುವುದರಿಂದ ವಿದ್ಯಾರ್ಥಿಗಳು ಅಧ್ಯಯನದತ್ತ ಹೆಚ್ಚು ಗಮನ ಹರಿಸಿ ಉತ್ತಮ ಸಾಧನೆ ಮಾಡುವಂತೆ ಸತ್ಯನಿಕೇತನ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಸೂರ್ಯಕಾಂತ ಭಂಗೂರ ಹೇಳಿದರು.

> "ಸತ್ಯನಿಕೇತನ ಶಿಕ್ಷಣ ಸಂಸ್ಥೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ಒದಗಿಸುತ್ತಿದೆ. ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ.
>
> ಅಶೋಕ ರಾಜೋಳೆ ನಿವೃತ್ತ ಪ್ರಾಚಾರ್ಯರು ಭಾಲ್ಕಿ

ಪಟ್ಟಣದ ಸತ್ಯನಿಕೇತನ ಕಾಲೇಜಿನಲ್ಲಿ ಆಯೋಜಿಸಿದ್ದ ದ್ವಿತೀಯ ಪಿಯುಸಿ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪಿಯು ಹಂತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪ್ರಮುಖ ಘಟ್ಟ. ಇಲ್ಲಿ ವಿದ್ಯಾರ್ಥಿಗಳು ಹೆಚ್ಚು ಜಾಗೃತರಾಗಿ ಎಚ್ಚರಿಕೆಯ ಹೆಜ್ಜೆ ಇಡಬೇಕು. ದ್ವಿತೀಯ ಪಿಯುಸಿ ಬಳಿಕ ಪದವಿ ಶಿಕ್ಷಣ ಪಡೆದು ತಮ್ಮ ಬದುಕು ರೂಪಿಸಿಕೊಳ್ಳಬೇಕಾದ ಜವಾಬ್ದಾರಿ ತಮ್ಮ ಮೇಲಿದೆ. ಶಿಕ್ಷಣ ವಿಷಯದ ಆಯ್ಕೆಯಲ್ಲಿ ವಿದ್ಯಾರ್ಥಿಗಳಿಗೆ ವಿವೇಚನೆ ಹೆಚ್ಚಿರಬೇಕು ಎಂದು ಸಲಹೆ ಮಾಡಿದರು.

ನಿವೃತ್ತ ಪ್ರಾಚಾರ್ಯ ಅಶೋಕ ರಾಜೋಳೆ ಮಾತನಾಡಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣ ಪಡೆಯಲು ಪಿಯುಸಿ ಪ್ರಮುಖ ಹಂತ. ಇಲ್ಲಿ ನೀವು ತೆಗೆದುಕೊಳ್ಳುವ ನಿರ್ಧಾರಗಳು ಭವಿಷ್ಯಕ್ಕೆ ಭದ್ರಬುನಾದಿ ಆಗಬೇಕು ಎಂದು ತಿಳಿಸಿದರು.

ಪ್ರಾಚಾರ್ಯ ಜೈಕಾಂತ ಗಂಗೋಜಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ಶರದ ಸಿರ್ಸೆ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಸುಧಾಕರ ಜಾಧವ, ನಿರ್ದೇಶಕ ಶಿವಾನಂದ ಗುಂದಗಿ, ಉಮಾಕಾಂತ ಅಲ್ಮಾಜೆ ಸೇರಿದಂತೆ ಹಲವರು ಇದ್ದರು. ಶೈಲಜಾ ಪಾಟೀಲ್ ನಿರೂಪಿಸಿದರು. ರವೀಂದ್ರ ಭಾತಂಬ್ರೆ ವಂದಿಸಿದರು.

# ಬಾಲಕ ನಾಪತ್ತೆ: ಪತ್ತೆಗೆ ಮನವಿ

- ಮಲ್ಲಮ್ಮ ನುಡಿ ವಾರ್ತೆ,ಬಳ್ಳಾರಿ

ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯ 01ನೇ ವಾರ್ಡ್ನ ನಿವಾಸಿ ಯಮನೂರಪ್ಪ ಎನ್ನುವ 15 ವರ್ಷದ ಬಾಲಕ ಶಾಲೆಗೆ ಹೋಗಿಬರುತ್ತೇನೆ ಎಂದು ಹೇಳಿಹೋದವನು ಮನೆಗೆ ಬಾರದೇ ಫೆ.17 ರಂದು ಕಾಣೆ–ಯಾಗಿದ್ದು, ತೆಕ್ಕಲಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪತ್ತೆಗೆ ಸಹಕರಿಸಬೇಕು ಎಂದು ಸಬ್ ಇನ್ಸ್ಪೆಕ್ಟರ್ ಆಫ್ ಪೊಲೀಸ್ ಮನವಿ ಮಾಡಿದ್ದಾರೆ.ಚಹರೆ: ಎತ್ತರ 5.1 ಅಡಿ, ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ, ಕೋಲುಮುಖ ಹೊಂದಿದ್ದು, ಕನ್ನಡ ಮತ್ತು ತೆಲುಗು ಭಾಷೆ ಮಾತನಾಡುತ್ತಾನೆ. ಕಾಣೆಯಾದ ಸಂದರ್ಭದಲ್ಲಿ ತಿಳಿ ನೀಲಿ ಬಣ್ಣದ ಪ್ಯಾಂಟ್, ಕಪ್ಪು ಬಣ್ಣದ ಅಂಗಿ ಧರಿಸಿರುತ್ತಾನೆ.ಕಾಣೆಯಾದ ಬಾಲಕನ ಬಗ್ಗೆ ಮಾಹಿತಿ ದೊರೆತಲ್ಲಿ ತೆಕ್ಕಲಕೋಟೆ ಪೊಲೀಸ್ ಠಾಣೆಯ ಪಿಎಸ್ಐ ದೂ.08396–248013, ಮೊ.9480803055, ಸಿಪಿಐ ದೂ.08396–248044, ಬಳ್ಳಾರಿ ಗ್ರಾಮೀಣ ಉಪವಿಭಾಗ ಡಿಎಸ್‌ಪಿ ದೂ.08392–276000, ಬಳ್ಳಾರಿ ಎಸ್‌ಪಿ ದೂ.08392–258400 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಸಮಾನತೆ ಸಂದೇಶ ಸಾರುವ ಶರಣ ತತ್ವಗಳು

- ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ



ಬಸವಾದಿ ಶರಣರ ತತ್ವಗಳು, ವಚನಗಳು ಮಾನವರೆಲ್ಲರೂ ಒಂದೇ ಎನ್ನುವ ಸಮಾನತೆಯ ಸಂದೇಶವನ್ನು ಸಾರುತ್ತವೆ ಎಂದು ಬೀದರ್ ತಾಲೂಕು ಶರಣ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಕಲ್ಯಾಣರಾವ್ ಚಳಕಾಪೂರೆ ಹೇಳಿದರು.

ತಾಲ್ಲೂಕಿನ ತಳವಾಡ (ಕೆ) ಗ್ರಾಮದ ಅಲ್ಲಮಪ್ರಭು ಬಿ.ಇಡಿ ಕಾಲೇಜಿನಲ್ಲಿ ಜಿಲ್ಲಾ ಶಾಣ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಲಿಂ. ಕಾಶಮ್ಮ ಮತ್ತು ರಾಮಲಿಂಗಯ್ಯ ಸ್ವಾಮಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಮಾನವರಲ್ಲಿ ಜಾತಿ ಭೇದ ಸಲ್ಲದು. ಸಮಾಜದ ಎಲ್ಲರೂ ಒಂದೇ ತಾಯಿಯ ಮಕ್ಕಳಂತೆ ಬದುಕಬೇಕು ಎಂದು ಹೇಳಿದರು.

ಆಡಳಿತಾಧಿಕಾರಿ ಮೋಹನರೆಡ್ಡಿ ಮಾತನಾಡಿ, ಬಸವಾದಿ ಶರಣ–ರ ವಚನಗಳು ಸೂರ್ಯನ ಕಿರಣಗಳಂತೆ ಜಗತ್ತಿನಲ್ಲಿರುವ ಅಂಧಕಾರವನ್ನು ತೊಲಗಿಸಿ ಸಮೃದ್ಧ ಸಮಾಜದ ಬೆಳಕಿಗೆ ಸಹಕಾರಿಯಾಗಿದೆ ಎಂದು ತಿಳಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶಂಭುಲಿಂಗ ಕಾಮಣ್ಣ ಮಾತನಾಡಿ, ಮಾನವರು ಬಾಹ್ಯ ಸೌಂದರ್ಯಕ್ಕಿಂತ ಅಂತರಂಗದ ಅಂತರಂಗದ ಸೌಂದರ್ಯ ಹೆಚ್ಚಿಸಿಕೊಳ್ಳಲು ಶರಣ ತತ್ವವನ್ನು ಪಾಲಿಸಬೇಕು ಎಂದರು.

ಪ್ರಾಚಾರ್ಯ ಪಾಂಡುರಂಗ ಕುಂಬಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಮುಖರಾದ ಜಯರಾಜ ಬಿರಾದಾರ, ಕಾಶಿನಾಥ ಭೂರೆ, ಗುಂಡಪ್ಪ ಸಂಗಮಕರ, ಮಾಣಿಕರಾವ್ ಪಾಂಚಾಳ, ಶಿವಕುಮಾರ್ ಬೋಳೇಗಾಂವ್ಕರ್, ಸುನಿತಾ ಸಜ್ಜನ್ ಸೇರಿದಂತೆ ಇತರರು ಇದ್ದರು.

# ಯೋಗಿ ನಾರೇಯಣ ಪೂರ್ವಭಾವಿ ಸಭೆ

- ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮಾರ್ಚ 3ರಂದು ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯು ಫೆ.24ರ ಮಧ್ಯಾಹ್ನ 12 ಗಂಟೆಗೆ ಯಕ್ಲಾಸಪುರ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಭೆಗೆ ಆಗಮಿಸಲು ಕೋರಿದೆ ಎಂದು ಪ್ರಕಟಣೆ ತಿಳಿಸಿದೆ.

# ಕಾಲುವೆಗಳ ಸುತ್ತ ನಿಷೇಧಾಜ್ಞೆ ಜಾರಿ

- ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಗಣೇಕಲ್ ಜಲಾಯಶದಿಂದ ರಾಂಪೂರ ಕುಡಿಯುವ ನೀರಿನ ಜಲಾಶಯಕ್ಕೆ ನೀರನ್ನು ಹರಿಸುವ ವಿತರಣಾ ಕಾಲುವೆ 95, 96, 98, 98ಎ, 98ಬಿ, 99ಎ, 99 ಮತ್ತು 100ರವರೆಗೆ ಕಾಲುವೆಯ ಸುತ್ತಲಿನ ಪ್ರದೇಶದ ವ್ಯಾಪ್ತಿಯಲ್ಲಿ ಶಾಂತಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಫೆ.17ರಿಂದ ಮಧ್ಯರಾತ್ರಿ 12 ಗಂಟೆಯಿಂದ ಫೆ.21ರ ಮಧ್ಯೆರಾತ್ರಿ 12 ಗಂಟೆವರೆಗೆ 100 ಮೀಟರಗಳ ವಿತರಣಾ ಕಾಲುವೆಗಳ ಸುತ್ತುವರೆದ ಪ್ರದೇಶದ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಆದೇಶ ಹೊರಡಿಸಿದ್ದಾರೆ.

# ಪೌರ ಕಾರ್ಮಿಕರಿಗೆ ಸೌಲಭ್ಯಗಳು ಒದಗಿಸಿ: ಕ.ದ.ಸಂ.ಸ. ಅಂಬೇಡ್ಕರವಾದ ಮನವಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ


ಯಾದಗಿರಿ ನಗರಸಭೆ ಪೌರ ಕಾರ್ಮಿಕರಿಗೆ ಸೌಲಭ್ಯಗಳು ಒದಗಿಸಿ ಕೊಡಿ ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು ಅವರಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರವಾದ ವತಿಯಿಂದ ಮನವಿ ಸಲ್ಲಿಸಿದರು.ಭಯಾದಗಿರಿ ನಗರಸಭೆಯಲ್ಲಿ ಪೌರ ಕಾರ್ಮಿಕರಿಗೆ ಜಿಲ್ಲಾ ಕೇಂದ್ರದಲ್ಲಿ ವಿಶ್ರಾಂತಿ ಗೃಹ ಇರುವುದಿಲ್ಲ, ವಿಶ್ರಾಂತಿ ಗೃಹ ನಿರ್ಮಾಣ ಆಗಬೇಕು ಹಾಗೂ ಪೌರ ಕಾರ್ಮಿಕರನ್ನಾಗಿ ಹೊಲೆಯ, ಮಾದಿಗ ಜನಾಂಗದವರಿಗೆ ನೇರವಾಗಿ ನೇಮಕ ಮಾಡಬೇಕು. ಅನಕ್ಷರಸ್ಥರಾದ ಇವರು, ಮಲ ಮೂತ್ರ ಎತ್ತುವ ಕಾಯಕ ಮಾಡುತ್ತಾ ಬರುತ್ತಿದ್ದು, ಇವರಿಗೆ ನೇರವಾಗಿ ಇಲಾಖೆಯಿಂದಲೇ ನೇಮಕ ಮಾಡಬೇಕು ಏಜೆನ್ಸಿ ಮೂಲಕ ನೇಮಕ ಮಾಡಿದರೆ ಕಾರ್ಮಿಕರಿಗೆ ವೇತನ, ಪಿ.ಎಫ್. ಸಿಗುವುದಿಲ್ಲ.

ಕಾರ್ಮಿಕರಿಗೆ ವರ್ಷದಲ್ಲಿ ಎರಡು ಬಾರಿ ಸಮವಸ್ತ್ರ ಕೊಡಬೇಕು, ಅವರಿಗೆ ಶೂ, ಹ್ಯಾಂಡ್ ಗ್ಲೋಸ್, ಸ್ಯಾನಿಟೈಸರ್, ಸೋಪ್ ನೀಡಬೇಕು, ಇದ್ಯಾವುದು ಇಲ್ಲಿಯವರೆಗೆ ಕೊಟ್ಟಿರುವುದಿಲ್ಲ. ಹಾಗೂ ಕಾರ್ಮಿಕರಿಗೆ ನೀರು, ಉಪಹಾರ ಊಟ ಸರಿಯಾಗಿ ನೀಡುತ್ತಿಲ್ಲ, ಇದರಲ್ಲಿ ಅವ್ಯವಹಾರ ನಡೆಯುತ್ತಿದ್ದು, ಗುಣಮಟ್ಟದ ಆಹಾರ ನೀಡಲು ಒತ್ತು ನೀಡಬೇಕು. ನಗರಸಭೆಯ ಎಸ್.ಐ. ರವರು ಕಾರ್ಮಿಕರಿಗೆ ಕೆಟ್ಟದಾಗಿ ಮಾತನಾಡುತ್ತಾರೆ, ಅಸಭ್ಯವಾಗಿ ಮಾಡತನಾಡಿ ನಿಂದಿಸುತ್ತಾರೆ. ಶರಣಮ್ಮ ಎಸ್.ಐ. ಮಹಿಳಾ ಕಾರ್ಮಿಕರಿಗೆ ಕೆಟ್ಟದಾಗಿ ಮಾತನಾಡುತ್ತಾರೆ. ಕೆಳಜಾತಿಯವರಿಗೆ ಈ ರೀತಿ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದು, ಅನೇಕ ಅವ್ಯವಹಾರದಲ್ಲಿ ಭಾಗಿಯಾಗಿದ್ದು, ಅಕ್ಟೋಬರ್–2 ರಂದು ಗಾಂಧಿ ವೃತ್ತದಲ್ಲಿ ಸ್ವಚ್ಛತೆ, ದೀಪಾಲಂಕಾರ ಮಾಡಿರುವುದಿಲ್ಲ, ಸದರಿ ನಗರಸಭೆಯ ಜವಾನರು, ಎಸ್.ಐ.ಗಳಿಗೆ ಇಲ್ಲಿಂದ ವರ್ಗಾವಣೆ ಮಾಡಬೇಕು. ಈ ಸಮಸ್ಯೆ ಬಗೆಹರಿಸದೇ ಹೋದಲ್ಲಿ ರಾಜ್ಯದಾದ್ಯಂತ ಹೋರಾಟ ಮಾಡಲಾಗುವುದು ಎಂದು ಮನವಿ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಜಿ.ಸಂ.ಸಂಚಾಲಕರಾದ ನಿಂಗಣ್ಣ ಬೀರನಾಳ, ಯಾದಗಿರಿ ತಾ.ಸಂಚಾಲಕ ಆಂಜನೇಯ ಬಳಿಚಕ್ರ, ಅನೀಲ್ ಕುಮಾರ ರವರು ಉಪಸ್ಥಿತರಿದ್ದರು.

# ಪರೀಕ್ಷೆಗಳನ್ನು ಹಬ್ಬಗಳಂತೆ ಆಹ್ವಾನಿಸಿ: ಜೋಶಿ

• ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್



ಪಟ್ಟಣದ ಸ್ವಾಮಿ ವಿವೇಕಾನಂದ ಪಿಯು ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡಿಗೆ ಸಮಾರಂಭ ಉದ್ಘಾಟಿಸಿ ಪರೀಕ್ಷೆಗಳನ್ನು ಹಬ್ಬಗಳಂತೆ ಆಹ್ವಾನಿಸಿ ಪರೀ–ಕ್ಷೆಯ ಕುರಿತಾದ ಅನಗತ್ಯ ಭಯ ಬೇಡ ಎಂದು ವಿದ್ಯಾರ್ಥಿಗಳಿಗೆ ಡಾ. ಪುರುಷೋತ್ತಮ ಜೋಶಿ ಕಿವಿ ಮಾತು ಹೇಳಿದರು.

ಗುರುಕುಲ ರೂರಲ್ ಡೆವೆಲಪ್ಮೆಂಟ್ ಸೊಸೈಟಿ ಗುರುಮಠಕಲ್ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯು ಕಾಲೇಜಿನಲ್ಲಿ ಬೀಳ್ಕೊಡಿಗೆ ಸಮಾರಂಭ ಬುಧವಾರ ಕಾಲೇಜಿನ ಆವರಣದಲ್ಲಿ ಜರುಗಿತು.

ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಖಾಸಮಠದ ಶ್ರೀಗಳಾದ ಪೂಜ್ಯಶ್ರೀ ಶಾಂತವೀರ ಗುರುಮುರುಘರಾಜೇಂದ್ರ ಮಹಾ ಸ್ವಾಮಿಗಳು ವಹಿಸಿದ್ದರು, ಅತಿಥಿಗಳಾಗಿ ವಿವಿಧ ಕಾಲೇಜಿನ ಉಪನ್ಯಾಸಕ, ಕಾಲೇಜಿನ ಆಡಳಿತ ಮಂಡಳಿ ಸದಸ್ಯರು, ಪತ್ರಕರ್ತ ಧ್ವನಿ ಸಂಘದ ಅಧ್ಯಕ್ಷ, ವಿವಿಧ ಶಾಲೆಯ ಮುಖ್ಯ ಗುರುಗಳಾದ ಪ್ರಕಾಶ್ ಪಾಟೀಲ, ನಂದ ಕಿಶೋರ್ ರವಿ ಬುರನೊಳ,

ರಾಜೇಶ್ವರ ರೆಡ್ಡಿ, ನಾರಾಯಣ ಸಾಕಾ, ಜ್ಞಾನೇಶ್ವರ ರೆಡ್ಡಿ, ಮೋಗಲಪ್ಪ ನಾಯ್ಕಿನ್ ಪ್ರಭುಲಿಂಗ ಬಡಿಗೇರ, ಅಖಿಲೇಶ್ ರೆಡ್ಡಿ, ಈರಮ್ಮ, ವಿನಿತಾ ರೆಡ್ಡಿ, ಮೋತಿಲಾಲ್ ರಾಥೋಡ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಖಾಸಮಠದ ಶ್ರೀಗಳು ಕಾರ್ಯಕ್ರಮವನ್ನು ಉದ್ದೇಶಿಸಿ ವಿದ್ಯಾರ್ಥಿಗಳಿಗೆ ಜೀವನದಲ್ಲಿ ಬೆಸ್ಟ ಸೀಟ್ ಸೀಗಬೇಕು ಅಂದ್ರೆ ಬೆಡ್ ಶೀಟ್ ಒದ್ದು ಇಷ್ಟ ಪಟ್ಟು ಓದಬೇಕು, ಶ್ರಮವಿಲ್ಲದ ಸಾಧನೆ ಶೂನ್ಯ ಎಂದು ಆಶೀರ್ವಚನ ನೀಡಿದರು.

ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿಗಳಾದ ಸಂಗೀತಾ ಮತ್ತು ಸುರೇಶ್ ತಮ್ಮ ಕವನಗಳ ಮೂಲಕ ಉಪನ್ಯಾಸಕರ ವ್ಯಕ್ತಿತ್ವದ ಕುರಿತು ಗುಣಗಾನ ಮಾಡಿದರು. ಪ್ರಸ್ತಾವಿಕ ನುಡಿಗಳನ್ನು ಸಂಸ್ಥೆಯ ಖಜಾಂಚಿ ಜ್ಞಾನೇಶ್ವರ್ ರೆಡ್ಡಿ ಆಡಿದರು. ಸಾಬಿರೆಡ್ಡಿ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದ ನಿರೂಪಣೆ ಮಾಡಿದರು.

ಭಾವನಾತ್ಮಕವಾಗಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡಿಗೆ ಸಮಾರಂಭ ಭಾರತನಾಟ್ಯದೊಂದಿಗೆ ಪ್ರಾರಂಭಗೊಂಡು ಗಣ್ಯರ ಹಿತನುಡಿ, ಕವನ, ಕಾಲೇಜಿನ ಹಾಗೂ ವಿದ್ಯಾರ್ಥಿಗಳ ಸಾಧನೆಗಳ ಪಟ್ಟಿ, ಶ್ರೀಗಳ ಆಶೀರ್ವಚನದೊಂದಿಗೆ ಪೂರ್ಣಗೊಂಡಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರಾದ ರಮೇಶ್, ಗುಂಡಪ್ಪ, ವೀರೇಶ್, ನವಾದ್ ರೆಡ್ಡಿ, ನರಸರೆಡ್ಡಿ, ಅನಿಲ್, ಗುರುಮೂರ್ತಿ, ಕಿಷ್ಟಪ್ಪ, ವೈಷ್ಣವಿ, ವೀಣಾ, ಶ್ರೀನಿವಾಸ್ ನರಸಿಂಹರೆಡ್ಡಿ, ಅಂಬ್ರೇಷ, ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.

# ಪಾಲಕರು ಶಿಕ್ಷಕರ ಕೀರ್ತಿ ಹೆಚ್ಚಿಸಲು ನಿಮ್ಮ ಗುರಿಯ ಕಡೆ ಗಮನ ನಿಡಿ: ಸಾಹುಕಾರ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ತಂದೆ ತಾಯಿ ಶಿಕ್ಷಕರುಗಳ ಕನಸು ನನಸು ಮಾಡಬೇಕಾದರೆ ಹಾಗೂ ಅವರ ಕೀರ್ತಿ ಹೆಚ್ಚಿಸಬೇಕಾದರೆ ನಿರಂತರವಾಗಿ ನಿಮ್ಮ ಗುರಿಯ ಕಡೆಗೆ ಗಮನವನ್ನು ಹರಿಸಬೇಕು ಎಂದು ಜಿಲ್ಲಾ ಬಿಜೆಪಿ ಯುವ ಘಟಕದ ಅಧ್ಯಕ್ಷ ಶ್ರೀಧರ ಸಾಹುಕಾರ ಹೇಳಿದರು. ತಾಲ್ಲೂಕಿನ ಹಾಲಗೇರಾ ಸರ್ಕಾರಿ ಪ್ರೌಢ ಶಾಲೆಯಲ್ಲಿ ಪ್ರಜಾವಾಣಿ, ಡೆಕ್ಕನ್ ಹೇರಾಲ್ಡ್ ಪತ್ರಿಕೆ ಹಾಗೂ ಯಾದಗಿರಿಯ ಶಾಲಾ ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಒಂದು ದಿನದ ಪ್ರೇರಣಾ ಶಿಬಿರಕ್ಕೆ ಚಾಲನೆಯನ್ನು ಕೊಟ್ಟು ಅವರು ಮಾತನಾಡಿದರು.

ಇನ್ನೂ ಕೆಲವೆ ದಿನಗಳಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಗಳು ಆರಂಭವಾಗುತ್ತಿವೆ ನಿಮ್ಮ ಪರೀಕ್ಷೆ ಫಲಿತಾಂಶಕ್ಕಾಗಿ ಶಿಕ್ಷಕರು ಸಾಕಷ್ಟು ಶ್ರಮ ವಹಿಸುತಿದ್ದಾರೆ.ಆ ಶ್ರಮಕ್ಕೆ ತಕ್ಕ ಪ್ರತಿಫಲ ನೀವು ಕೊಡಬೇಕು ನಿವೆಲ್ಲರೂ ಅತ್ಯುನ್ನತ ಶ್ರೇಣಿಯಲ್ಲಿ ತರ್ಗಡೆಯಾಗಬೇಕು.ಇದುವೆ ನೀವು ಶಿಕ್ಷಕರಿಗೆ ಕೊಡುವ ದೊಡ್ಡ ಬಹುಮಾನ ವಿದ್ಯಾರ್ಥಿಗಳಿಗಾಗಿ ಎಸ್ ಎಸ್ ಎಲ್ ಸಿ ಪರೀ–ಕ್ಷೆ ಮುಗಿಯುವವರೆಗೂ ಶಾಲೆಗೆ ದಿನನಿತ್ಯ 100 ಪ್ರಜಾವಾಣಿ ಪೇಪರ್ ಗಳು ಕಳಿಸಿಕೊಡುವುದಾಗಿ ಈ ಸಮಯದಲ್ಲಿ ಹೇಳಿದರು.ಪ್ರಜಾವಾಣಿ ಪತ್ರಿಕೆಯು ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಹೊಂದುವದರ ಜೊತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿದೆ ಅದಕ್ಕಾಗಿ ಆ ಪತ್ರಿಕೆ ಇಂದು ಜನ ಸಾಮಾನ್ಯರ ಪತ್ರಿಕೆಯಾಗಿದೆ . ಪ್ರತಿಯೊಬ್ಬರು ಪ್ರಜಾವಾಣಿ ಪತ್ರಿಕೆಯನ್ನು ಓದಲು ಹಾತೊರೆಯುತ್ತಾರೆ ಎಂದರು.

ತಾಪಂ ಇಓ ಮಲ್ಲಿಕಾರ್ಜುನ್ ಸಂಗ್ವಾರ,ಮುಖ್ಯ ಗುರು ಎಸ್. ಬಿ ಬಂಡಿ ಮಾತನಾಡಿದರು. ತಾಲೂಕು ಪ್ರಜಾವಾಣಿ ವರದಿಗಾರ

ನಾಮದೇವ ವಾಟ್ಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು.ಈ ಸಂದರ್ಭದಲ್ಲಿ ಸಹ ಶಿಕ್ಷಕರಾದ ಮಡಿವಾಳಪ್ಪ,ಶರಣಪ್ಪ, ಮಲ್ಲಯ್ಯ, ಪ್ರೇಮಾ, ಲಲಿತಾಬಾಯಿ, ಪ್ರಜಾವಾಣಿ ಪತ್ರಿಕೆಯ ರ್‍ಕ್ಯುಲೇಶನ್ ವಿಭಾಗದ ಮಾಹಂತೇಶ, ವಿಕಾಸ ಚವ್ಹಾಣ ಎಸ್ ಡಿ ಎಂಸಿ ಅಧ್ಯಕ್ಷ ಹಾಗೂ ಇನ್ನಿತರರು ಇದ್ದರು.

ಕುಮಾರಿ ಭಾಗ್ಯಶ್ರೀ ಪ್ರಾರ್ಥನ ಗೀತೆಯನ್ನು ಹಾಡಿದರು.ಸಹ ಶಿಕ್ಷಕ ಚಂದ್ರಾಯಗೌಡ ಕಾರ್ಯಕ್ರಮ ನಿರೂಪಿಸಿ ವಂದಿಸಿದರು

# ಅಂಗನವಾಡಿ ಮಕ್ಕಳಿಗೆ ಕಥೆ ಅಂದರೆ ಅಚ್ಚುಮೆಚ್ಚು: ತಿಪ್ಪಣ್ಣ ಸಿರಸಗಿ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಅಂಗನವಾಡಿ ಮಕ್ಕಳಿಗೆ ಕಥೆ ಅಂದರೆ ಅಚ್ಚುಮೆಚ್ಚು ಹೀಗಾಗಿ ಕಲಿಕೆ ಸಂಸ್ಥೆ ತರಬೇತಿಯಿಂದ ಅಂಗನವಾಡಿಯ ಶಾಲಾ ಪೂರ್ವ ಶಿಕ್ಷಣ ಬಲವರ್ಧನೆಯಾಗಲಿದೆ ಎಂದು ಮಹಿಳಾ ಇಲಾಖೆಯ ಉಪನಿರ್ದೇಶಕ ತಿಪ್ಪಣ್ಣ ಸಿರಸಗಿ ಅವರು ಅಭಿಪ್ರಾಯಪಟ್ಟರು. ಕಲ್ಯಾಣ ನಿಂತ ನಿರಾಗದೆ ಸದಾ ಹರಿಯುವ ನೀರಾಗಬೆಕು ಇಲಾಖೆಯಲ್ಲಿ ಈ ತರಹದ ತರಬೇತಿ ನೀಡುವುದು ವಿರಳ ಆದರೆ ಕಲಿಕೆ ಟಾಟಾ ಟ್ರಸ್ಟ್ ಸಂಸ್ಥೆಯವರು ಈ ರೀತಿಯಾದ ತರಬೇತಿಗಳನ್ನು ನಿರಂತರವಾಗಿ ನೀಡುತ್ತಿರುವುದು ಸಂತೋಷದ ವಿಷಯವಾಗಿದೆ ತಾವೆಲ್ಲರು ಇದರ ಸದುಪಯೋಗಪಡಿಸಿಕೊಳ್ಳಬೇಕು ಮಹತ್ವದ ಪಾತ್ರವಹಿಸುತ್ತದೆ. ನಗರ ಪ್ರದೇಶದ ಶಾಲೆಗಳಲ್ಲಿ ಮಕ್ಕಳಿಗೆ ಮರಳು ಕಲ್ಲು ಹಳ್ಳಿಗಳಲ್ಲಿ ಸಿಗುವ ಸ್ಥಳಿಯ ಸಾಮಗ್ರಿಗಳ ಮೂಲಕ ಶಿಕ್ಷಣ ನಿಡುವಂತಾಗಿದೆ, ನಮ್ಮ ಅಂಗನವಾಡಿಯಲ್ಲಿ ಈಗಾಗಲೇ ಸ್ಥಳಿಯ ಸಾಮಗ್ರಿಗಳನ್ನು ಬಳಸಿಕೊಂಡು ಚಟುವಟಿಕೆ ಮೂಲಕ ಮಕ್ಕಳಗೆ ಶಿಕ್ಷಣ ನಿಡುತ್ತಿದ್ದಾರೆ , ಇನ್ನು



ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕಲಬುರಗಿ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಯಾದಗಿರಿ, ಹಾಗೂ ಬೆಂಗಳೂರು ಕಲಿಕೆ ಟಾಟ ಟ್ರಸ್ಟ್ ಇವರ ಸಹಯೋಗದೊಂದಿಗೆ ಫೆಬ್ರವರಿ 16 ರಿಂದ 18 ರವೆರಗೆ ಮಾದರಿ ಕೇಂದ್ರದ ಕಾರ್ಯಕತೆ–ಯರಿಗೂ ಹಾಗೂ ವಲಯದ ಮೇಲ್ವಿಚಾರಕಿಯರಿಗೂ ನಗರದ ಕಲಿಕಾ ಟ್ರಸ್ಟ್ ಕಚೇರಿಯಲ್ಲಿ ಹಮ್ಮಿಕೊಂಡ ಮೂರು ದಿನಗಳ ಕಥೆ ಹೇಳುವ ಕೌಶಲ್ಯ ತರಭೇತಿ ಕಾರ್ಯಗಾರದಲ್ಲಿ ಅವರು ಮಾತನಾಡಿದರು. ಕಲಿಕೆ ಎಂಬುದು ಎಂದು ಶಿಬಿರಾರ್ಥಿಗಳಿಗೆ ತಿಳಿಸಿದರು. ಜಿಲ್ಲಾ ನಿರೂಪಣಾಧಿಕಾರಿ ಗುರುರಾಜ ಮಾತನಾಡಿ, ಮಕ್ಕಳಲ್ಲಿ ವಿಚಾರ ಮಾಡುವ ಶಕ್ತಿ ತುಂಬಾ ಮಹತ್ವದ್ದಾಗಿದೆ, ಅವರಿಗೆ ವಿವಿಧ ಬಗೆಯ ಕಥೆಗಳನ್ನು ಹೇಳುವದರೊಂದಿಗೆ ಅವರಲ್ಲಿರುವ ಆಲೋಚನಾ ಶಕ್ತಿಯನ್ನು ಹೆಚ್ಚಿಸುವುದು ಮುಖ್ಯವಾಗಿದೆ ಆಗಾಗ ನಮಗೆ ಈ ತರ ತರಭೇತಿಯ ಅವಶ್ಯಕತೆ ಇದೆ. ಮಕ್ಕಳಿಗೆ ನೈಸರ್ಗಿಕ ವಾತಾವರಣ ಸೃಷ್ಟಿಸುವುದು ಅತಿ ಮುಖ್ಯವಾಗಿದ್ದು ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಬಾಷಾ ಬೆಳವಣಿಗೆಗೆ ಇದು ಸಹಕಾರಿಯಾಗಿದೆ. ಇಂದಿನ ದಿನಗಳಲ್ಲಿ ನಮ್ಮ ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣ ಪರಿಣಾಮಕಾರಿ ಆಗಲು ನಾವೆಲ್ಲರು ಚಾಚು ತಪ್ಪದೆ ವೇಳಾಪಟ್ಟಿ ಪ್ರಕಾರ ಶಾಲಾಪೂರ್ವ ಶಿಕ್ಷಣ ನಡೆಸಬೇಕೆಂದು ತಿಳಿಸಿದರು. ಈ ತರಬೇತಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಿಳಾ ಕಲ್ಯಾಣ ಅಧಿಕಾರಿ ಭೀಮರಾಯ, ಕಲಿಕೆ ಟಾಟಾ ಟ್ರಸ್ಟನ ಸಂಪನ್ಮೂಲ ವ್ಯಕ್ತಿಗಳಾದ ಸ್ನೆಹಾ ಕಪ್ಪನ್ನ, ಕಲಿಕೆ ಟಾಟಾ ಟ್ರಸ್ಟ್ ನ ಕಾರ್ಯಕ್ರಮ ಸಂಯೋಜಕರಾದ ಮುದ್ದೇಶ , ಶ್ರೀಮತಿ ಶಾಂತ, ಮಲ್ಲಮ್ಮ ಹಾಗೂ ಅಂಗನವಾಡಿ ಮೇಲ್ವಿಚಾರಕಿಯರು, ಕಾರ್ಯಕತೆ–ಯರು ಉಪಸ್ಥಿತರಿದ್ದರು.

# ಜಿಲ್ಲಾ ಎಸ್.ಟಿ. ಮೋರ್ಚಾ ಅಧ್ಯಕ್ಷರಾಗಿ ಮಾಸಲಿಂಗ ಚಂದಪ್ಪ ನೇಮಕ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ರಾಷ್ಟ್ರೀಯ ಅಲ್ಪಸಂಖ್ಯಾತರ, ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಒಕ್ಕೂಟವಾದ ರಾಷ್ಟ್ರೀಯ ಅಹಿಂದ ಸಂಘಟನೆ (ರಿ) ಇದರ ಯಾದಗಿರಿ ಜಿಲ್ಲಾ ಎಸ್.ಟಿ. ಮೋರ್ಚಾದ ಅಧ್ಯಕ್ಷರಾಗಿ ನಗರದ ನಿವಾಸಿ ಮಾಸಲಿಂಗ ಚಂದಪ್ಪ ಅವರನ್ನು ನೇಮಕ ಮಾಡಲಾಗಿದೆ.

ಸಂಘಟನೆಯ ರಾಜ್ಯಾಧ್ಯಕ್ಷರಾದ ಮುತ್ತಣ್ಣ ಎಸ್. ಶಿವಳ್ಳಿ ಅವರ ಆದೇಶದ ಮೇರೆಗೆ ಈ ನೇಮಕಾತಿ ನಡೆದಿದ್ದು, ರಾಜ್ಯ ಸಮಿತಿಯ ಮುಂದಿನ ಆದೇಶದವರೆಗೆ ಮಾಸಲಿಂಗ ಚಂದಪ್ಪ ಅವರು ಈ ಜವಾಬ್ದಾರಿಯನ್ನು ನಿರ್ವಹಿಸಲಿದ್ದಾರೆ. ಈ ನೇಮಕಾತಿ ಕುರಿತು ಹರ್ಷ ವ್ಯಕ್ತಪಡಿಸಿರುವ ರಾಜ್ಯ ಪದಾಧಿಕಾರಿಗಳು, ಹೊಸದಾಗಿ ಆಯ್ಕೆಯಾದ ಅಧ್ಯಕ್ಷರು ಜಿಲ್ಲೆಯಲ್ಲಿ ಅಹಿಂದ ವರ್ಗಗಳ, ಶೋಷಿತ ಸಮುದಾಯಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳ ಪರವಾಗಿ ಧ್ವನಿ ಎತ್ತಬೇಕು. ಸಂಘಟನೆಯ ಜಾತ್ಯತೀತ ತತ್ವಗಳ ಅಡಿಯಲ್ಲಿ ನ್ಯಾಯಯುತ ಹೋರಾಟಕ್ಕೆ ಶ್ರಮಿಸಬೇಕು ಎಂದು ತಿಳಿಸಿದ್ದಾರೆ.

# ಶ್ರೀ ಸರ್ವಜ್ಞ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ, ಕಾರವಾರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಫೆ.20 ರಂದು ಬೆಳಗ್ಗೆ 10 ಗಂಟೆಗೆ ಶ್ರೀ ಸರ್ವಜ್ಞ ಜಯಂತಿಯನ್ನು ಕಾರವಾರದ ಸರಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಉದ್ಘಾಟಿಸಲಿದ್ದು, ಕರ್ನಾಟಕ ರಾಜ್ಯ ಮಾರ್ಕೇಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೆ. ಸೈಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಆರ್.ವಿ ದೇಶಪಾಂಡೆ, ಶಿವರಾಮ ಹೆಬ್ಬಾರ್, ದಿನಕರ ಕೆ. ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಶಾಸಕರಾದ ಎಸ್. ವಿ.ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಡಿ.ಉಳ್ವೇಕರ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ ಮತ್ತಿತರರು ಪಾಲ್ಗೊಳ್ಳಲಿದ್ದು, ಜಿಲ್ಲಾಧಿಕಾರಿಗಳ ಕಚೇರಿಯ ವಿಪತ್ತು ನಿರ್ವಹಣೆ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ವಿಭಾಗದ ಸಹಾಯಕ ನಿರ್ದೇಶಕ ಪ್ರಶಾಂತ ಎಸ್.ಹೆಚ್ ಉಪನ್ಯಾಸ ನೀಡಲಿದ್ದಾರೆ.

# ಅಕ್ರಮ ಶ್ರೀಗಂಧ ಸಾಗಾಣಿ: ಇಬ್ಬರ ಬಂಧನ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ (ಸಂಡೂರು)

ಉತ್ತರ ಮತ್ತು ದಕ್ಷಿಣ ವಲಯದ ಅರಣ್ಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಅಕ್ರಮವಾಗಿ ಶ್ರೀಗಂಧ ಸಾಗಿಸುತ್ತಿದ್ದ ಇಬ್ಬರನ್ನು ಸೋಮವಾರ ಬಂಧಿಸಿದ್ದಾರೆ.

ಸುಶೀಲನಗರ ಗ್ರಾಮದ ಲೋಕೇಶ್ ನಾಯ್ಕ್ ಮತ್ತು ಕಿರಣ್ ಕುಮಾರ್ ಹೆಚ್.ಕೆ ಬಂಧಿತ ಆರೋಪಿಗಳು. ಒಟ್ಟು 110 ಕೆಜಿ ಶ್ರೀಗಂಧದ ತುಂಡುಗಳು ಮತ್ತು ಸಾಗಾಣಿಕೆಗೆ ಬಳಸಿದ್ದ ಮಹೇಂದ್ರ ಮೊರಾಜೊ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಆಂಧ್ರಪ್ರದೇಶದ ಅರಣ್ಯ, ಕಂದಾಯ ಮತ್ತು ಪೊಲೀಸ್ ಇಲಾಖೆಯವರ ಸಹಕಾರದೊಂದಿಗೆ ಆಂಧ್ರಪ್ರದೇಶದ ಶ್ರೀ ಸತ್ಯ ಸಾಯಿ ಜಿಲ್ಲೆಯ ರೋಲ್ಲ ಗ್ರಾಮದಲ್ಲಿರುವ ಮೆ.ನಿಷತ್ ಫ್ರೆಗ್ರೆನ್ಸ್ ಫ್ಯಾಕ್ಟರಿ ಮೇಲೆ ದಾಳಿ ನಡೆಸಿ, ಅಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ಸುಮಾರು 179 ಕೆಜಿ ಶ್ರೀಗಂಧವನ್ನು ಜಪ್ತಿ ಮಾಡಲಾಗಿದ್ದು, ಜಪ್ತಿ ಮಾಡಿದ ಸರಕನ್ನು ಪೆನುಕೊಂಡ ಎಫ್‌ಆರ್‌ಓ ವಶಕ್ಕೆ ನೀಡಲಾಗಿದೆ.

ಬಳ್ಳಾರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್. ಬಸವರಾಜ್, ಎಸಿಎಫ್ ಶರಣ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಈ ಯಶಸ್ವಿ ಕಾರ್ಯಾಚರಣೆ ನಡೆದಿದೆ.


ಅರಣ್ಯ ಅಧಿಕಾರಿಗಳಾದ ಸಂಡೂರು ಉತ್ತರ ಆರ್‌ಎಫ್‌ಓ ಬಿ.ಎಸ್.ಮಂಜುನಾಥ್ ಮತ್ತು ಸಂಡೂರು ದಕ್ಷಿಣ ಆರ್‌ಎಫ್‌ಓ ಸೈಯದ್ ದಾದಾ ಖಲಂದರ್ ನೇತೃತ್ವ ವಹಿಸಿದ್ದರು.

ಡಿಆರ್‌ಎಫ್‌ಓ ಗಳಾದ ತಿಪ್ಪೇಸ್ವಾಮಿ, ಮಹೇಶ್, ಹೊನ್ನೂರಸ್ವಾಮಿ, ಶ್ರೀಧರ್ ಹಾಗೂ ಬೀಟ್ ಫಾರೆಸ್ಟರ್ ರಾಘವೇಂದ್ರ ಮತ್ತು ಸಿಬ್ಬಂದಿ ವರ್ಗ ತಂಡದಲ್ಲಿದ್ದರು.

ಮೂರು ದಿನಗಳ ಕಾರ್ಯಾಚರಣೆ ಮಾಡಿದ್ದು, ಪ್ರಕರಣದಲ್ಲಿ ಇದುವರೆಗೆ ಒಟ್ಟು 07 ಆರೋಪಿಗಳ ಮೇಲೆ ಕೇಸ್ ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ ಎಂದು ಬಳ್ಳಾರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್. ಬಸವರಾಜ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಪಾಯಕಾರಿ ಸ್ಥಳದಲ್ಲಿ ರೀಲ್ಸ್ ಮಾಡಿ ಪೊಲೀಸರ ಅತಿಥಿಯಾದ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ



ಉತ್ತರಭಾರತದ ಯುವಕನೊಬ್ಬ ನಗರದಲ್ಲಿ ತನ್ನ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಡ್ಯಾನ್ಸ್ ಮಾಡಿ. ವಿಡಿಯೋ ಚಿತ್ರೀಕರಿಸಿ. ವಿಡಿಯೋವನ್ನು ಇನ್ಸಾಗ್ರಾಂ ಖಾತೆಯಲ್ಲಿ ಶೇರ್ ಮಾಡಿದ್ದಕ್ಕೆ ಆತ ಪೊಲೀಸರ ಅತಿಥಿಯಾಗಿದ್ದಾನೆ.

ವಿಶ್ವನಾಥ್ (29)ಹಾಲಿ ವಾಸ ನಗರದ ನಕ್ಷತ್ರ ಹೋಟೇಲ್ ಹಿಂಭಾಗ. ಸ್ವಂತ ಊರು ನಂದಾಲಪುರ,ರಾಜ್ಪೂರ್ ರಾನಿಯಾ, ಉತ್ತರಪ್ರದೇಶ. ಈತ ನಗರದ ದುರ್ಗಮ್ಮಗುಡಿ ರೈಲ್ವೇ ಅಂಡರ್ ಬ್ರಿಡ್ ಮೇಲೆ ಅಪಾಯಕಾರಿ ಸ್ಥಳದಲ್ಲಿ, ರೀಲ್ಸ್ ಮಾಡಲು ಡ್ಯಾನ್ಸ್ ಮಾಡಿದ್ದಾನೆ. ನಂತರ ವಿಡಿಯೋ ವನ್ನು ನೋಡಿದ ಬ್ರೂಸ್ ಪೇಟೆ ಪೊಲೀಸರು ಅತನನ್ನು ಜಿಲ್ಲಾ ಪೊಲೀಸ್ ಕಛೇರಿಯ ಸಾಮಾಜಿಕ ಮಾಧ್ಯಮ ಘಟಕದಲ್ಲಿ. ತಾಂತ್ರಿಕ ಡಾಟಾ ಪರಿಶೀಲನೆ ಆಧಾರದ ಮೇಲೆ ಪತ್ತೆಹಚ್ಚಿ. ವಶಕ್ಕೆ ಪಡೆದು ಅಗತ್ಯ ಮುಂದಿನ ಕಾನೂನಾತ್ಮಕ ಪ್ರಕ್ರಿಯೆ ಕೈಗೊಂಡಿದ್ದಾರೆ.

ಈ ಯುವಕ ನಗರದ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ತನಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ವಿಡಿಯೋಗಳನ್ನು ಚಿತ್ರೀಕರಿಸಿರುವ ಬಗ್ಗೆ ತಿಳಿದು ಬಂದಿದೆ.

# ಕೇಂದ್ರದ ಗ್ರಾಹಕ ವ್ಯವಹಾರಗಳ ಸಚಿವರ ಪ್ರವಾಸ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕೇಂದ್ರದ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾದ ಪ್ರಲ್ಹಾದ ಜೋಶಿ ಅವರು ರಾಯಚೂರ ಜಿಲ್ಲೆಯ ಹಟ್ಟಿಯ ಸ್ಟೇಡಿಯಂದಿಂದ ಹೆಲಿಕ್ಯಾಪ್ಟರ್ ಮೂಲಕ ಫೆಬ್ರವರಿ 20 ರಂದು ಶುಕ್ರವಾರ ಮಧ್ಯಾಹ್ನ 2.35 ಗಂಟೆಗೆ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು.

ಫೆಬ್ರವರಿ 21 ರಂದು ಶನಿವಾರ ಬೆಳಿಗ್ಗೆ 10.30 ಗಂಟೆಗೆ ಕಲಬುರಗಿಯಲ್ಲಿ ನಿಗದಿತ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 12.30 ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಹುಬ್ಬಳ್ಳಿಗೆ ಪ್ರಯಾಣಿಸುವರು.

## ಉಳಿತಾಯ ಸಂಕಲ್ಪ ಅಭಿಯಾನ

• ಮಲ್ಲಮ್ಮ ನುಡಿ ವಾರ್ತೆ, ರಾಯಚೂರು

ಅಂಚೆ ಇಲಾಖೆಯಿಂದ ಸಾರ್ವಜನಿಕರಿಗೆ ಉತ್ತಮ ಆದಾಯ ನೀಡುವ ವಿವಿಧ ಉಳಿತಾಯ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಬಳಸಿಕೊಳ್ಳುವಂತೆ ಜಾಗೃತಿ ಮೂಡಿಸಲು ಹಾಗೂ ಅಂಚೆ ಕಚೇರಿಗಳ ಉಳಿತಾಯ ಮತ್ತು ಹೂಡಿಕೆ ಯೋಜನೆಗಳಿಗೆ ಉತ್ತೇಜನ ನೀಡಲು ಉಳಿತಾಯ ಸಂಕಲ್ಪ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.

ಭಾರತ ಸರ್ಕಾರದ ಭರವಸೆಯೊಂದಿಗೆ ಅಂಚೆ ಕಚೇರಿ ಉಳಿತಾಯ ಬ್ಯಾಂಕ್ (ಪಿಒಎಸ್‌ಬಿ) ಸಾರ್ವಜನಿಕರಿಗೆ ಸುರಕ್ಷಿತ ಮತ್ತು ವಿಶ್ವಾಸಾರ್ಹ ಉಳಿತಾಯ ಹಾಗೂ ಹೂಡಿಕೆ ಯೋಜನೆಗಳನ್ನು ಒದಗಿಸುತ್ತಿದೆ. ಅಂಚೆ ಕಚೇರಿಗಳ ವಿವಿಧ ಉಳಿತಾಯ ಮತ್ತು ಹೂಡಿಕೆ ಯೋಜನೆಗಳಲ್ಲಿ ಹೂಡಿಕೆ ಮಾಡುವ ಮೂಲಕ ಗ್ರಾಹಕರು ತಮ್ಮ ಹೂಡಿಕೆಯ ಮೇಲೆ ನಿಯಮಿತ ಬಡ್ಡಿ ಹಾಗೂ ನಿರಂತರ ಆದಾಯವನ್ನು ಪಡೆಯಬಹುದು.

ಈ ಯೋಜನೆಗಳು ದೇಶದ ಎಲ್ಲಾ ಅಂಚೆ ಕಚೇರಿಗಳಲ್ಲಿ, ವಿಶೇಷವಾಗಿ ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿಯೂ ಲಭ್ಯವಿವೆ. ಇದಲ್ಲದೆ, ಗ್ರಾಹಕರು ಎಟಿಎಂ, ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ನೆಫ್ಟ್ ಹಾಗೂ ಆರ್‌ಟಿಜಿಎಸ್ ಸೇರಿದಂತೆ ಆಧುನಿಕ ಬ್ಯಾಂಕಿಂಗ್ ಸೌಲಭ್ಯಗಳನ್ನು ಸಹ ಉಪಯೋಗಿಸಬಹುದು.ಉಳಿತಾಯ ಖಾತೆ ಹೊಂದಿರುವ ಗ್ರಾಹಕರು ಕಡಿಮೆ ಪ್ರೀಮಿಯಂನಲ್ಲಿ ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ (ಪಿಎಂಎಸ್‌ಬಿವೈ) ಹಾಗೂ ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ(ಪಿಎಂಜೆಜೆಬಿವೈ) ಗಳಲ್ಲಿ ನೋಂದಾಯಿಸಿಕೊಂಡು ಅನಿರೀಕ್ಷಿತ ಸಂದರ್ಭಗಳಲ್ಲಿ ತಮ್ಮ ಕುಟುಂಬಕ್ಕೆ ಅಗತ್ಯವಾದ ಆರ್ಥಿಕ ಭದ್ರತೆಯನ್ನು ಒದಗಿಸಬಹುದು.

ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಆರ್ಥಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಇಂಡಿಯಾ ಪೋಸ್ಟ್ ಇದೀಗ ಉಳಿತಾಯ ಸಂಕಲ್ಪ ಅಭಿಯಾನವನ್ನು ಜಾರಿಗೊಳಿಸಿದೆ. ಎಲ್ಲಾ ನಾಗರಿಕರು ತಮ್ಮ ಹತ್ತಿರದ ಅಂಚೆ ಕಚೇರಿಗೆ ಭೇಟಿ ನೀಡಿ ಹೊಸ ಉಳಿತಾಯ ಖಾತೆ ತೆರೆಯುವಂತೆ ಹಾಗೂ ಅಂಚೆ ಕಚೇರಿಗಳ ವಿವಿಧ ಯೋಜನೆಗಳಲ್ಲಿ ಹೂಡಿಕೆ ಮಾಡಿ ನಿಯಮಿತ ಮತ್ತು ನಿರಂತರ ಆದಾಯ ಪಡೆಯುವಂತೆ ವಿನಂತಿಸಲಾಗಿದೆ. ಈ ಅಭಿಯಾನವನ್ನು ಯಶಸ್ವಿಗೊಳಿಸಲು ಸಾರ್ವಜನಿಕರು ಸಹಕರಿಸಬೇಕು ಎಂದು ರಾಯಚೂರು ವಿಭಾಗೀಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗೃಹ ಆರೋಗ್ಯ ಯೋಜನೆಯಡಿ ಮನೆ ಬಾಗಿಲಿಗೆ ಆರೋಗ್ಯ ಸೇವೆ

ವಿಶೇಷ ವರದಿ:

• ರಾಯಚೂರು ಮಲ್ಲಮ್ಮ ನುಡಿ ವಾರ್ತೆ

ಇತ್ತೀಚಿನ ದಿನಗಳಲ್ಲಿ ಜನರಲ್ಲಿ ವಿವಿಧ ಕಾರಣಗಳಿಂದಾಗಿ ಹೆಚ್ಚಿನ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಆಧುನಿಕ ಜೀವನ ಶೈಲಿ ಸೇರಿದಂತೆ ಅನೇಕ ಕಾರಣಗಳಿಂದ ಆರೋಗ್ಯ ಸಮಸ್ಯೆಗಳು ಗಂಭೀರವಾಗುತ್ತಿವೆ. ಇನ್ನು ಅನೇಕ ಆರೋಗ್ಯ ಸಮಸ್ಯೆಗಳಿಗೆ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆ ಪ್ರಮುಖ ಕಾರಣವಾಗಿವೆ. ಆದರೆ ಹೆಚ್ಚಿನ ಜನರು ತಮಗೆ ಸಕ್ಕರೆ ಕಾಯಿಲೆ, ರಕ್ತದೊತ್ತಡ ಇದ್ದರೂ ತಪಾಸಣೆ ಮಾಡಿಸಿಕೊಳ್ಳುತ್ತಿಲ್ಲ, ಚಿಕಿತ್ಸೆ ಪಡೆದುಕೊಳ್ಳುತ್ತಿಲ್ಲ. ಇದಕ್ಕಾಗಿ ಕರ್ನಾಟಕ ಘನ ಸರಕಾರವು ಆರೋಗ್ಯ ಇಲಾಖೆಯ ಮೂಲಕ ರಾಜ್ಯದ ಜನರ ಆರೋಗ್ಯ ಕಾಪಾಡುವ ಉದ್ದೇಶದಿಂದ ಗೃಹ ಆರೋಗ್ಯ ಯೋಜನೆಯಡಿ 14 ಆರೋಗ್ಯ ಸೇವೆಗಳನ್ನು ಗ್ರಾಮೀಣ ಭಾಗದ ಜನತೆಗೆ ಒದಗಿಸಿದ ನಂತರ ಸದರಿ ಸೇವೆಗಳ ಸದುಪಯೋಗದ ಮಹತ್ವನ್ನರಿತು ನಗರ ಪ್ರದೇಶದ ಆರ್ಥಿಕ ದುರ್ಬಲ ವರ್ಗದ ಜನತೆಗೂ ಸಹ ಶೀಘ್ರದಲ್ಲಿಯೇ ಯೋಜನೆಯನ್ನು ವಿಸ್ತರಿಸಿ ಸೌಲಭ್ಯ ಒದಗಿಸಲು ಸನ್ಮಾನ್ಯ ಮುಖ್ಯಮಂತ್ರಿಗಳು ರವರ ಆದೇಶದಂತೆ ರಾಜ್ಯ ಸರ್ಕಾರವು ಅಗತ್ಯ ಸಿದ್ಧತೆ ಕೈಗೊಂಡಿದೆ.

2024ರ ಅಕ್ಟೋಬರ್ 24ರಂದು ಯೋಜನೆಗೆ ಕೋಲಾರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಚಾಲನೆ ನೀಡಲಾಗಿತ್ತು. ರಾಜ್ಯ ಸರ್ಕಾರವು ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆಗಾಗಿ ಗೃಹ ಆರೋಗ್ಯ ಯೋಜನೆಯನ್ನು ಸರ್ಕಾರವು ನಂತರದಲ್ಲಿ ರಾಜ್ಯದಾದ್ಯಂತ ವಿಸ್ತರಿಸಿತು. ಯೋಜನೆಯ ವಿಸ್ತರಣೆಯಿಂದಾಗಿ ರಾಜ್ಯದ ಎಲ್ಲಾ ಜನರಿಗೆ ಯೋಜನೆಯ ಪ್ರಯೋಜನ ಲಭ್ಯವಾಯಿತು. ಅತಿ ಶೀಘ್ರದಲ್ಲಿ ನಗರದ ಪ್ರದೇಶದ ಆರ್ಥಿಕ ದುರ್ಬಲ ವರ್ಗದವರಿಗೂ ಮನೆ ಬಾಗಿಲಿಗೆ ಆರೋಗ್ಯ ಸೇವೆಯನ್ನು ಒದಗಿಸಲಿದೆ. ಇದು ಕೇವಲ ರೋಗ ತಪಾಸಣೆಯಷ್ಟೇ ಅಲ್ಲದೇ ರೋಗ ಪೀಡಿತರಿಗೆ ಉಚಿತ ಔಷಧಿಗಳನ್ನು ಖಚಿತಪಡಿಸುತ್ತದೆ. ಈ ಯೋಜನೆಯಿಂದ ಏನೆಲ್ಲಾ ಸೌಲಭ್ಯಗಳಿವೆ? ಎಂಬುದನ್ನು ತಿಳಿಯೋಣ ಬನ್ನಿ.. ಯೋಜನೆಯ ಉದ್ದೇಶಗಳೇನು?

ಗೃಹ ಆರೋಗ್ಯ ಯೋಜನೆಯ ಮುಖ್ಯ ಉದ್ದೇಶವೆಂದರೆ ರೋಗಗಳನ್ನು ಶೀಘ್ರವಾಗಿ ಪತ್ತೆಹಚ್ಚುವುದು. ಇದು ಅಕಾಲಿಕ ಸಾವು ಮತ್ತು ಇತರ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟುವ ಗುರಿಯನ್ನು ಹೊಂದಿದೆ. ಮಧುಮೇಹ, ಅಧಿಕ ರಕ್ತದೊತ್ತಡ, ಸ್ತನ, ಗರ್ಭಕಂಠ ಮತ್ತು ಬಾಯಿಯ ಕ್ಯಾನ್ಸರ್ ಮುಂತಾದ ಸಾಂಕ್ರಾಮಿಕವಲ್ಲದ ಕಾಯಿಲೆಗಳನು (ಎನ್‌ಸಿಡಿ) ಹೆಚ್ಚಿನ ಚಿಕಿತ್ಸೆಗಾಗಿ ಪರೀಕ್ಷಿಸಲಾಗುತ್ತದೆ. ಈ ಯೋಜನೆಯು ಅಬ್ಸ್ಟ್ರಕ್ಟಿವ್ ಸ್ಲೀಪ್ ಅಪ್ನಿಯಾ (ಒಎಸ್‌ಎ) ಮತ್ತು ಇತರ ಮಾನಸಿಕ ಆರೋಗ್ಯ ಪರಿಸ್ಥಿತಿಗಳ ರೋಗಲಕ್ಷಣಗಳನ್ನು




ಸಹ ಪರಿಶೀಲಿಸುತ್ತದೆ. ಅರ್ಹ ಪ್ರಕರಣಗಳಿಗೆ ಉಚಿತ ಔಷಧಿಗಳನ್ನು ಸಹ ಒದಗಿಸಲಾಗುವುದು.

ವರದಿಗಳ ಪ್ರಕಾರ ಒಟ್ಟು ಜನಸಂಖ್ಯೆಯ ಶೇ26.9 ರಷ್ಟು ಜನರು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದಾರೆ. ಅಲ್ಲದೆ ಶೇ.15.6 ರಷ್ಟು ಜನರು ಮಧುಮೇಹದಿಂದ ಬಳಲುತ್ತಿದ್ದಾರೆ. ಇದೆಲ್ಲವನ್ನು ಮನಗಂಡು ಕರ್ನಾಟಕ ರಾಜ್ಯ ಸರ್ಕಾರ ಈ ಯೋಜನೆಯನ್ನು ಪ್ರಾರಂಭಿಸಿತು. ಈ ಸಂಖ್ಯೆಗಳನ್ನು ಕಡಿಮೆ ಮಾಡಲು ಮತ್ತು ಎಲ್ಲರನ್ನೂ ಆರೋಗ್ಯವಾಗಿಡಲು ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಗೃಹ ಆರೋಗ್ಯ ಯೋಜನೆಯ ಪ್ರಯೋಜನಗಳು ಏನು?: ಗೃಹ ಆರೋಗ್ಯ ಯೋಜನೆಯು ಕರ್ನಾಟಕದ ಎಲ್ಲಾ ಜನರಿಗೆ ಅವರ ಮನೆ ಬಾಗಿಲಲ್ಲೇ ಆರೋಗ್ಯ ತಪಾಸಣೆಯನ್ನು ಖಚಿತಪಡಿಸುತ್ತದೆ. ಗೃಹ ಆರೋಗ್ಯ ಯೋಜನೆಯು ರೋಗಗಳನ್ನು ಮೊದಲೇ ಪತ್ತೆಹಚ್ಚುವುದನ್ನು ಖಚಿತಪಡಿಸುತ್ತದೆ ಮತ್ತು ಗಮನಾರ್ಹ ಆರೋಗ್ಯ ಸಮಸ್ಯೆಗಳು ಮತ್ತು ಅಕಾಲಿಕ ಮರಣಗಳನ್ನು ತಡೆಗಟ್ಟುತ್ತದೆ. ಅಗತ್ಯವಿರುವವರಿಗೆ ಉಚಿತ ಔಷಧಿಗಳನ್ನು ನೀಡಲಾಗುವುದು, ಚಿಕಿತ್ಸೆಯನ್ನು ಪಡೆಯಲು ಸಾಧ್ಯವಾಗದವರ ವೆಚ್ಚವನ್ನು ಸರ್ಕಾರ ಭರಿಸಲಿದ್ದು, ಈ ಯೋಜನೆ ಆರ್ಥಿಕವಾಗಿ ಹಿಂದುಳಿದವರಿಗೆ ವರದಾನವಾಗಿದೆ. ರೋಗಗಳು ಪತ್ತೆಯಾದ ನಂತರ, ಜನರು ವಿಶೇಷ ಚಿಕಿತ್ಸೆಗಾಗಿ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಕಳುಹಿಸಿ ಕೊಡಲಾಗುವುದು.

ಗೃಹ ಆರೋಗ್ಯ ಯೋಜನೆಯ ಪ್ರಮುಖ ಅಂಶಗಳು: ಗೃಹ ಆರೋಗ್ಯ ಯೋಜನೆ, ಕರ್ನಾಟಕದ ಅತಿದೊಡ್ಡ ಆರೋಗ್ಯ ರಕ್ಷಣಾ ಉಪಕ್ರಮಗಳಲ್ಲಿ ಒಂದಾಗಿದ್ದು, ತನ್ನ ಎಲ್ಲಾ ನಾಗರಿಕರನ್ನು ಒಳಗೊಳ್ಳುತ್ತದೆ. ಕರ್ನಾಟಕ ರಾಜ್ಯ ಸರ್ಕಾರವು 15ನೇಯ ಹಣಕಾಸು ಯೋಜನೆಯಡಿ ಅನುಷ್ಠಾನ ಮಾಡುತ್ತಿದ್ದು, ಯೋಜನೆಯಡಿ ಆರಂಭದಲ್ಲಿ ಜಿಲ್ಲೆಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ರಾಯಚೂರು, ಸಿಂಧನೂರು ನಗರ ವ್ಯಾಪ್ತಿಯ ಸುಮಾರು 1,04,342 ಜನರ ತಪಾಸಣೆ ಕೈಗೊಂಡು, ಅವರಲ್ಲಿ ಮೂವತ್ತು ವರ್ಷಕ್ಕಿಂತ ಮೇಲ್ಪಟ್ಟ ಸುಮಾರು 41,757 ಜನರಿಗೆ ಸೇವೆ ಒದಗಸುವ ಗುರಿಯನ್ನು ಹೊಂದಿದೆ.

ಇದಕ್ಕಾಗಿ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆರು ಪ್ರತಿದಿನ ಮನೆಗೆ ಭೇಟಿ ನೀಡಿ ನಿಗದಿತ ನಮೂನೆಯ ಪ್ರಶ್ನಾವಳಿಗಳ ಮೂಲಕ ರೋಗ ಸಮಸ್ಯೆ ಪತ್ತೆ ಹಚ್ಚಲು ಸಮಾಲೋಚನೆ ನಡೆಸಲಿದ್ದಾರೆ. ತದ ನಂತರ ಉಚಿತ ಆರೋಗ್ಯ ತಪಾಸಣೆ ಕೈಗೊಂಡು ಚಿಕಿತ್ಸೆಯ ಭಾಗವಾಗಿ ಉಚಿತ ಔಷಧಿಗಳನ್ನು ಸಹ ನೀಡಲಾಗುವುದು.

ಹೆಚ್ಚಿನ ಚಿಕಿತ್ಸೆ: ಆರೋಗ್ಯ ತಪಾಸಣೆಯ ಬಳಿಕ ರೋಗಿಗೆ ಚಿಕಿತ್ಸೆಯ ಅಗತ್ಯವಿದ್ದರೆ ಔಷಧಿ ವಿತರಣೆ ಮಾಡಲಾಗುವುದು, ಅಗತ್ಯವಿರುವ ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗುವುದು. ಹಿರಿಯ ನಾಗರಿಕರು, ಅಂಗವಿಕಲ ವ್ಯಕ್ತಿಗಳು ಮತ್ತು ಹೊರರೋಗಿಗಳ ಆರೈಕೆಯ ಅಗತ್ಯವಿರುವ ರೋಗಿಗಳಿಗೆ ವಿಶೇಷ ಸೌಲಭ್ಯಗಳನ್ನು ನೀಡಲಾಗಿದೆ. ಅಧಿಕ ರಕ್ತದೊತ್ತಡ ಮತ್ತು ಮಧುಮೇಹ ಹೊಂದಿರುವ ರೋಗಿಗಳನ್ನು ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಕಳುಹಸಿ ಚಿಕಿತ್ಸೆ ಒದಗಿಸಲಾಗುತ್ತದೆ.

ಒಟ್ಟಾರೆಯಾಗಿ ಕರ್ನಾಟಕ ಸರಕಾರವು ನಿಮ್ಮ ಅರೋಗ್ಯ- ನಮ್ಮ ಆಧ್ಯತೆ ಎಂಬ ಧ್ಯೆಯದಂತೆ ಸಮುಯದಾಯದ ಕಟ್ಟಕಡೆಯ ವ್ಯಕ್ತಿಗೂ ಗುಣಮಟ್ಟದ ಅರೋಗ್ಯ ಸೇವೆಗಳನ್ನು ನೀಡುವ ಜೊತೆಗೆ ಕುಟುಂಬವು ನೆಮ್ಮದಿಯ ಜೀವನ ಸಾಗಿಸಲು ದೃಡ ಹೆಜ್ಜೆಗಳನ್ನು ಇಟ್ಟಿದೆ.

ಡಾ.ಸುರೇಂದ್ರ ಬಾಬು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ರಾಯಚೂರು.

ಡಾ.ಚಂದ್ರಶೇಖರಯ್ಯ ಸ್ವಾಮಿ ಆರೋಗ್ಯ ಇಲಾಖೆಯ ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳು, ರಾಯಚೂರು.

## ಬಾವಗಿ ಭದ್ರೇಶ್ವರ ಜಾತ್ರೆ ಪೂರ್ವಭಾವಿ ಸಭೆ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಬೀದರ್ ತಾಲ್ಲೂಕಿನ ಬಾವಗಿ ಗ್ರಾಮದಲ್ಲಿ ಭದ್ರೇಶ್ವರ ಜಾತ್ರೆ ಪ್ರಯುಕ್ತ ಪೂರ್ವಭಾವಿ ಸಭೆ ನಡೆಯಿತು.

ಭದ್ರೇಶ್ವರ ಮಠದ ಪೀಠಾಧಿಪತಿಗಳು ಶ್ರೀ ಶಿವಕುಮಾರ್ ಸ್ವಾಮೀಜಿ ಭದ್ರೇಶ್ವರ ಜಾತ್ರಾ ಸಮಿತಿ ನೇತೃತ್ವದಲ್ಲಿ ನಿರ್ಣಯಗಳನ್ನು ಮಂಡಿಸಲಾಯಿತು.

ದೇವಸ್ಥಾನಕ್ಕೆ ಸುಣ್ಣಬಟ್ಟ ಚರ್ಚಿಸಲಾಯಿತು. ಜಾತ್ರೆ ಅಂಗವಾಗಿ ಮಾ.24 ರಿಂದ ಏಪ್ರಿಲ್ 3 ರವರೆಗೆ ' ದಾನಮ್ಮ ದೇವಿಯ ವಿಷಯದ ಮೇಲೆ ಪ್ರವಚನ ಕಾರ್ಯಕ್ರಮ ಏರ್ಪಡಿಸಲು ತೀರ್ಮಾನಿಸಲಾಯಿತು

ಜಾತ್ರಾ ಮಹೋತ್ಸವದ ಸಮಿತಿಯ ಗೌರವ ಅಧ್ಯಕ್ಷರನ್ನಾಗಿ ಚನಮಲ್ಲಪ್ಪ ಹಜ್ಜರಗಿ ಅವರನ್ನು ನೇಮಿಸಲಾಯಿಂತು

ಸಭೆ ಉದ್ದೇಶಿಸಿ ಮಾತನಾಡಿದ ಭದ್ರೇಶ್ವರ ಮಠದ ಶ್ರೀ ಶಿವುಕುಮಾರ ಸ್ವಾಮೀಜಿ ಗ್ರಾಮದ ಭಕ್ತರು ತಮ್ಮ ತನು ಮನ ಧನದಿಂದ ಈ ಜಾತ್ರೆ ಯಶಸ್ಸಿಗೆ ಶ್ರಮಿಸಬೇಕು' ಎಂದು ತಿಳಿಸಿದರು.

ಪ್ರಮುಖರಾದ ಆನಂದ್ ಸ್ವಾಮಿ ನಾಗಶಟ್ಟಿ ಅಳ್ಳಿ ಸಂತೋಷ್ ಜಗ್ದಾಳೆ ಶಿವಕುಮಾರ್ ರೀಶೆಟ್ಟಿ ಕಾಶಿನಾಥ್ ಪಕ್ಕ ಜಗನ್ನಾಥ್ ಚಿದ್ರಿ ಸಂಗಮೇಶ ಹಜ್ಜರಗಿ ರೇವಣ್ಣಪ್ಪ ಭದ್ರಣ್ಣ ಕಾಶಿನಾಥ್‌ಟಿ ರಾಜಕುಮಾರ ಪಾಟೀಲ, ರಾಜಕುಮಾರ್ ಭದ್ರಣ್ಣೆ ರಾಜಕುಮಾರ್ ವಾಡಿ ಶಿವಕುಮಾರ್ ಭದ್ರಸಾಯಿ ನಾಗೇಶ್ ಮಡಿವಾಳಪ್ಪ ಸುನೀಲ ಲೋಕೇಶ್ ಸಾಯಿ ಕುಮಾರ್ ನಾಗೇಶ್ ಹಾಗು ಭಕ್ತರು ಪಾಲ್ಗೊಂಡಿದ್ದರು.

## ಶ್ರೀ ಗ್ರಾಮದೇವಿಯ ಪೂಜೆ, ಶ್ರದ್ಧಾ ಭಕ್ತಿಯಿಂದ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ

ಮೂರು ವರ್ಷಕ್ಕೊಮ್ಮೆ ಜರಗುವ ಜಾತ್ರೆಯ ನಿಮಿತ್ಯ ಮೂರು ಮಂಗಳವಾರ ಎರಡು ಶುಕ್ರವಾರಗಳನ್ನು ಶೃಧ್ಧಾ ಭಕ್ತಿ ಸಮೇತ ಸಂಭದಿಸಿದ ಐದು ಗ್ರಾಮದ ಗ್ರಾಮಸ್ಥರು ಆಚರಿಸಿದರು.

25ರಿಂದ ಜರಗುವ ಜಾತ್ರೆ ತಯಾರಿ ಪಟ್ಟಣದಲ್ಲಿ ಭರದಿಂದ ಸಾಗಿದ್ದು ಜಾತ್ರೆಯ ನಿಮಿತ್ಯ 50ಲಕ್ಷದ ರಸ್ತೆ ನಿರ್ಮಾಣ ಕಾಮಗಾರಿ , ಸ್ವಚ್ಚತೆ, ಜಾತ್ರೆಯ ಬ್ಯಾನರ ಕಟ್ಟುವ ಕೆಲಸದಲ್ಲಿ ಕಾರ್ಯಕರ್ತರು ಉತ್ಸಾಹದಿಂದ ಭಾಗಿಯಾಗಿದ್ದಾರೆಂದು ಜಾತ್ರಾ ಉತ್ಸವ ಕಮಿಟಿಯವರು ತಿಳಿಸಿದ್ದಾರೆ.

ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ

ಪಟ್ಟಣದ ಯುವಶಕ್ತಿ ಸರ್ಕಲನಿಂದ ಗ್ರಾಮದೇವಿ ದೇವಸ್ಥಾನದಿಂದ ಸಾಗುವ ಜೋಳದ ಓಣಿಮೂಲಕ ಚೌತಮನಿ ಕಟ್ಟಿಯವರೆಗೆ ನಿರ್ಮಾಣವಾಗುವ ರಸ್ತೆ ಕಾಮಗಾರಿಗೆ ಸಚಿವರ ಆಪ್ತ ಸಹಾಯಕ ಹರಿಶಂಕರ ಮಠದ ಚಾಲನೆ ನೀಡಿದರು.

ಇ ಸಂಧರ್ಬದಲ್ಲಿ ಜಾತ್ರಾ ಉತ್ಸವ ಕಮಿಟಿ ಅಧ್ಯಕ್ಷ ಸುಧಿರ ಬೋಳಾರ, ಗ್ರಾಮದೇವಿ ಟ್ರಸ್ಟ ಕಮಿಟಿ ಅಧ್ಯಕ್ಷ ಶ್ರೀಕಾಂತ ಖಟಾವಕರ, ಬ್ಲಾಕ ಕಾಂಗ್ರೆಸ ಅಧ್ಯಕ್ಷ ಮಂಜುನಾಥ ಮುರಳ್ಳಿ, ಕೃಷಿಕ ಸಮಾಜದ ಅಧ್ಯಕ್ಷ ಬಾಬು ಅಂಚಟಗೇರಿ, ಭಾಳು ಖಾನಾಪೂರ, ಕುಮಾರ ಖಂಡೇಕರ, ರಾಜು ಚಿಕ್ಕಮಠ, ರಾಘವೇಂದ್ರ ಹುಲಿಹೊಂಡ, ವಿಜಯ ಮುರಾರಿ ಪ್ರಸನ್ನ ಡಂಬಳ, ಸುನೀಲ ಗೌಡಣ್ಣವರ, ಸಧ್ಬಕ್ತರು ಇದ್ದರು.

## ಮಹಾಸಭೆಯ ಅಧ್ಯಕ್ಷ ಖಂಡ್ರೆ ಅಭಿನಂದನಾ ಸಮಾರಂಭ ಇಂದು

• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ತಾಲೂಕಿನ ಹಲಬರ್ಗಾ ಗ್ರಾಮದ ಮಹಾಮಠ ಶರಣಗಿರಿಯಲ್ಲಿ ಗುರುವಾರ ಸಾಯಂಕಾಲ 4 ಗಂಟೆಗೆ ಮಹಾಮಠದ ಮೂರನೆಯ ವಾರ್ಷಿಕೋತ್ಸವ ಮತ್ತು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಅವರ ಅಭಿನಂದನಾ ಸಮಾರಂಭ ಜರುಗಲಿದೆ.



ಭಾತಂಬ್ರಾ ಜಗದ್ಗುರು ನಿರಂಜನ ಸಂಸ್ಥಾನ ಮಠದ ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಡಾ.ಜಗದ್ಗುರು ಗುರುಬಸವ ಸ್ವಾಮೀಜಿ, ಡಾ.ಹಾವಗಿಲಿಂಗೇಶ್ವರ ಶಿವಾಚಾರ್ಯ, ಬಸವಾಂಜಲಿ ತಾಯಿ ನೇತೃತ್ವ ವಹಿಸಲಿದ್ದಾರೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಸಮಾರಂಭ ಉದ್ಘಾಟಿಸಲಿದ್ದಾರೆ.

ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆ ಮಾಜಿ ಅಧ್ಯಕ್ಷ ವೈಜಿನಾಥ ಪಾಟೀಲ್ ಜ್ಯಾಂತಿ ಅಧ್ಯಕ್ಷತೆ ವಹಿಸಲಿದ್ದಾರೆ.

ಸಾಹಿತಿ ಸುನಿತಾ ದಾಡಗೆ ಅನುಭಾವ ನೀಡಲಿದ್ದಾರೆ. ಸಂಸದ ಸಾಗರ ಖಂಡ್ರೆ, ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಬಸವಣ್ಣಪ್ಪ ನೇಳಗೆ, ಶಿವಶಂಕರ ಪಾಟೀಲ್, ಸೂರ್ಯಕಾಂತ ಬಿರಾದಾರ್, ಪದ್ಮಿನಿಬಾಯಿ ಶಿವಪಾಲಸಿಂಗ್, ಬಾಬುರಾವ ಹಾವಶೆಟ್ಟಿ ಸೇರಿದಂತೆ ಮುಂತಾದವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಪೂರ್ವಭಾವಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಫೆ.28 ರಿಂದ ಮಾರ್ಚ 17ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಗಳನ್ನು ಸುಗಮವಾಗಿ ಮತ್ತು ಯಶಸ್ವಿಯಾಗಿ ನಡೆಸುವ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯು ಫೆ.21ರ ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ. ಸಂಬಂಧಿಸಿದ ಅಧಿಕಾರಿಗಳು ಸಭೆಗೆ ಖುದ್ದು ಹಾಜರಾಗಬೇಕು ಎಂದು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ರೇಣುಕಾಚಾರ್ಯ ಜಯಂತಿ ಪೂರ್ವಭಾವಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮಾರ್ಚ 1ರಂದು ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯು ಫೆ.24ರ ಬೆಳಗ್ಗೆ 11 ಗಂಟೆಗೆ ಯಕ್ಲಾಸಪುರ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಭೆಗೆ ಆಗಮಿಸಲು ಕೋರಿದೆ ಎಂದು ಪ್ರಕಟಣೆ ತಿಳಿಸಿದೆ.

## ಪಡಿತರ 258 ಚೀಲ 12.10 ಕ್ವಿಂಟಾಲ್ ಅಕ್ರಮ ಅಕ್ಕಿ ಜಪ್ತಿ

• ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು



ಬಡವರು ಜೀವನೋಪಾಯಕ್ಕೆ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಸರ್ಕಾರ ಸಾರ್ವಜನಿಕರು ಪಡಿತರ ಕಾರ್ಡ್ ಮೂಲಕ ಅಕ್ಕಿಯನ್ನು ವಿತರಣೆ ಮಾಡುತ್ತಿತ್ತು.ಆದರೆ ಅದನ್ನೆ ಬಂಡವಾಳ ಮಾಡಿಕೊಂಡು ಅಕ್ರಮ ಅಕ್ಕಿ ದಂಧೆಕೊರರು ಹೊರ ರಾಜ್ಯದ ದಂಧೆರೊಂದಿಗೆ ಜೋಡಿಸಿ ಉತ್ತರ ಪ್ರದೇಶದ ಕಳ್ಳಸಂತೆಯಲ್ಲಿ ಮಾರಾಟ ಮಾಡುವ ಗುಂಪೊಂದು ನಗರದ ಕುರಿ ಸಂತೆಯಲ್ಲಿ ಇಂಚರ ಲಾರಿಯಿಂದ ಕಂಟೇನರ್ ಲಾರಿಗೆ ಅಕ್ರಮ ಅಕ್ಕಿ ಶಿಫ್ಟ್ ಮಾಡುತ್ತಿರುವ ಸಾರ್ವಜನಿಕರ ಕಣ್ಣಿಗೆ ಬಿದ್ದಿದ್ದು. ಅವರು ಮಾಹಿತಿ ಮೇರೆಗೆ ಆಹಾರ ನಿರೀಕ್ಷಕರು ಆನಂದ್ ಮೋಹನದಾಸ ಹಾಗೂ ಹನುಮೇಶ ಅವರು ವಿಚಾರಿಸಿದಾಗ ಸರಿಯಾದ ಮಾಹಿತಿ ನೀಡದೇ ಇದ್ದಲ್ಲಿ ಸ್ಥಳೀಯ ಪೊಲೀಸ್ ಠಾಣೆಗೆ ತೆಗೆದುಕೊಂಡು ಕೇಸ್ ದಾಖಲಿಸಿದ್ದಾರೆ.

ಸಿಂಧನೂರು.ಮಸ್ಕಿ.ತಾವರಗೇರಾ ಸೇರಿದಂತೆ ವಿವಿಧ ಕಡೆಗೆ ಸುತ್ತ ಮುತ್ತಲಿನ ಅಕ್ರಮ ಪಡಿತರ ಅಕ್ಕಿ ದಂಧೆಕೊರರು ಉತ್ತರ ಪ್ರದೇಶದ ಹಾಗೂ ಇತರ ಪ್ರದೇಶಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಇಂತಹಾ ದಂಧೆ-ಕೋರರಿಗೆ ಬೆನ್ನೆಲುಬಾಗಿ ನಿಂತವರು ಮಾನ್ವಿ ತಾಲೂಕಿನ ವೀರಭದ್ರಪ್ಪ ಅವರ ತಮ್ಮ ಸಿದ್ದನಗೌಡ ಕಿಂಗ್ ಮೇಕರ್ ರಾಗಿ ರಾಯಚೂರು ಜಿಲ್ಲೆಯಾದ್ಯಂತ ಮೆರೆಯುತ್ತಿದ್ದಾರೆ ಎಂದು ಸಾರ್ವಜನಿಕರು ದೂರವಾಗಿದೆ.

ದಿ.18-02-2026 ರಂದು 11-40 ಎ.ಎಮ್ ಸುಮಾರಿಗೆ ಸಿಂಧನೂರು ನಗರದ ಕುಷ್ಟಗಿ ರಸ್ತೆಯಲ್ಲಿ ಬರುವ ಕುರಿ ಸಂತೆ ಅವರಣದಲ್ಲಿ ಯಾವುದೇ ದಾಖಲಾತಿಗಳಿಲ್ಲದೇ ಅನಧಿಕೃತವಾಗಿ ಪಡಿತರ ಅಕ್ಕಿಯನ್ನು ಒಂದು ಲಾರಿಯಿಂದ ಇನ್ನೊಂದು ಲಾರಿಗೆ ಲೋಡ್ ಮಾಡುತ್ತಿರುವ ಬಾತ್ಮಿ ಮೇರೆಗೆ ಫಿರ್ಯಾದಿದಾರರು ಮತ್ತು ಅಹಾರ ಶಿರಿಸ್ತೆದಾರರು ಪೊಲೀಸ್ ಸಿಬ್ಬಂದಿ, ಪಂಚರೊಂದಿಗೆ ಸ್ಥಳಕ್ಕೆ ಹೋಗಿ ದಾಳಿ ಮಾಡಿ 1) ಪಡಿತರ ಅಕ್ಕಿ ಇರುವ 258 ಬಾಯಿ ಕಟ್ಟಿದ ಚೀಲಗಳು ಅದರ ತೂಕ 120.10 ಕ್ವಿಂಟಾಲ್ ಅಕಿ ರೂ 1,80,150/-, 2) ಲಾರಿ ನಂ ಜಿ ಜೆ-02/ಎಟಿ-5411, ಅಕಿ ರೂ 8,00,000/-, 3) ಲಾರಿ ನಂ ಕೆಎ-01/ಡಿ-7536, ಆಕಿ ರೂ 5,00,000/- ಗಳನ್ನು ಜಪ್ತಿ ಮಾಡಿಕೊಂಡಿದ್ದರು .

ಆರೋಪಿ ನಂ 01 ರಿಂದ 02 ರವರು ಯಾವುದೆ ದಾಖಲಾತಿಗಳು ಇಲ್ಲದೆ ಅನಧೀಕೃತವಾಗಿ ಪಡಿತರ ಅಕ್ಕಿಯನ್ನು ಹೆಚ್ಚಿನ ಬೆಲೆಗೆ ಕಾಳ ಸಂತೆಯಲ್ಲಿ ಮಾರಾಟ ಮಾಡುವ ಕುರಿತು ಆರೋಪಿ ನಂ 03 ರವರ ಚಾಲನೆ ಮಾಡಿಕೊಂಡಿರುವ ಲಾರಿಯಲ್ಲಿ ಲೋಡ್ ಮಾಡಿದ್ದು, ಆರೋಪಿ ನಂ 04 & 05 ರವರು ಪಡಿತರ ಅಕ್ಕಿಯನ್ನು ಸಾಗಣಿಕೆ ಮಾಡಲು ಲಾರಿಗಳನ್ನು ಕೊಟ್ಟಿರುತ್ತಾರೆ ಅಂತಾ ಪಂಚನಾಮೆ, ವರದಿ ದೂರಿನ ಸಾರಾಂಶದ ಮೇಲಿಂದಾ ಠಾಣೆ ಗುನ್ನೆ ನಂ.62/2026, ಕಲಂ. 3 & 7 ಇ.ಅ.ಂಅಖಿ-1955 . ಕೇಸ್ ದಾಖಲಿಸಿಕೊಂಡಿದ್ದಾರೆ.

## ಅಂತರ ಕಾಲೇಜು ಖೋಖೋ ಪಂದ್ಯಾವಳಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಮಖಂಡಿಯ ಬಾಗಲಕೋಟೆ ವಿಶ್ವವಿದ್ಯಾಲಯದ ಅಂತರ ಕಾಲೇಜು ಖೋಖೋ ಪಂದ್ಯಾವಳಿ ಫೆ.19 ಹಾಗೂ 20 ರಂದು ಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜರುಗಲಿವೆ.

ಎರಡು ದಿನಗಳ ಕಾಲ ನಡೆಯುವ ಈ ಪಂದ್ಯಾವಳಿಯನ್ನು ಫೆ.19 ಮುಂಜಾನೆ 10.30 ಗಂಟೆಗೆ ಮಾಜಿ ಸಚಿವ ಎಸ್. ಆರ್.ಪಾಟೀಲ ಉದ್ಘಾಟಿಸಲಿದ್ದು, ಕಾಲೇಜಿನ ಪ್ರಾಚಾರ್ಯ ಅರುಣಕುಮಾರ ಗಾಳಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಎಚ್.ಆರ್.ನಿರಾಣಿ, ಜಿಪಂ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ, ಸಂತೋಷ ಹೊಕ್ರಾಣಿ, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ವಿಠ್ಠಲ ವಾಲಿಕಾರ, ಬಾಗಲಕೋಟೆ ವಿವಿ ಕ್ರೀಡಾ ಸಂಯೋಜಕ ಕೆ.ಎಂ.ಶಿರಹಟ್ಟಿ, ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಅಧ್ಯಕ್ಷೆ ಶಾರದಾ ನಿಂಬರಗಿ, ಪ್ರೊ.ಎಸ್.ಬಿ.ಚಳಗೇರಿ ಆಗಮಿಸಲಿದ್ದು, ಸ್ಥಳೀಯ ಕಾಲೇಜಿನ ಐಕ್ಯೂಎಸಿ ಸಂಯೋಜಕ ಬಸವರಾಜ ಬೀಳಗಿ, ಕ್ರೀಡಾ ನಿರ್ದೇಶಕ ನೀಲಪ್ಪ ಕುರಿ ಉಪಸ್ಥಿತರಿರುವರು.

ಅಂದೇ ಸಾಯಂಕಾಲ 4.30 ಗಂಟೆಗೆ ಬಹುಮಾನ ವಿತರಣೆ ಹಾಗೂ ಸಮಾರೋಪ ಸಮಾರಂಭ ನಡೆಯಲಿದ್ದು ಬಸವೇಶ್ವರ ದೈಹಿಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಸಂಗಮೇಶ ಬಿರಾದಾರ ಬಹುಮಾನ ವಿತರಿಸುವರು. ಪ್ರಾಂಶುಪಾಲ ಅರುಣಕುಮಾರ ಗಾಳಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಇಲಕಲ್ಲಿನ ಸುಭಾಸ ಹುನ್ನಳ್ಳಿ, ಮಂಜುನಾಥ ದೇವನಾಳ ಪಾಲ್ಗೊಳ್ಳುವರು.

ಪಂದ್ಯಾವಳಿಯಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯ ವ್ಯಾಪ್ತಿಯ ಸುಮಾರು 70 ಕಾಲೇಜುಗಳ ಕೊಕ್ಕೊ ಕ್ರೀಡಾಪಟುಗಳು ಪಾಲ್ಗೊಳ್ಳುವರು.

ಫೆ.20 ಬಾಗಲಕೋಟೆ ವಿಶ್ವವಿದ್ಯಾಲಯ ಕೊಕ್ಕೊ ತಂಡದ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಕಟಣೆ ತಿಳಿಸಿದೆ.

# ನನ್ನ ಕಥೆಗಳಿಗೆ ಕಾರ್ಪೊರೇಟ್ ಜಗತ್ತು ಸೃಷ್ಟಿಸುತ್ತಿರುವ ತಲ್ಲಣವೇ ಪ್ರೇರಣೆ: ಮಹಾಂತೇಶ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಅಭಿವೃದ್ಧಿಯ ನೆಪದಲ್ಲಿ ಕಾರ್ಪೊರೇಟ್ ಜಗತ್ತು ಸೃಷ್ಟಿಸುತ್ತಿರುವ ಆತಂಕ, ತಲ್ಲಣಗಳೇ ನನ್ನ ಕತೆಗಳ ಭಿತ್ತಿಯನ್ನು ರೂಪಿಸಿವೆ ಎಂದು ಕತೆಗಾರ ಮಹಾಂತೇಶ ನವಲಕಲ್ ಅಭಿಪ್ರಾಯಪಟ್ಟರು.

ಅವರು ಇಂದು ನಗರದ ಸರಳಾದೇವಿ ಕಾಲೇಜಿನಲ್ಲಿ ಕನ್ನಡ ವಿಭಾಗದಿಂದ ಆಯೋಜಿಸಿದ್ದ ' ಪಠ್ಯ ಲೇಖಕರೊಂದಿಗೆ ಸಂವಾದ ' ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೆಲವು ಕಂಪನಿಗಳು ಕಳಪೆ ಬೀಜ, ಗೊಬ್ಬರವನ್ನು ಗ್ರಾಮೀಣ ರೈತರಿಗೆ ಕೊಡುವುದರ ಮೂಲಕ ದುಡಿವ ಸಮುದಾಯವನ್ನು ವಂಚಿಸುತ್ತಿವೆ. ಹೀಗಾಗಿ ರೈತ ಕಷ್ಟದಲ್ಲಿ ಇದ್ದಾನೆ. ಸಾವಿಗೂ ಈಡಾಗುತ್ತಿದ್ದಾನೆ. ಬೀಜದ ಏಕಸ್ವಾಮ್ಯತೆ ಎಗ್ಗಿಲ್ಲದೆ ನಡೆಯುತ್ತಿದೆ. ವಿದೇಶದಲ್ಲಿ ನಿಷೇಧಕ್ಕೆ ಒಳಪಟ್ಟವಸ್ತುಗಳು ನಮ್ಮ ದೇಶದಲ್ಲಿ ರಾಜಾರೋಷವಾಗಿ ಮಾರಾಟವಾಗುತ್ತಿರುವುದು ದುರಂತದ ಸಂಗತಿ. ಇಂತಹ ಹಲವು ವೈಪರಿತ್ಯಗಳನ್ನು ನನ್ನ ಕಥೆಗಳು ಸೂಕ್ಷ್ಮವಾಗಿ ತೆರೆದಿಟ್ಟಿವೆಂದರು. .

ನಮ್ಮ ಯೋಚನೆಗಳು ಇಂದು ವಿಲೋಮ ಸ್ಥಿತಿಗೆ ತಲುಪದಂತೆ ನೋಡಿಕೊಳ್ಳಬೇಕಾಗಿರುವುದು ನಮ್ಮೆಲ್ಲರ ಹೊಣೆಗಾರಿಕೆ.ನಿತ್ಯ ನಡೆವ ಹುನ್ನಾರಗಳ ಬಗೆಗೆ ಸೂಕ್ಷ್ಮ ತಿಳುವಳಿಕೆ, ಪ್ರತಿರೋಧ ಅಗತ್ಯ ಎಂದು ಒತ್ತಿ ಹೇಳಿದರು.

ಅಧ್ಯಕ್ಷತೆವಹಿಸಿ ಮಾತನಾಡಿದ ವಿಭಾಗದ ಮುಖ್ಯಸ್ಥ ದಸ್ತಗೀರಸಾಬ್ ದಿನ್ನಿ, ನವಲಕಲ್ ನಮ್ಮ ನಾಡು ಕಂಡ ಅಪೂರ್ವ ಕತೆಗಾರರು. ಅವರ ಕತೆಗಳು ವ್ಯವಹಾರ ಪ್ರಧಾನ ಜಗತ್ತನ್ನು ಕಲಾತ್ಮಕವಾಗಿ ವ್ಯಂಗ್ಯ,ವಿಡಂಬನೆಯಿಂದ ಅನಾವರಣಗೊಳಿಸಿವೆ. ಗ್ರಾಮೀಣ ಬದುಕನ್ನು ಶೋಧಿಸುವಂತಿವೆ , ಲೇಖಕರ ಪ್ರಧಾನ ಕಾಳಜಿ ಮನುಷ್ಯ ಸಂಬಂಧಗಳನ್ನು ಶೋಧಿಸುವುದರ ಕಡೆ ತುಡಿದಿದೆಂದರು.

ಕತೆಗಾರ ವೀರೇಂದ್ರ ರಾವಿಹಾಳ ಮಾತನಾಡಿ, ವಿದ್ಯಾರ್ಥಿಗಳು ನವಲಕಲ್ ರ ಹೊಸ ಅನುಭವದ ಕಥೆಗಳನ್ನು ಓದುತ್ತಲೇ ಅವು ಧ್ವನಿಸುವ ಆಶಯ, ಕಾಳಜಿಗೆ ದನಿಯಾಗಬೇಕು. ಇತಿಹಾಸವನ್ನು ಹೊಸದೃಷ್ಟಿಕೋನದಿಂದ ನೋಡಬೇಕು. ಓದಿನ ಅಭಿರುಚಿಯೊಂದಿಗೆ ಸಾಂಸ್ಕೃತಿಕ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು ಎಂದರು. ಪ್ರಾಧ್ಯಾಪಕ ಟೆಂಗುರಿ ದೊಡ್ಡಬಸವರಾಜ ಇದ್ದರು. ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಯಿತು.

# ಎರಡು ದಿನಗಳ ಫ್ಯಾಕಲ್ಟಿ ಡೆವಲಪ್ ಮೆಂಟ್ ಪ್ರೋಗ್ರಾಮ್




**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಪ್ರತಿಷ್ಠಿತ ವಿದ್ಯಾಸಂಸ್ಥೆ ವೀರಶೈವ ವಿದ್ಯಾವರ್ಧಕ ಸಂಘದ ಅಲ್ಲಂ ಕರಿಬಸಪ್ಪ ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸಂಸ್ಥೆಯಲ್ಲಿ "ಕಾನ್ಟೆಂಪೊರರಿ ಟೀಚಿಂಗ್ ಸ್ಟ್ರಾಟಜೀಸ್ ಇನ್ ಅಕೌಂಟಿಂಗ್, ಬುಸಿನೆಸ್ ಸ್ಟಡೀಸ್ ಮತ್ತು ಟ್ಯಾಕ್ಸೇಷನ್" ವಿಷಯದ ಮೇಲೆ ಎರಡು ದಿನಗಳ ಫ್ಯಾಕಲ್ಟಿ ಡೆವೆಲೆಪ್ಮೆಂಟಟ್ ಪ್ರೋಗ್ರಾಮ್ ಕಾರ್ಯಾಗಾರವನ್ನು ವೀ ವಿ. ಸಂಘದ ಕಾರ್ಯದರ್ಶಿಗಳಾದ ಡಾ. ಅರವಿಂದ ಪಟೇಲ್ ಇವರು ಉದ್ಘಾಟಿಸಿ ಮಾತನಾಡುತ್ತ ಎಫ್ ಡಿ ಪಿ ಕಾರ್ಯಾಗಾರಗಳು ಬೋಧಕರುಗಳ ಬೋಧನಾ ಶೈಲಿಯನ್ನು ಮತ್ತು ಕೌಶಲ್ಯಗಳನ್ನು ಹೆಚ್ಚಿಸುತ್ತವೆ. ಇಂದು ತಂತ್ರಜ್ಞಾನ ಅಭಿವೃದ್ಧಿ ಹೊಂದಿದ್ದು, ಸಾಕಷ್ಟು ವಿಷಯಾಧಾರಿತ ಪಠ್ಯಕ್ರಮಗಳ ಸೌಲಭ್ಯವಿರುತ್ತದೆ. ಕಾಲಕಾಲಕ್ಕೆ ಬೋಧಕರು ನವೀಕರಣರಾಗಬೇಕು ಎಂದು ಕರೆಕೊಟ್ಟರು. ಆಡಳಿತ ಮಂಡಳಿ ಅಧ್ಯಕ್ಷರಾದ ಟಿ. ನರೇಂದ್ರಬಾಬು ಇವರು ಮಾತನಾಡಿ ವೀ. ವಿ. ಸಂಘ ಕಳೆದ ಒಂದು ಶತಮಾನದಿಂದಲೂ ಶಿಕ್ಷಣ ರಂಗದಲ್ಲಿ ಹೊಸ ಕ್ರಾಂತಿಯನ್ನೇ ಮಾಡಿದೆ ಗುಣಾತ್ಮಕ ಶಿಕ್ಷಣವನ್ನು ನೀಡುವಲ್ಲಿ ಮಹತ್ವದ ಜವಬ್ದಾರಿಯನ್ನು ಹೊಂದಿದೆ ಜಾಗತಿಕ ಮಟ್ಟದಲ್ಲಿ ಉದ್ಯೋಗಗಳನ್ನು ಕಲ್ಪಿಸುವಲ್ಲಿ ತನ್ನದೆ ಆದ ವಿಶೇಷ ಆಸಕ್ತಿಯನ್ನು ಹೊಂದಿದೆ ಎಲ್ಲರೂ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಲಾತ್ಮಕ ಬೋಧಕರಾಗಬೇಕೆಂದು ತಿಳಿಸಿದರು. "ಕಾನ್ಟೆಂಪೊರರಿ ಟೀಚಿಂಗ್ ಸ್ಟ್ರಾಟಜೀಸ್ ಇನ್ ಅಕೌಂಟಿಂಗ್, ಬುಸಿನೆಸ್ ಸ್ಟಡೀಸ್ ಮತ್ತು ಟ್ಯಾಕ್ಸೇಷನ್" ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಡಾ. ಪ್ರತೀಮಾ ಕೆ, ಟೆಡೆಕ್ಸ್ ಸ್ಪೀಕರ್ ಮತ್ತು ಶ್ರೀಮತಿ ಅಶ್ವಿನಿ ಜಿ, ಉದ್ಯಮಿದಾರರು ಇವರು ಕಾರ್ಯಾಗಾರವನ್ನು ನಡೆಸಿಕೊಡಲಿದ್ದಾರೆ. ಸದ್ರಿ ಕಾರ್ಯಕ್ರಮದಲ್ಲಿ ಬಳ್ಳಾರಿ, ವಿಜಯನಗರ ಕೊಪ್ಪಳ ಜಿಲ್ಲೆಗಳ ವಿವಿಧ ಸ್ನಾತಕೋತ್ತರ, ಸ್ನಾತಕ ಮತ್ತು ಪಿ ಯು ಕಾಲೇಜುಗಳ ಸುಮಾರು 100 ಕ್ಕೂ ಹೆಚ್ಚು ಪ್ರಾಧ್ಯಾಪಕರುಗಳು ಭಾಗವಹಿಸಿದ್ದಾರೆ. ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರಾದ ಡಾ. ಕೆ. ಟಿ. ಗೋಪಿ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಯೋಗಾನಂದರೆಡ್ಡಿ ನಿರೂಪಿಸಿದರು. ಎಲ್ಲಾ ಪ್ರಾಧ್ಯಾಪಕರು ಮತ್ತು ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು.

# ದೇವದಾಸಿಯರ ಪುನರ್ ಸರ್ವೆಗೆ ಆಗ್ರಹ




**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಎಲ್ಲ ದೇವದಾಸಿ ಮಹಿಳೆಯರನ್ನು ಸರ್ವೆಗೆ ಒಳಪಡಿಸಬೇಕೆಂದು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಈ ಕುರಿತು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿದ ಸಂಘದ ಗೌರವ ಅಧ್ಯಕ್ಷ ಯು ಬಸವರಾಜ. ಕರ್ನಾಟಕ ಸರ್ಕಾರ ಇತ್ತೀಚಿಗೆ ಮಾಜಿ ದೇವದಾಸಿ ಮಹಿಳೆಯರು ಮತ್ತು ಅವರ ಮೂರು ತಲೆಮಾರಿನ ಕುಟುಂಬಗಳ ಸದಸ್ಯರ ಗಣತಿ ಕಾರ್ಯವನ್ನು ಕೈಗೊಂಡಿದೆ ಅದು ಅಪೂರ್ಣವಾಗಿದೆ, ಸಮಗ್ರವಾಗಿಲ್ಲ. 2007–08 ರ ಗಣತಿಯೇ ಅಸಮರ್ಪಕವಾಗಿತ್ತು 1982 ರಲ್ಲಿ ಅಥವಾ ನಂತರ ಅವರು ದೇವದಾಸಿ ಮಹಿಳೆಯರಾಗಿದ್ದಾರೆ ಅವರನ್ನ ಆ ಗಣತಿ ಪರಿಗಣಿಸಿರಲಿಲ್ಲ. ಆದ್ದರಿಂದ ಮರುಗಣತಿ ಮಾಡುವಂತೆ ಒತ್ತಾಯ ಮಾಡಿತ್ತು.

ಈಗ ಪುನಃ ಮತ್ತೆ ಮರು ಸಮೀಕ್ಷೆ ಹೆಸರಿನಲ್ಲಿ 2025 ರಲ್ಲಿ ಸರ್ಕಾರ ಗಣತಿ ಮಾಡಿತು. ಇದು ಸಹ ಪರಿಪೂರ್ಣವಾಗಿಲ್ಲ.. ಈ ಸಮೀಕ್ಷೆಯಲ್ಲಿ 23,385 ಜನರನ್ನು ಮಾತ್ರ ಗುರುತಿಸಿದೆ. ಆದರೂ ಕೂಡ ಈ ಸಮೀಕ್ಷೆಯನ್ನು ತಿರಸ್ಕಾರ ಮಾಡ್ತಾ ಇಲ್ಲ. ಸಮೀಕ್ಷೆಯಿಂದ ಹೊರಗೆ ಉಳಿದಂತ ಮಹಿಳೆಯರ ಎರಡು ಮೂರು ತಲೆಮಾರಿನ ಕುಟುಂಬಗಳನ್ನು ಒಳಗೊಳ್ಳುವುದಕ್ಕೆ ಈ ಸಮೀಕ್ಷೆಯನ್ನು ಮುಂದುವರಿಸಬೇಕು ಎಂದಿದ್ದಾರೆ.

ಮಕ್ಕಳು ಮೊಮ್ಮಕ್ಕಳನ್ನು ಕೂಡ ಗಣತಿಯಲ್ಲಿ ಸೇರಿಸಿಕೊಳ್ಳುವುದಕ್ಕೆ 108 ದಾಖಲಾತಿಗಳನ್ನ ಕೇಳುವ ಮೂಲಕ ಅವರು ಗಣತಿಗೆ ಬರದ ರೀತಿಯಲ್ಲಿ ತಡೆಯಲಾಗಿದೆ. ಅದೇ ರೀತಿಯಲ್ಲಿ 82 ರ ನಂತರ ದೇವದಾಸಿಯರಾದಂತವರನ್ನು ಕೂಡ ಈ ಸರ್ವೆಯಲ್ಲಿ ಸೇರಿಸದೆ ಹೊರಗಿಡಲಾಗಿದೆ. ಅದಕ್ಕಾಗಿ ಪನರ್ ಸರ್ವೆ ಆಗಬೇಕು ಎಂದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಬಿ ಮಾಳಮ್ಮ ಜಿಲ್ಲಾ ಕಾರ್ಯದರ್ಶಿ ಎ ಸ್ವಾಮಿ, ಜಿಲ್ಲಾ ಅಧ್ಯಕ್ಷೆ ಈರಮ್ಮ ಕುರುಗೋಡು ತಾಲೂಕು ಕಾರ್ಯದರ್ಶಿ, ಸಿ ವೀರೇಶ್ ಮೊದಲಾದವರು ಇದ್ದರು

# ಸಂಗೀತವೇ ರಸಿಕರ ರಸದೌತಣ ಬಸವರಾಜ ಅಭಿಮತ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:** ಸಂಗೀತವೇ ರಸಿಕರ ರಸದೌತಣ ಸಂಗೀತವೇ ತಪಸ್ಸು ಸಂಗೀತವೇ ಧ್ಯಾನ ಎಂದು ಬಳ್ಳಾರಿ ನಗರದ ಗೊಗ್ಗರಟ್ಟಿಯಲ್ಲಿರುವ ಶಿವ ದೀಕ್ಷಾ ಮಂದಿರದಲ್ಲಿ ಶ್ರೀ ಹುಲಿಕುಂಟೆರಾಯ ತಗಲಗೊಂಬೆ ಕಲಾತಂಡದವರು ಮಹಾಶಿವರಾತ್ರಿ ಅಂಗವಾಗಿ ಹಮ್ಮಿಕೊಂಡ ಹರ ಹರ ಶಂಭೋ ಕಾರ್ಯಕ್ರಮವನ್ನು ಸಂಶೋಧಕ ಕರ್ನಾಟಕ ಇತಿಹಾಸ ಅಕಾಡೆಮಿಯ ಬಳ್ಳಾರಿ ಜಿಲ್ಲಾಧ್ಯಕ್ಷರಾದ ಟಿ ಹೆಚ್ ಎಂ ಬಸವರಾಜ್ ರವರು ಕ್ಯಾಸಿಯ ನುಡಿಸಿ ಮಾತನಾಡಿದರು ಅಮವಾಸ್ಯೆ ರಾತ್ರಿ ಶಿವನ ಧ್ಯಾನದಲ್ಲಿ ಮುಳುಗುವುದರಿಂದ ಮನಸೋ ವಿಕಸಿತವಾಗಿ ಚಂಚಲತೆ ದೂರವಾಗಿ ಮನುಷ್ಯತ್ವ ಹುಟ್ಟಿಕೊಳ್ಳುತ್ತದೆ ಶಿವ ಸ್ಮರಣೆ ಅದ್ವಿತೀಯವಾದ ಶಕ್ತಿ ಶಿವನಾಮ ಹೊಂದಿದ್ದರೆ ಸಾಕು ಎಲ್ಲಾ ಕಷ್ಟಗಳು ತಾವಾಗಿಯೇ ದೂರವಾಗುತ್ತವೆ ತ್ರಿಮೂರ್ತಿಗಳಲ್ಲಿ ಶಿವನಿಗೆ ವಿಶಿಷ್ಟವಾದ ಸ್ಥಾನವಿದೆ ಶಿವ ತಾಂಡವ ನೃತ್ಯದಿಂದ ಮೂರು ಲೋಕಗಳ ನಡುಗುತ್ತವೆ ಶಿವ ಮಂತ್ರ ದೇಹದಲ್ಲಿ ಸ್ನಾಯುಗಳಿಗೆ ಕ್ರಿಯಾಶೀಲತೆಯನ್ನು ಕೊಡುತ್ತವೆ ಸಂಗೀತಕ್ಕೆ ಅಷ್ಟೊಂದು ಶಕ್ತಿ ಇದೆ ಎಂದು ತಿಳಿಸಿದರು ಶಿವ ದೀಕ್ಷಾ ಮಂದಿರದ ಧರ್ಮಾಧಿಕಾರಿ ಏ ರಾಜಶೇಖರ್ ಗೌ ಡಾ ಗೊಗ್ಗರಟ್ಟಿಯ ಮುಖಂಡರಾದ ಹೊನ್ನೂರ್ ಸ್ವಾಮಿ ರಂಗನ ಟಿ ಎಳ್ಳಾರ್ತಿ ಚಾಮುಂಡಿ ಗಾಯಕ ಜಡೇಶ್ ಎಮ್ಮಿಗನೂರ್ ಶಿವಕುಮಾರ್ ಕೀಬೋರ್ಡ್ ದೇವಲಾಪುರ ವಿರೂಪಾಕ್ಷಪ್ಪ ಮುಖಂಡ ವೆಂಕಟೇಶ್ ವೇದಿಕೆ ಮೇಲೆ ಉಪಚುತರಿದ್ದರು ಎಂ ಪುರುಷೋತ್ತಮ್ ಕಾರ್ಯಕ್ರಮ ನಿರೂಪಿಸಿದರು ಸ್ವಾಗತಿಸಿದರು ಎಳ್ಳಾರ್ತಿ ಚಾಮುಂಡಿ ಭಕ್ತಿ ಪ್ರಧಾನವಾದ ರಂಗಗೀತೆಗಳನ್ನು ಹಾಡಿದರು ಜಡೇಶ್ ಎಮ್ಮಿಗನೂರ್ ಇವರ ಜನಪದ ಮತ್ತು ವಚನ ಗಾಯನ ಮಾಡಿದರು ಈ ಕೀ ಬೋರ್ಡ್ ನಲ್ಲಿ ಶಿವಕುಮಾರ್ ವಿರುಪಾಕ್ಷಪ್ಪ ದೇವಲಾಪುರ ತಬಲಾ ಸಾಬ್ ನೀಡಿದರು ತೊಗಲಗೊಂಬೆಕೆ ಹೊನ್ನೂರ್ ಸ್ವಾಮಿ ಕೊನೆಯಲ್ಲಿ ವಂದಿಸಿ ಎಲ್ಲರನು ಸನ್ಮಾನಿಸಿ ಗೌರವಿಸಿದರು ಶಿವನಿಗೆ ಮಹಾಮಂಗಳಾರತಿ ನಂತರ ಎಲ್ಲರಿಗೂ ಪ್ರಸಾದ ವಿತರಣೆಯಾಯಿತು

# ಸುಭಾಷ್ ಚಂದ್ರಭೋಸ್ ಜಯಂತಿ ಆಚರಣೆ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ವಿದ್ಯಾರ್ಥಿ ಶಿಕ್ಷಣ ಸಂಸ್ಕೃತಿ ಸೇವಾ ಸಮಿತಿ, ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಬಳ್ಳಾರಿ, ವತಿಯಿಂದ ಡಾ.ರಾಜಕುಮಾರ್ ರಸ್ತೆಯಲ್ಲಿರುವ ಪಾಂಚಜನ್ಯ ಸಭಾಂಗಣದಲ್ಲಿ ನೇತಾಜಿ ಸುಭಾಷ್ ಚಂದ್ರಬೋಸ್ ಅವರ 129 ನೆಯ ಜಯಂತಿ ಆಚರಣೆ ಮಾಡಲಾಯಿತು. ಮುಖ್ಯವಕ್ತಾರರಾದ, ನಿವೃತ್ತ ಉಪನ್ಯಾಸಕರಾದ ಎನ್. ಬಸವರಾಜ್ ರವರು ಮಾತನಾಡುತ್ತಾ ನೇತಾಜಿ ಸುಭಾಸ್ ಚಂದ್ರಬೋಸ್ ಅವರು ದೇಶದ ಸ್ವಾತಂತ್ರ ಹೋರಾಟದಲ್ಲಿ ಮಾಡಿದ ಅಪ್ರತಿಮ ಸಾಧನೆಯನ್ನು, ಇಂಡಿಯನ್ ನ್ಯಾಷನಲ್ ಆರ್ಮಿಯನ್ನು ಕಟ್ಟಿ ಬ್ರಿಟಿಷರ ವಿರುದ್ಧ ಹೋರಾಡಿದ ಪರಿಣಾಮವಾಗಿ ಬ್ರಿಟಿಷರು ಭಾರತದಿಂದ ಪಲಾಯನ ಗೈದರು. ಅವರ ಸೇವೆ ಅಪಾರವಾದುದು. ಪ್ರತಿಯೊಬ್ಬ ಭಾರತೀಯನು ಅವರ ಸೇವೆಯನ್ನು ಸದಾ ಸ್ಮರಿಸಬೇಕೆಂದರು. ಮುಖ್ಯ ಅತಿಥಿಗಳಾದ ಚೆಳ್ಳಗುರ್ಕಿ ಸರ್ಕಾರಿ ಪ್ರೌಢ ಶಾಲೆಯ ನಿವೃತ್ತ ಮುಖ್ಯ ಗುರುಗಳಾದ ಎಂ.ವೇಣುಗೋಪಾಲ ರವರು ಮಾತನಾಡುತ್ತಾ ವಿದ್ಯಾರ್ಥಿಗಳು ನನ್ನದೇಶ, ನನ್ನಜನಸೇವಾಕಾರ್ಯದಲ್ಲಿ ಸದಾ ತೊಡಗಿಕೊಳ್ಳಬೇಕೆಂದು ಕರೆ ನೀಡಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತರ ನಗರ ಅಧ್ಯಕ್ಷರಾದ ಜಗದೀಶ್ ಕನುಗೋಲು ರವರು ಕಾರ್ಯಕ್ರಮಕ್ಕೆ ಸ್ವಾಗತ ಕೋರಿ, ಕೊನೆಗೆ ವಂದನೆ ಸಲ್ಲಿಸಿದರು. ನಾಗರಾಜರವರು ಕಾರ್ಯಕ್ರಮ ನಿರ್ವಹಿಸಿದರು. ಆರಂಭದಲ್ಲಿ ನೇತಾಜಿ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸಿದರು. ವಿದ್ಯಾರ್ಥಿ ಶಿಕ್ಷಣ ಸಂಸ್ಕೃತಿ ಸೇವಾ ಸಮಿತಿಯ ಕಾರ್ಯದರ್ಶಿಗಳಾದ ಮಾರ್ಚೆಂಡ್ ಮಲ್ಲಿಕಾರ್ಜುನರವರು ವೇದಿಕೆಯಲ್ಲಿದ್ದರು, ವಿಭಾಗಸಂಘಟನಾ ಕಾರ್ಯದರ್ಶಿಗಳು, ಅಧ್ಯಾಪಕರು, ಅ.ಭಾ.ವಿ.ಪ. ಪದಾಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು ಎಂದು ಜಿಲ್ಲಾ ಸಂಚಾಲಕ ಕೆ.ದಿಲೀಪ್ ಕುಮಾರ್ ತಿಳಿಸಿದ್ದಾರೆ.

# ವಿ.ಎಸ್.ಕೆ. ವಿ.ವಿ.ಯ ನೇಮಕಾತಿಗೆ ಹೊಸ ಅಧಿಸೂಚನೆ ಹೊರಡಿಸಲು ಮನವಿ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ವಿಜಯನಗರ ಶ್ರೀಕೃಷ್ಣ ದೇವರಾಜ ವಿಶ್ವವಿದ್ಯಾಲಯದಲ್ಲಿ, ವಿವಿಧ ವೃಂದದ ನೇಮಕಾತಿಗೆ ದಿನಾಂಕ:30.01.2026 ಅಧಿಸೂಚನೆ ಹೊರಡಿಸಿದ್ದು, ವಿವಿಧ ವೃಂದದ ನೇಮಕಾತಿಯಲ್ಲಿ ಸ್ಥಳೀಯರಿಗೆ ಮೀಸಲಾತಿಯಲ್ಲಿ ಶೇ.75ರಷ್ಟು ಮತ್ತು ಶೇ.25ರಷ್ಟು ಕಲ್ಯಾಣ ಕರ್ನಾಟಕ (371ಜೆ) ಹೈದರಬಾದ್ ಕರ್ನಾಟಕ ಅಭ್ಯರ್ಥಿಗಳನ್ನು ಹೊರತು ಪಡಿಸಿ ಇತರೆ ಅಭ್ಯರ್ಥಿಗಳಿಗೆ ಎನ್ನಲಾಗಿದೆ. ಅಧಿಸೂಚನೆಯಿಂದ (371ಜೆ) ಹೈದರಬಾದ್ ಕರ್ನಾಟಕ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದರಿಂದ ನೇಮಕಾತಿಯಲ್ಲಿ ಶೇ.100ರಷ್ಟು ಸ್ಥಳೀಯರಿಗೆ ಅವಕಾಶವನ್ನು ಕಲ್ಪಿಸಿ ಈ ಭಾಗದ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮತ್ತು ಅಧಿಸೂಚನೆಯ ಪತ್ರಿಕಾ ಪ್ರಕಟಣೆಯಲ್ಲಿ ನೇಮಕಾತಿಯ ಕುರಿತಂತೆ ವಿಷಯವಾರು ಹುದ್ದೆಗಳು, ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಈ ಎಲ್ಲಾ ಹುದ್ದೆಗಳಿಗೆ ನಿಗಧಿತ ವಿದ್ಯಾರ್ಹತೆ ಮತ್ತು ವಯಸ್ಸು, ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಇವುಗಳ ಕುರಿತು ಸ್ಪಷ್ಟ ಮಾಹಿತಿ ಇಲ್ಲದಿರುವುದು ಅಭ್ಯರ್ಥಿಗಳಿಗೆ ನೇಮಕಾತಿ ವಿಷಯದಲ್ಲಿ ಅನುಮಾನದ ಶಂಕೆ ಮತ್ತು ಗೊಂದಲವನ್ನು ಉಂಟು ಮಾಡಿರುತ್ತದೆ. ಆದ್ದರಿಂದ ಪ್ರಸ್ತುತ ಹೊರಡಿಸಿರುವ ಅಧಿಸೂಚನೆಯನ್ನು ರದ್ದುಗೊಳಿಸಿ ಸ್ಪಷ್ಟ ಮಾಹಿತಿಗಳೊಂದಿಗೆ ಹೊಸ ಅಧಿಸೂಚನೆಯನ್ನು ಹೊರಡಿಸಿ ನೇಮಕಾತಿಯಲ್ಲಿ ಸ್ಥಳೀಯರಿಗೆ ಶೇ.100ರಷ್ಟು ಮೀಸಲಾತಿ ನೀಡಿ ಸ್ಥಳೀಯ ಅಭ್ಯರ್ಥಿಗಳಿಗೆ ನ್ಯಾಯವನ್ನು ಒದಗಿಸಬೇಕೆಂದು ವಿ.ಎಸ್.ಕೆ ವಿವಿ ಕುಲಪತಿಗಳಲ್ಲಿ ಮನವಿ.

# ಬಳ್ಳಾರಿಯ ಉದಯ ಕಿರಣ್ ನ್ಯಾಯಾಧೀಶರ ಪರೀಕ್ಷೆಯಲ್ಲಿ ಆಯ್ಕೆ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಉದಯ ಕಿರಣ್ ಡಿ. ಇತ್ತೀಚೆಗೆ ಸಿವಿಲ್ ನ್ಯಾಯಾಧೀಶರ ಹುದ್ದೆಗೆ ನಡೆದ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದಾರೆ.

ಇವರು ಆಶಾಕಿರಣ ಪತ್ರಿಕೆಯ ಸಂಪಾದಕರಾಗಿದ್ದ ದಿವಂಗತ ಡಿ. ಯರ್ರಿಸ್ವಾಮಿ ಅವರ ನಾಲ್ಕನೇ ಪುತ್ರರಾಗಿದ್ದಾರೆ. ಬಳ್ಳಾರಿಯಲ್ಲಿಯೇ ಹುಟ್ಟಿ ಬೆಳೆದ ಇವರು ನಗರದ ಬಿಐಟಿಎಂ ಕಾಲೇಜಿನಲ್ಲಿ ಇಂಜಿನೀಯರಿಂಗ್ ಮುಗಿಸಿ, ನಂತರ ವೀರಶೈವ ವಿದ್ಯಾವರ್ಧಕ ಸಂಘದ ವುಂಕಿ ಸಣ್ಣರುದ್ರಪ್ಪ ಲಾ ಕಾಲೇಜಿನಲ್ಲಿ ಎಲ್ ಎಲ್ ಬಿ ಪದವಿಯನ್ನು 2023 ರಲ್ಲಿ ಮುಗಿಸಿ ಖಾಸಗಿಯಾಗಿ ವಕೀಲ ವೃತ್ತಿ ಆರಂಭಿಸಿದ್ದರು.

ಒಟ್ಟಾರೆ 15 ಸಾವಿರ ಜನರು ಪ್ರಿಲಿಮಿನರಿ ಪರೀಕ್ಷೆ ಎದುರಿಸಿದ್ದರು ಅದರಲ್ಲಿ 900 ಜನ ಮೇನ್ಸ್ ಪರೀಕ್ಷೆಗೆ ಆಯ್ಕೆಯಾಗಿದ್ದರು. ಅವರಲ್ಲಿ 252 ಜನ ಈ ಪರೀಕ್ಷೆ ಎದುರಿಸಿದ್ದರು. ಅಂತಿಮವಾಗಿ 83 ಜನ ಆಯ್ಕೆಯಾಗಿದ್ದು ಅವರಲ್ಲಿ ಇವರು ಒಬ್ಬರಾಗಿದ್ದಾರೆ.

ಇವರ ಹಿರಿಯ ಸಹೋದರ ಡಿ.ಕ್ರಾಂತಿ ಕಿರಣ ಅವರು ಈಗಾಗಲೇ ನ್ಯಾಯಾಧೀಶರಾಗಿ ದೊಳ್ಳಬಳ್ಳಾಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದಾಗಿ ಒಂದೇ ಮನೆಯಲ್ಲಿ ಇಬ್ಬರು ನ್ಯಾಯಾಧೀಶರಾಗುವ ಮೂಲಕ ಗಮನ ಸೆಳೆದಿದ್ದಾರೆ.

ಇವರ ಆಯ್ಕೆಗೆ ವೀರಶೈವ ವಿದ್ಯಾವರ್ಧಕ ಸಂಘದ ವುಂಕಿ ಸಣ್ಣ ರುದ್ರಪ್ಪ ಲಾ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಮಿಂಚೇರಿ ನರೇಂದ್ರಬಾಬು ಮತ್ತು ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಸಿರಿ ಡಯಾಗ್ನಸ್ಟಿಕ್ ಲ್ಯಾಬ್ ನ ಉಚಿತ ತಪಾಸಣೆಯಿಂದ 11 ಜನರಲ್ಲಿನ ಕ್ಯಾನ್ಸರ್ ಪತ್ತೆ




**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಸಿರಿ ಡಯಾಗ್ನಸ್ಟಿಕ್ ಲ್ಯಾಬ್ ನಿಂದ ಕಳೆದ ಒಂದು ವರೆ ತಿಂಗಳಲ್ಲಿ ಬಳ್ಳಾರಿ, ಹೊಸಪೇಟೆ ಮತ್ತು ಗಂಗಾವತಿ ಪ್ರದೇಶಗಳಲ್ಲಿ ನಡೆಸಲಾದ ಉಚಿತ ಗರ್ಭಕೋಶ ಕ್ಯಾನ್ಸರ್ (ಅಜಡಿತುಛಿಚಿಟ ಅಚಿಟ-ಛಿಜಡಿ) ತಪಾಸಣಾ ಶಿಬಿರದಲ್ಲಿ 537 ಜನರ ಪರೀಕ್ಷೆ ನಡೆಸಿ ಅವರಲ್ಲಿ 11 ಜನರಿಗೆ ಸೋಂಕು ಇರುವುದನ್ನು ಪತ್ತೆ ಹಚ್ಚಿರುವುದಾಗಿ ಲ್ಯಾಬ್ ನ ಪ್ರಕಟಣೆ ತಿಳಿಸಿದೆ.

ಭಾರತದಲ್ಲಿ ಮಹಿಳೆಯರಲ್ಲಿ ಕಾಣಿಸುವ ಕ್ಯಾನ್ಸರ್ಗಳಲ್ಲಿ ಗರ್ಭಕೋಶ ಕ್ಯಾನ್ಸರ್ ಎರಡನೇ ಸ್ಥಾನದಲ್ಲಿದೆ. ಪ್ರತಿ ವರ್ಷ ಸಾವಿರಾರು ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ಅರಿವಿನ ಕೊರತೆ, ತಪಾಸಣೆ ಸೌಲಭ್ಯಗಳ ಅಭಾವ ಹಾಗೂ ಆರ್ಥಿಕ ಅಡಚಣೆಗಳ ಕಾರಣದಿಂದ ಅನೇಕ ಪ್ರಕರಣಗಳು ಮುಂದುವರೆದು ಕೊನೆ ಹಂತದಲ್ಲಿ ಮಾತ್ರ ಪತ್ತೆಯಾಗುತ್ತಿವೆ.

ಹ್ಯುಮನ್ ಪ್ಯಾಪಿಲೋಮಾ ವೈರಸ್ (ಊಕಗಿ) ನ ನಿರಂತರ ಸೋಂಕು ಗರ್ಭಕೋಶ ಕ್ಯಾನ್ಸರ್ನ ಪ್ರಮುಖ ಕಾರಣವಾಗಿದೆ. ಆದರೆ ನಿಯಮಿತ ತಪಾಸಣೆಯ ಮೂಲಕ ಇದು ಸಂಪೂರ್ಣವಾಗಿ ತಡೆಗಟ್ಟಬಹುದಾದ ಹಾಗೂ ಆರಂಭಿಕ ಹಂತದಲ್ಲೇ ಚಿಕಿತ್ಸೆ ನೀಡಬಹುದಾದ ಕ್ಯಾನ್ಸರ್ ಆಗಿದೆ.

ಇದನ್ನು ಮನಗಂಡು, ಸಿರಿ ಡಯಾಗ್ನೋಸ್ಟಿಕ್ ಲ್ಯಾಬ್ ಫೆಬ್ರವರಿ 4,2026 ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ 45 ದಿನಗಳ ಉಚಿತ ಸಾರ್ವಜನಿಕ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಿತು.

ಸಾಮಾನ್ಯವಾಗಿ ಈ ಪರೀಕ್ಷೆಗಳ ವೆಚ್ಚ 1500–22000ರ ನಡುವೆ ಇರುತ್ತದೆ. ವೆಚ್ಚದ ಅಡತಡೆಗಳನ್ನು ನಿವಾರಿಸುವ ಮೂಲಕ ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಜೀವ ರಕ್ಷಕ ತಪಾಸಣೆಯನ್ನು ಪಡೆಯುವಂತೆ ಮಾಡಲಾಯಿತು.

ಸೋಂಕು ಪತ್ತೆಯಾದ ಎಲ್ಲಾ ಮಹಿಳೆಯರು ಯಾವುದೇ ಲಕ್ಷಣಗಳಿಲ್ಲದವರಾಗಿದ್ದರು. ತಪಾಸಣೆ ಇಲ್ಲದಿದ್ದರೆ ಈ ಪ್ರಕರಣಗಳು ಪೂರ್ವಕ್ಯಾನ್ಸರ್ ಅಥವಾ ಕ್ಯಾನ್ಸರ್ ಹಂತಕ್ಕೆ ತಲುಪುವವರೆಗೆ ಪತೆ–ಯಾಗದೇ ಉಳಿಯಬಹುದಿತ್ತು.

"ಶಿಬಿರದ ವೇಳೆ ಪಾಸಿಟಿವ್ ಎಂದು ಪತ್ತೆಯಾದ ಎಲ್ಲಾ ಮಹಿಳೆಯರಿಗೆ ವೈಯಕ್ತಿಕ ಸಮಾಲೋಚನೆ ನೀಡಲಾಗಿದ್ದು, ಅವರ ಆರೋಗ್ಯ ಸ್ಥಿತಿಯ ಬಗ್ಗೆ ಅರಿವು ಮೂಡಿಸಲಾಗಿದೆ. ತಜ್ಞರ ಬಳಿ ರೆಫರಲ್, ಹೆಚ್ಚಿನ ತಪಾಸಣೆ, ನಿಯಮಿತ ಫಾಲೋ–ಅಪ್ ಮತ್ತು ತಡೆಗಟ್ಟುವ ನಿರ್ವಹಣೆಯ ಕುರಿತು ಮಾರ್ಗದರ್ಶನ ನೀಡಲಾಗಿದೆ.


ಮುಂದಿನ ದಿನಗಳಲ್ಲಿ ಮತ್ತಷ್ಟು ತಪಾಸಣಾ ಶಿಬಿರಗಳು, ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು

# ಸಿದ್ದಯ್ಯತಾತನವರ ಪುಣ್ಯ ಸ್ಮರಣೆ ನಾಳೆಯಿಂದ ಅಕ್ಕಮಹಾದೇವಿ ಪುರಾಣ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:** ಜಿಲ್ಲೆಯ ಸಂಡೂರು ತಾಲೂಕಿನ ಕುರೆಕುಪ್ಪ ಗ್ರಾಮದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಅಂಗವಾಗಿ ಶಿವಶರಣೆ ಅಕ್ಕಮಹಾದೇವಿ ಪುರಾಣ ಪ್ರವಚನ ಮತ್ತು ಶರಣ ಸಿದ್ದಯ್ಯತಾತನವರ 17 ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ನಾಳೆ ಫೆ.19 ರಿಂದ ಮಾ.1ರವರೆಗೆ ಹಮ್ಮಿಕೊಂಡಿದೆಂದು ಧರ್ಮಕರ್ತ ಎಚ್.ಎಂ.ಶರಣಬಸಯ್ಯ ಸ್ವಾಮಿ ತಿಳಿಸಿದ್ದಾರೆ. ಪ್ರತಿದಿನ ಸಂಜೆ 6.30ರಿಂದ 8.30 ರವರೆಗೆ ಪುರಾಣ ಪ್ರವಚನ ನಡೆಯಲಿದೆ. ಏಳುಬೆಂಚಿಯ ಸದಾಶಿವಯ್ಯಸ್ವಾಮಿ ಅವರು ಪುರಾಣ ಪ್ರವಚನ, ಏಳುಬೆಂಚಿಯ ವೈ. ಎಂ.ಶಿವಕುಮಾರ ಸ್ವಾಮಿ ಪುರಾಣ ಪಠಣ ಮಾಡಲಿದ್ದಾರೆ. ಕೊಟ್ಟೂರು ಸಂಸ್ಥಾನ ಮಠದ ಸಂಗನಬಸವಸ್ವಾಮಿ, ಕಂಬಳಿ ಮಠದ ವೀರಭದ್ರ ಶಿವಾಚಾರ್ಯಸ್ವಾಮಿ, ಬುಕ್ಕಸಾಗರದ ಕರಿಸಿದ್ದೇಶ್ವರ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿ, ಮರಿಯಮ್ಮನಹಳ್ಳಿಯ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿ, ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಸ್ವಾಮಿ, ನಂದಿಪುರದ ಮಹೇಶ್ವರ ಸ್ವಾಮಿ, ಕೊಪ್ಪಳದ ಪಂಪಯ್ಯದೇವರು, ಸಂಡೂರಿನ ಪ್ರಭುಸ್ವಾಮಿ, ಉರವಕೊಂಡ ಕರಿಬಸವ ರಾಜೇಂದ್ರ ಸ್ವಾಮಿ, ಪಾಲ್ತೂರಿನ ಚೆನ್ನವೀರ ಶಿವಾಚಾರ್ಯಸ್ವಾಮಿ, ಜಂಗಮರ ಹೊಸಳ್ಳಿಯ ಅಜಾತ ಶಂಭುಲಿಂಗ ಶಿವಾಚಾರ್ಯ ಸ್ವಾಮಿ, ಚಿಕ್ಕೇನಕೊಪ್ಪ ಮರಿಶಾಂತವೀರ ವೀರಶಿವಶರಣರು, ಗುಡದೂರಿನ ನೀಲಕಂಠಯ್ಯತಾತನವರು, ಸಜ್ಜಲಗುಡ್ಡದ ದೊಡ್ಡಬಸವಾರ್ಯರು, ಹಚ್ಚೊಳ್ಳಿಯ ಕರಿಬಸವಾರ್ಯಸ್ವಾಮಿ, ಸಿರುಗುಪ್ಪದ ಎಚ್.ಎಂ.ಮಲ್ಲಿಕಾರ್ಜುನ ಸ್ವಾಮಿ ಆಶೀರ್ವಾದ, ಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ ಫೆ.22ರಂದು ಭಾನುವಾರ ಸಂಜೆ 7 ಗಂಟೆಗೆ ಹರಗಿನಡೋಣಿಯ ಪಂಚವಣಿಗಿ ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ತುಲಾಭಾರ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ. ಎಮ್ಮಿಗನೂರಿನ ಹಂಪಿ ಸಾವಿರ ದೇವರ ಮಠದ ವಾಮದೇವ ಶಿವಾಚಾರ್ಯ ಸ್ವಾಮಿ ಕಾರ್ಯಕ್ರಮದ ಸಾನಿಧ್ಯವಹಿಸುವರು. ವೆಂಕಟಾಪುರದ ಪರತತ್ವಾನಂದ ಅವಧೂತರು ಭಾಗವಹಿಸಲಿದ್ದಾರೆ. ರೇವಯ್ಯ ಸ್ವಾಮಿಗಳು ನುಡಿನಮನ ಸಲ್ಲಿಸಲಿದ್ದಾರೆ.

# ಬಳ್ಳಾರಿಯಲ್ಲಿ ಮಂಗಳಮುಖಿ ಪ್ರೇಮಿಗಳ ಆತ್ಮಹತ್ಯೆ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:** ಮಂಗಳಮುಖಿ ಸುಹಾಸಿನಿ(29) ಮತ್ತು ಅವರ ಪ್ರಿಯತಮ ಶೇಖರ ಅಲಿಯಾಸ್ ಮಣಿ ಅವರು ಇಲ್ಲಿನ ಮೇದಾರ ಕೇತಯ್ಯ ನಗರದ ಬಾಡಿಗೆ ಮನೆಯೊಂದರಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಮೂಲತಃ ಬಳ್ಳಾರಿ ತಾಲೂಕಿನ ಚಾಗನೂರು ಗ್ರಾಮಕ್ಕೆ ಸೇರಿದ ಸುಹಾಸಿನಿ ಮಂಗಳ ಮುಖಿಯಾದ ಮೇಲೆ ಕಳೆದ 6 ವರ್ಷದಿಂದ ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಮಲಪನಗುಡಿ ಗ್ರಾಮದ ರಾಜಶೇಖರನ ಸ್ನೇಹ ಬೆಳಸಿ ಇಬ್ಬರೂ ಹೊಸಪೇಟೆಯಲ್ಲಿ ಜೀವನ ನಡೆಸುತ್ತಿದ್ದರು. ಆತನಿಗೆ ಸುಹಾಸಿನಿ ತನ್ನ ದುಡಿಮೆಯಲ್ಲಿ. ಆಟೋಕೊಡಿಸಿ ಬದುಕು ಸಾಗಿಸುತ್ತಿದ್ದರಂತೆ

ಪ್ರತಿ ಮಂಗಳವಾರ ಬಳ್ಳಾರಿಯ ದುರ್ಗಮ್ಮ ದೇವಸ್ಥಾನಕ್ಕೆ ಬಂದು ಹೋಗುತ್ತಿದ್ದರು. ಹಂಪಿ ಉತ್ಸವದಲ್ಲಿ ಭಿಕ್ಷೆ ಬೇಡಿ ಸೋಮವಾರ ಮಧ್ಯಾಹ್ನ ಬಳ್ಳಾರಿಗೆ ಬಂದಿದ್ದರಂತೆ. ಕೆಲ ದಿನಗಳಿಂದ ಹಣದ ವಿಷಯದಲ್ಲಿ ಇಬ್ಬರ ನಡುವೆ ಸಣ್ಣ ಪುಣ್ಣ ಜಗಳವೂ ಆಗಿತ್ತಂತೆ. ಈ ಮಧ್ಯೆಶೇಖರನಿಗೆ ಬೇರೆ ಕನ್ಯೆಯನ್ನು ಅವರ ಮನೆಯವರು ನೋಡಿದ್ದರಂತೆ. ಪ್ರತಿ ವಾರದಂತೆ ಮೊನ್ನೆ ದಿನ ಬಳ್ಳಾರಿಗೆ ಬಂದಿದ್ದ ಇವರು ಎಂ.ಕೆ.ನಗರದ ಮನೆಗೆ ತೆರಳಿ ಆತ್ಮಹತ್ಯೆ ಮಾಡಿಕೊಂಡಿದ್ದಾರಂತೆ. ಸುಹಾಸಿನ ಶವ ನೆಲದ ಮೇಲಿದ್ದು. ಶೇಖರ್ ಶವ ಕಿಡಕಿಯ ಸರಳಿಗೆ ನೇಣು ಹಾಕಿಕೊಂಡ ಪರಿಸ್ಥಿತಿಯಲ್ಲಿ ದೊರೆತಿದೆ. ಎರಡು ಶವಗಳು ಬಿಎಂಆರ್ ಸಿ ಶವಾಗಾರದಲ್ಲಿವೆ. ಈ ಬಗ್ಗೆ ಬ್ರೂಸ್ ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದೆ.

# ವಿವೇಕಾನಂದ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲೆಯ ಬೀಳಗಿ ಪಟ್ಟಣದ ಸ್ವಾಮಿ ವಿವೇಕಾನಂದ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ 11 ವಿದ್ಯಾರ್ಥಿಗಳು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸಿದ ಜೆಇಇ (ಎಇಇ) ಮೇನ್ಸ್ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ಸಂಸ್ಥೆಯ ಕೀರ್ತಿ ಹೆಚ್ಚಿಸಿದ್ದಾರೆ.

ಕಾರ್ತಿಕ ಬಡಗೌಡರ (ಶೇ.90.73), ಸೃಷ್ಟಿ ಸಂಕಾನಟ್ಟಿ (ಶೇ.84.89), ಭೂಮಿಕಾ ದೊಡಮನಿ (ಶೇ.82.48) ಮತ್ತು ಮಧುಮತಿ ಗಡ್ಡಿ, ವಿಜಯಲಕ್ಷ್ಮಿ ಕೊರಟಗಸ್ತಿ, ಬೇಬಿ ಹೊಸಮನಿ, ಸೌಜನ್ಯ ಚಲವಾದಿ, ಅಭಿಷೇಕ ಲಮಾಣಿ, ಅಭಿಷೇಕ ಮಂಟೂರ, ತಮ್ಮಣ್ಣ ಮಾದರ, ವಿನಾಯಕ ಬಂಡಿವಡ್ಡರ ಜೆಇಇ ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆ ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಎಂ.ಎನ್.ಪಾಟೀಲ, ಆಡಳಿತಾಧಿಕಾರಿ ವಿ.ಎಸ್.ಮೇಟಿ, ಆಡಳಿತ ಮಂಡಳಿ ಸದಸ್ಯರು, ಪ್ರಾಚಾರ್ಯ ಜಿ.ಆರ್.ಪಾಟೀಲ, ಎಂ.ಬಿ.ವೆಂಕಟಾಪೂರ ಮತ್ತು ಉಪನ್ಯಾಸಕ ವೃಂದದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಬಿವಿವಿ ಸಂಘದ ಕಾಲೇಜುಗಳಲ್ಲಿ ಐಟಿಇಪಿ ಕೋರ್ಸ್

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಮೂರು ಮಹಾವಿದ್ಯಾಲಯಗಳಲ್ಲಿ ಪ್ರಸಕ್ತ ಸಾಲಿನಿಂದ ನಾಲ್ಕು ವರ್ಷಗಳ ಸಂಯುಕ್ತ ಶಿಕ್ಷಕರ ಶಿಕ್ಷಣ ಪದವಿ ಕೋರ್ಸ್(ಐಟಿಇಪಿ) ಆರಂಭಿಸಲಾಗಿದೆ ಎಂದು ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ತಿಳಿಸಿದರು.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಬಿಎ ಬಿಇಡಿ, ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಬಿಎಸ್‌ಸಿ ಬಿಇಡಿ,(ಬಿಎಡ್) ಮುಧೋಳದ ಎಸ್‌ಆರ್ ಕಂಠಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬಿಎ ಬಿಇಡಿ ಹಾಗೂ ಬಿಎಸ್ಸಿ ಬಿಇಡಿ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ ಎಂದರು.

ಮೂರು ವರ್ಷದ ಪದವಿ ನಂತರ ಎರಡು ವರ್ಷ ಬಿಈಡಿ ಮಾಡುವ ಬದಲಾಗಿ. ನಾಲ್ಕು ವರ್ಷದ ಕೋರ್ಸ್ ಸೇರ್ಪಡೆಗೊಂಡರೆ ಒಂದು ವರ್ಷ ಉಳಿತಾಯವಾಗಲಿದೆ. ಐಟಿಇಪಿ ಪದವಿ ಪಡೆದವರು ದೇಶದ ಯಾವುದೇ ರಾಜ್ಯಗಳಲ್ಲಿ ಶಿಕ್ಷಕರಾಗುವ ಅರ್ಹತೆ ಪಡೆಯುತ್ತಾರೆ ಎಂದು ಚರಂತಿಮಠ ಹೇಳಿದರು.

ಈ ಪದವಿಗೆ ಸೇರಬಯಸುವ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿಯಲ್ಲಿ ಶೇ.50 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ನಡೆಸುವ ಪರೀಕ್ಷೆಗೆ ಮಾ.10ರೊಳಗಾಗಿ ಅರ್ಜಿ ಸಲ್ಲಿಸಬೇಕು. ಏ.17ರಂದು ಪರೀಕ್ಷೆಗಳು ಜರುಗಲಿವೆ ಎಂದು ಮಾಹಿತಿ ನೀಡಿದ ಅವರು, ನೂತನ ಶಿಕ್ಷಣ ನೀತಿಗೆ ಅನುಗುಣವಾಗಿ ಶಿಕ್ಷಕರು ರೂಪಗೊಳ್ಳುವುದರಿಂದ ಉತ್ತಮ ಭವಿಷ್ಯವಿದೆ ಎಂದು ಹೇಳಿದರು.

ಸಂಘದ ಶೈಕ್ಷಣಿಕ ನಿರ್ದೇಶಕ ಸಿದ್ದರಾಮ ಮನಹಳ್ಳಿ ಮಾತನಾಡಿ, ಐಟಿಇಪಿ ಮೂಲಕ ಪದವಿ ಪಡೆಯುವವರಿಗೆ ಉತ್ತಮ ಭವಿಷ್ಯವಿದೆ. ಸಾಮಾನ್ಯ ಬಿಈಡಿ ಮಾಡಿದವರಿಗೆ ರಾಜ್ಯ ಹೊರತಾಗಿ ಹೊರರಾಜ್ಯಗಳಲ್ಲಿ ಅವಕಾಶವಿರುತ್ತಿರಲಿಲ್ಲ. ಆದರೆ ಈ ಕೋರ್ಸ್ ಪಡೆದವರು ದೇಶದ ಯಾವುದೇ ರಾಜ್ಯದಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸಬಹುದು ಎಂದರು. ಐಟಿಇಪಿ ಪ್ರವೇಶ ಪರೀಕ್ಷೆಯಲ್ಲಿ 7 ವಿಷಯಗಳಲ್ಲಿ 181 ಅಂಕಕ್ಕೆ ಪರೀಕ್ಷೆ ಎದುರಿಸಬೇಕಾಗುತ್ತದೆ. 160 ಅಂಕ ಪಡೆದವರಿಗೆ ಸೀಟ್ ಲಭಿಸಲಿದೆ. ಪ್ರವೇಶ ಪರೀಕ್ಷೆ ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ನಡೆಯಲಿದೆ ಎಂದು ಮನಹಳ್ಳಿ ಮಾಹಿತಿ ನೀಡಿದರಲ್ಲದೇ, ಹೆಚ್ಚಿನ ಮಾಹಿತಿಗಾಗಿ ಬಸವೇಶ್ವರ ಕಲಾ ಮಹಾವಿದ್ಯಾಲಯ(ಮೊ.9480596549, 9449897903), ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ(ಮೊ.9740750896, 9480645469), ಎಸ್. ಆರ್.ಕಂಠಿ ಮಹಾವಿದ್ಯಾಲಯ ಮುಧೋಳ(ಮೊ.9880323018, 9980374399) ಸಂಪರ್ಕಿಸುವಂತೆ ಕೋರಿದರು.

ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಕಾರ್ಯದರ್ಶಿ ಎಸ್.ಎಂ.ಗಾಂವಕರ ಇದ್ದರು.

# ಚುನಾವಣೆ ಘೋಷಣೆಗೂ ಮುನ್ನ ಅಭ್ಯರ್ಥಿ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಉಪಚುನಾವಣೆಯ ದಿನಾಂಕ ಪ್ರಕಟಣೆಗೂ ಮುನ್ನವೇ ಬಿಜೆಪಿ ಅಭ್ಯರ್ಥಿ ಘೋಷಣೆ ಆಗಬಹುದು ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆ ದಿನಾಂಕ ಘೋಷಣೆಯಾದ ನಂತರ ಅಭ್ಯರ್ಥಿ ಆಯ್ಕೆ ಸಾಮಾನ್ಯ. ಚುನಾವಣೆಗೆ ಸಂಬಂಧಿಸಿದಂತೆ ಬಿಜೆಪಿಯಲ್ಲಿ ಚಟುವಟಿಕೆಗಳು ನಿರಂತರವಾಗಿ ನಡೆದಿವೆ ಎಂದರು.

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸುವ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ವಿಜಯೇಂದ್ರ ಅವರಿಗೆ ಸಮೀಕ್ಷೆಯಲ್ಲಿ ಬಿಜೆಪಿ ಗೆಲ್ಲಲಿದೆ ಎಂಬ ಮಾಹಿತಿ ಸಿಕ್ಕಿರಬಹುದು. ಹೀಗಿರುವಾಗ ಅವರು ಹೇಳಿರುವುದರಲ್ಲಿ ತಪ್ಪೇನಿದೆ. ಇಲ್ಲಿ ಪಕ್ಷ ಗೆಲ್ಲುವುದು ನಿಶ್ಚಿತ ಎಂದರು.

ಮತದಾರರ ಪಟ್ಟಿ ಅಂತಿಮಗೊಂಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಚರಂತಿಮಠ, ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ಕಡಿತಗೊಳಿಸುವ ಪ್ರಕ್ರಿಯೆ ಚುನಾವಣೆಗೆ 10 ದಿನ ಉಳಿದಿರುವವರೆಗೂ ನಡೆಯುತ್ತಲೇ ಇರುತ್ತದೆ. ಮೃತ ಮತದಾರರ ಹೆಸರು ಕಡಿತವಾಗಬೇಕು. ಹೊಸ ಹೆಸರುಗಳು ಸರಿಯಾಗಿ ಸೇರ್ಪಡೆ ಆಗಬೇಕು ಮತ್ತು ಸ್ಥಳಾಂತರಗೊಂಡಿರುವ ಹಾಗೂ ಎರಡು ಬಾರಿ ಹೆಸರು ಸೇರ್ಪಡೆಗೊಂಡಿರುವ ಹೆಸರುಗಳು ಪರಿಷ್ಕರಣೆಗೊಂಡಾಗ ಮತದಾನದ ಪ್ರಮಾಣದ ನೈಜತೆ ತಿಳಿಯುತ್ತದೆ ಎಂದು ಹೇಳಿದರು.

# ಆಹಾರ ಸುರಕ್ಷತೆ : 9 ಅಂಗಡಿಗಳಿಗೆ ದಂಡ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ವಿವಿಧ ಆಹಾರ ಪದಾರ್ಥಗಳ ಅವಧಿ ಪೂರ್ಣಗೊಂಡ ಪ್ರಕರಣಗಳು ಮತ್ತು ಆಹಾರ ಪದಾರ್ಥ ತಯಾರಿಸುವ ಸ್ಥಳ ಅಸ್ವಚ್ಛತೆ ಸೇರಿದಂತೆ ಒಟ್ಟು 9 ಪ್ರಕರಣಗಳಿಗೆ ಜಿಲ್ಲಾ ಅಂಕಿತ ಅಧಿಕಾರಿಗಳ ನ್ಯಾಯಾಲಯದಲ್ಲಿ 1.30 ಲಕ್ಷ ರೂ.ಗಳ ದಂಡ ವಿಧಿಸಲಾಗಿದೆ.

ಇಲಕಲ್ಲ ನಗರದ ಕಂಠಿ ಸರ್ಕಲ್ ಬಳಿ ಇರುವ ಅಯೋಧ್ಯ ಬೇಕರಿ, ಬಸ್ ನಿಲ್ದಾಣದಲ್ಲಿರುವ ಶ್ರೀದುರ್ಗಾ ರಿಪ್ರೆಷಮೆಂಟ್ (ಕೆ.ಎಸ್.ಆರ್.ಟಿ.ಸಿ ಕ್ಯಾಂಟೀನ್), ಬಾಗಲಕೋಟೆಯ ಕೇಕ್ ಡಿಲೈಟ್, ಸಿಗೀಕೇರಿ ಎಸ್.ಎಲ್.ಜೆ ಅಯ್ಯಂಗಾರ ಬೇಕರಿ, ಬಾದಾಮಿ ಬಸ್ ನಿಲ್ದಾಣದ ಎದುರಿಗಿರುವ ಹೋಟೆಲ್ ಉಡುಪಿ ಕಿಚನ್, ಸಾನ್ವಿ ಕೇಕ್ ಕಾರ್ನರ್, ವಿಶಿಷ್ಟ ಇಂಡಸ್ಟ್ರೀಸ್ ಬಳ್ಳಾರಿ, ಮುಧೋಳ ಹೋಟೆಲ್ ನಿವ್ ಶಬರಿಗಳಿಗೆ ದಂಡವಿಧಿಸಲಾಗಿದೆ ಎಂದು ಜಿಲ್ಲಾ ಅಂಕಿತ ಅಧಿಕಾರಿಗಳು ಆಗಿರುವ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

ಜಿಲ್ಲಾ ಅಂಕಿತ ಅಧಿಕಾರಿಗಳು ಪ್ರಕರಣಗಳನ್ನು ಪರಿಶೀಲಿಸಿ ದಂಡ ವಿಧಿಸಿ, ಪುನಃ ಈ ತಪ್ಪು ಮರುಕಳುಹಿಸದಂತೆ ಎಚ್ಚರಿಕೆ ನೀಡಿ ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು. ಆಹಾರ ಪದಾರ್ಥ ತಯಾರಿಸುವ ಸ್ಥಳ ಸ್ವಚ್ಛತೆಯಿಂದ ಇರಬೇಕು. ಯಾವುದೇ ರೀತಿಯ ಕಲಬೆರಕೆ, ಕಳಪೆ ಗುಣಮಟ್ಟದ ಆಹಾರ ಬಳಕೆ ಕಂಡು ಬಂದಲ್ಲಿ ಕಾನೂನು ರಿತ್ಯ ಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ ನೀಡಿದರು. ಇನ್ನು 8 ಪ್ರಕರಣಗಳು ವಿಚಾರಣೆ ಹಂತದಲ್ಲಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆಹಾರ ಸುರಕ್ಷತೆ ಅಧಿಕಾರಿಗಳಾದ ಇ.ಎಚ್.ಫಾರುಕಿ, ಆರ್.ಎಂ.ಸಾಳಗುಂದಿ, ಸದಾಶಿವ ಹಡಪದ, ಸಂದೀಪ್ ತಿಡಗುಂದಿ ಇದ್ದರು.

# ಶರಣಪ್ಪ ಗದ್ಲೆಗಾವಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ತಾಲೂಕಿನ ಸುಕ್ಷೇತ್ರ ಗೋಕುಳ ಗ್ರಾಮದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಜಾನಪದ ಪ್ರಶಸ್ತಿ ಪುರಸ್ಕೃತರಾದ ಡಾ. ಕೆ. ಜಿ. ಶರಣಪ್ಪ ಗದ್ಲೆಗಾವ ಯವರಿಗೆ ಹಾಗೂ ಕಲ್ಯಾಣ ಕರ್ನಾಟಕ ಕಲಾತಂಡದ ಪ್ರಧಾನ ಕಾರ್ಯದರ್ಶಿಗಳಾದ ವೀರಶೆಟ್ಟಿ ಮಲಶೆಟ್ಟಿ ಯವರಿಗೆ ಸನ್ಮಾನಿಸಿ ಗೌರವಿಸಿದರು.ಈ ಸಂದರ್ಭದಲ್ಲಿ ಅನೇಕರು ಉಪಸ್ಥಿತರಿದ್ದರು.

# ಶಿವಸಿಂಪಿ ಸಮಾಜದಿಂದ ಶಿವದಾಸಿಮಯ್ಯ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಶಿವಸಿಂಪಿ ಸಮಾಜ ಸುಸಂಸ್ಕೃತ ಸಮಾಜವಾಗಿದ್ದು, ಅದು ರಾಜ್ಯಮಟ್ಟದಲ್ಲಿ ತಲೆಯೆತ್ತಬೇಕಾಗಿದೆ. ಆ ದಿಶೆಯಲ್ಲಿ ಎಲ್ಲರೂ ಒಗ್ಗೂಡಿ ಶ್ರಮಿಸಬೇಕು ಎಂದು ಬನಹಟ್ಟಿಯ ಮಂದಾರಮಠದ ಮಹಾಂತ ದೇವರು ಹೇಳಿದರು.

ವಿದ್ಯಾಗಿರಿ ಜ್ಯೋತಿ ಕಾಲೊನಿಯಲ್ಲಿರುವ ಶಿವಸಿಂಪಿ ಸಮುದಾಯ ಭವನದಲ್ಲಿ ಜರುಗಿದ ಶಿವದಾಸಿಮಯ್ಯನವರ ಜಯಂತಿ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯರು, ಸಮಾಜ ಬೆಳೆಯಲು ಪ್ರತಿಯೊಬ್ಬರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದರು.

ಶಿವದಾಸಿಮಯ್ಯನವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿದ ನಂತರ ಸಮಾಜದ ಮಹಿಳಾ ಮಂಡಳದವರು ತೊಟ್ಟಿಲು ಸೇವೆಗೈದು ಜೋಗುಳ ಹಾಡಿ ಸಂಭ್ರಮಿಸಿದರು. ನಿವೃತ್ತ ಶಿಕ್ಷಕಿ ಗುರುಬಸಮ್ಮ ಹಣಮಸಾಗರ ಪ್ರಸಾದ ಮಾಡಿದರು.

ಶಿವಸಿಂಪಿ ಸಮಾಜದ ಜಿಲ್ಲಾ ಅಧ್ಯಕ್ಷ ಮಲ್ಲಿಕಾರ್ಜುನ ಕೋಲ್ಹಾರ, ತಾಲೂಕಾ ಅಧ್ಯಕ್ಷ ಸಿ.ಎ.ಸಾವಳಗಿ, ಉಪಾಧ್ಯಕ್ಷ ಮಂಜುನಾಥ ಜಾಲವಾದಿ, ಕಾರ್ಯದರ್ಶಿ ರವಿ ಸೋಲಾಪುರೆ, ಕೋಶಾಧ್ಯಕ್ಷ ವೀರಣ್ಣ ಗಂಗಾವತಿ, ಶಿವದಾಸಿಮಯ್ಯ ಮಹಿಳಾ ಮಂಡಳದ ಜಿಲ್ಲಾ ಅಧ್ಯಕ್ಷೆ ಕಮಲಕ್ಕ ರುದ್ರಾಕ್ಷಿ, ತಾಲೂಕಾ ಅಧ್ಯಕ್ಷೆ ಸರೋಜಿನಿ ಗಂಗಾವತಿ, ಉಪಾಧ್ಯಕ್ಷೆ ಗಿರಿಜಾ ಪಾವಟೆ, ಇಂದುಮತಿ ಮೊರಬದ, ತ್ರಿವೇಣಿ ಕೋಲ್ಹಾರ ಮತ್ತಿತರರು ವೇದಿಕೆಯಲ್ಲಿದ್ದರು.

# ನಿಜವನರಿತು ನಿಶ್ಚಿಂತರಾಗಿರಿ: ಸೋಮಲಿಂಗಪ್ಪ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಪ್ರತಿಯೊಬ್ಬ ವ್ಯಕ್ತಿ ಜೀವನದಲ್ಲಿ ನಡೆಯುವ ಘಟನೆಗಳ ಸತ್ಯಾಸತ್ಯತೆ ಅರಿಯಬೇಕು. ನಿಜವನರಿತು ನಿಶ್ಚಿಂತೆಯಾಗಿ ಜೀವನ ಸಾಗಿಸುವಂತೆ ಸಿಂಧನೂರಿನ ದೈಹಿಕ ಶಿಕ್ಷಣ ಪರಿವೀಕ್ಷಕ ಸೋಮಲಿಂಗಪ್ಪ ತಾವರಗೇರಾ ಹೇಳಿದರು.

ಜಿಲ್ಲೆಯ ಇಳಕಲ್ಲ ತಾಲೂಕಿನ ಕಂದಗಲ್ ಸುವರ್ಣಗಿರಿ ರುದ್ರುಸ್ವಾಮಿ ಮಠದಲ್ಲಿ ನಡೆದ 62 ನೇ ಮಾಸಿಕ ಶಿವಾನುಭವಗೋಷ್ಠಿಯ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ನಿಶ್ಚಿಂತೆಯ ಜೀವನದಿಂದ ಎಲ್ಲ ಚಿಂತೆಗಳು ದೂರಾಗಿ ನೆಮ್ಮದಿಯ ಬದುಕು ನಡೆಸಲು ಸಾಧ್ಯವಾಗುತ್ತದೆ ಎಂದರು.

ಶ್ರೀಮಠದ ಡಾ.ಚನ್ನಮಲ್ಲ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸೇವಾರ್ಥಿಗಳಾದ ಬಸೆಟ್ಟೆಪ್ಪ ಸಜ್ಜನ ಅತಿಥಿಗಳಾಗಿದ್ದರು. ಸೇವೆ ಸಲ್ಲಿಸಿದ ಬಸೆಟ್ಟೆಪ್ಪ ಸಜ್ಜನ, ಸೋಮಲಿಂಗಪ್ಪ ತಾವರಗೇರಾ, ಹಾಗೂ ಡಿಎಡ್ ಕಾಲೇಜಿನ ರಂಗನಾಥ ಅಂಬಿಗೇರ ಅವರನ್ನು ಸತ್ಕರಿಸಲಾಯಿತು.

ವೀರಮ್ಮ ಟೆಂಗಿನಕಾಯಿ ಪ್ರಾರ್ಥನೆ ಹಾಡಿದರು. ಚನ್ನಪ್ಪ ಜಾಲಿಹಾಳ, ಸ್ವಾಗತಿಸಿದರು. ಶ್ವೇತಾ ಮೂಲಿಮಠ ನುಡಿನಮನ ಸಲ್ಲಿಸಿದರು. ಶಂಕ್ರಮ್ಮ ಗೆಜ್ಜೆಲಗಟ್ಟಿ ವಂದಿಸಿದರು. ಸಾವಿತ್ರಿ ಹಡಪದ ಕಾರ್ಯಕ್ರಮ ನಿರೂಪಿಸಿದರು.

## ಕೆಂಭಾವಿಯಲ್ಲಿ ವಿರಾಟ ಹಿಂದೂ ಮಹಾ ಸಮ್ಮೇಳನ

# ರಾಷ್ಟ್ರಪ್ರೇಮವೇ ಧರ್ಮದ ನಿಜವಾದ ಸಾರ: ಸಿದ್ದಲಿಂಗ ದೇವರು

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಎಲ್ಲರನ್ನು ಪ್ರೀತಿಯಿಂದ ಕಾಣುವುದೆ ನಮ್ಮ ಹಿಂದೂ ಧರ್ಮದ ಶ್ರೇಷ್ಠತೆ. ನಾವು, ಬಂದಿರುವ ಎಲ್ಲರನ್ನೂ ಅಪ್ಪಿಕೊಂಡಿದ್ದೇವೆ.

ನಮ್ಮ ಧರ್ಮದ ನೈಜ ವೈಖರಿ ಅಗಾಧವಾದುದು ಎಂದು ತಾಳಿಕೋಟಿ ಖಾಸ್ಗತೇಶ್ವರ ಮಠದ ಸಿದ್ದಲಿಂಗ ದೇವರು ಹೇಳಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಹಮ್ಮಿಕೊಂಡ ವಿರಾಟ ಹಿಂದು ಮಹಾ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಅವರು ನಮ್ಮ ಮಣ್ಣಿನ ಗುಣ ಎಂಥದ್ದೆಂದರೆ, ಇಲ್ಲಿನ ನೈಸರ್ಗಿಕ ಸಂಪತ್ತನ್ನು ಗೌರವಿಸಿ ದುಡಿದರೆ ಸಾಕು, ಈ ಭೂಮಿ ಎಲ್ಲರಿಗೂ ಅನ್ನ ನೀಡುತ್ತದೆ. ಪೂಜೆ–ಪುರಸ್ಕಾರಗಳ ಜೊತೆಗೆ, ಭಗವಂತನಿಗೆ ಮೆಚ್ಚುಗೆಯಾಗುವ ಸತ್ಕಾರ್ಯಗಳನ್ನು ಮಾಡುವುದೇ ಧರ್ಮವನ್ನು ಗಟ್ಟಿಗೊಳಿಸುವ ದಾರಿ. ನಮ್ಮ ಮಕ್ಕಳಿಗೆ ಕೇವಲ ಭಕ್ತಿಯನ್ನಷ್ಟೇ ಅಲ್ಲದೆ, ಉತ್ತಮ ಸಂಸ್ಕಾರ ಮತ್ತು ಸತ್ಯದ ಹಾದಿಯಲ್ಲಿ ನಡೆಯುವ ಶಕ್ತಿಯನ್ನು ನಾವು ಕಲಿಸಿಕೊಡಬೇಕು ಎಂದ ಅವರು ಕುಲ–ಜಾತಿಗಳಿಗಿಂತ ಹೆಚ್ಚಾಗಿ ರಾಷ್ಟ್ರಪ್ರೇಮವನ್ನು ಆಚರಿಸುವುದೇ ಧರ್ಮದ ನಿಜವಾದ ಸಾರವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮುಖ್ಯ ವಕ್ತಾರ ಶಿವಾನಂದ ಸಿಂದನಕೇರಾ ಮಾತನಾಡಿ ಅನೇಕ ಆಕ್ರಮಣಗಳ ನಡುವೆಯೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಹಿಂದೂ ಧರ್ಮವು ಕೇವಲ ಒಂದು ಮತವಲ್ಲ, ಅದು ಜೀವನ ಧರ್ಮವಾಗಿದೆ ಜಗತ್ತಿಗೆ ಜ್ಞಾನದ ಬೆಳಕನ್ನು ನೀಡಿದ ಹೆಗ್ಗಳಿಕೆ ನಮ್ಮದು. ಸುಮಾರು 75 ಸಾವಿರ ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದೆ. ಹಿಂದೂ ಎನ್ನುವುದು ಮಾತ್ರ ಜೀವನ ಧರ್ಮವಾಗಿದ್ದು, ಉಳಿದವುಗಳು ಆಯಾ ಕಾಲಘಟ್ಟದಲ್ಲಿ ಉದಯಿಸಿದ ಮತಗಳಾಗಿವೆ. ಹಿಂಸೆಯಿಂದ ದೂರವಿರುವುದು ಮತ್ತು ಜ್ಞಾನದ ಮೂಲಕ ಅಜ್ಞಾನವನ್ನು ಹೋಗಲಾಡಿಸುವುದು ನಮ್ಮ ಧರ್ಮದ ಮೂಲ ಸತ್ವವಾಗಿದೆ. ಅಯೋಧ್ಯೆಯ ರಾಮ ಮಂದಿರದ ಉದ್ಘಾಟನೆಯು ಭಾರತೀಯರ 500 ವರ್ಷಗಳ ಸುದೀರ್ಘ ಹೋರಾಟದ ಫಲವಾಗಿದೆ. ಇದು ಕೇವಲ ಒಂದು ಮಂದಿರವಲ್ಲ, ಬದಲಿಗೆ ಭಾರತದ ಕಳೆದುಹೋದ ಅಸ್ಮಿತೆಯನ್ನು ಮರಳಿ ಸ್ಥಾಪಿಸಿದ ಐತಿಹಾಸಿಕ ಕ್ಷಣವಾಗಿದೆ. ನಮ್ಮ ವಿಶಿಷ್ಟ ಸಂಸ್ಕೃತಿ ಮತ್ತು ಸನಾತನ ಧರ್ಮದ ತತ್ವಗಳು ಇಡೀ ಮಾನವಕುಲಕ್ಕೆ ಮಾದರಿಯಾಗಿವೆ ಎಂದು ವಿವರಿಸಿದರು.





ಶಂಕರ ಕರಣಗಿ ಪ್ರಾಸ್ತಾವಿಕ ಮಾತಾಡಿದರು. ವೇದಿಕೆ ಸಾನಿಧ್ಯದಲ್ಲಿದ್ದರು. ಕೆಂಭಾವಿ ಹಿರೇಮಠದ ಷ.ಬ್ರ ಚನ್ನಬಸವ ಶಿವಾಚಾರ್ಯರು, ಮುದನೂರು ಕಂಠಿ ಮಠದ ಷ. ಬ್ರ. ಸಿದ್ದ ಚನ್ನಮಲ್ಲಿಕಾರ್ಜುನ ಶ್ರೀಗಳು, ಪರಮಾನಂದ ಮುತ್ಯಾ ದೊಡ್ಡ ಬಂಡೆಪ್ಪನಳ್ಳಿ, ನಿಂಗಯ್ಯ ಮುತ್ತಾ ಬಂಡೆಪ್ಪನಳ್ಳಿ, ಕೂಡಲಗಿ ಬಾಬಾ ಮಠದ ಉಮಾಕಾಂತ ಮಹಾರಾಜರು, ನಗನೂರು ಖಂಡಪ್ಪ ತಾತನವರು, ಬೀರಪ್ಪ ಪೂಜಾರಿ ಇದ್ದರು. ಮಾಣಿಕ್ ಬಡಿಗೇರ ನಿರೂಪಿಸಿದರು ಪ್ರಕಾಶ ಹೊಸಮನಿ ಸ್ವಾಗತಿಸಿದರು.

**ವೈಭವದ ಶೋಭಾಯಾತ್ರೆ:**

ವಿರಾಟ ಹಿಂದೂ ಸಮ್ಮೇಳನದ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶೋಭಾಯಾತ್ರೆಯು ಅತ್ಯಂತ ಸಂಭ್ರಮದಿಂದ ಜರುಗಿತು.

ಪೂರ್ಣ ಕುಂಭ ಕಲಶ ಹೊತ್ತ ಮಹಿಳೆಯರು, ಮೆರವಣಿಗೆಯುದ್ದಕ್ಕೂ ಡೊಳ್ಳು ಕುಣಿತ, ಕೋಲಾಟ ಹಾಗೂ ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನವು ಮೆರವಣಿಗೆಗೆ ಕಳೆ ತಂದವು. ಭವ್ಯ ಮೆರವಣಿಗೆಯಲ್ಲಿ,

ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ, ಆದರ್ಶವಾದಿಗಳ ಹಾಗೂ ಹಿಂದೂ ದೇವತೆಗಳ ಭಾವಚಿತ್ರಗಳನ್ನು ಸುಮಾರು

50 ಕ್ಕೂ ಹೆಚ್ಚು ಎತ್ತಿನ ಬಂಡಿಗಳು ಮತ್ತು ಆಟೋಗಳ ಮೂಲಕ ಅಲಂಕರಿಸಿ ಸಕಲ ವೈಭವದೊಂದಿಗೆ ಪಟ್ಟಣದಾದ್ಯಂತ ಮೆರವಣಿಗೆ ಮಾಡಲಾಯಿತು.

### ವಿಶ್ವದ ಜ್ಞಾನ ಕೇಂದ್ರವಾಗಿ ಭಾರತ

“ಭಾರತದ ಸಂಸ್ಕೃತಿ ಇಂದು ಕೇವಲ ದೇಶಕ್ಕೆ ಸೀಮಿತವಾಗಿಲ್ಲ.200 ವರ್ಷಗಳ ಹಿಂದೆ ಜಗತ್ತಿಗೆ ಮಾರ್ಗದರ್ಶಕವಾಗಿದ್ದ ಭಾರತವು, ಸ್ವತಂತ್ರ ಭಾರತದ ನೂರನೇ ವರ್ಷದ ವೇಳೆಗೆ (2047) ಮತ್ತೆ 'ಜಗದ್ಗುರು' ಸ್ಥಾನವನ್ನು ಅಲಂಕರಿಸಲಿದೆ ಎಂಬ ಬಲವಾದ ನಂಬಿಕೆ ವ್ಯಕ್ತವಾಗುತ್ತಿದೆ. ಜ್ಞಾನದ ಶಕ್ತಿಯಿಂದ ಜಗತ್ತನ್ನು ಗೆಲ್ಲುವ ಸಾಮರ್ಥ್ಯ ಭಾರತಕ್ಕಿದೆ. ನಮ್ಮ ವಿಶಿಷ್ಟ ಸಂಸ್ಕೃತಿ ಮತ್ತು ಸನಾತನ ಧರ್ಮದ ತತ್ವಗಳು ಇಡೀ ಮಾನವಕುಲಕ್ಕೆ ಮಾದರಿಯಾಗಿವೆ

ಷ. ಬ್ರ. ಸಿದ್ದ ಚನ್ನಮಲ್ಲಿಕಾರ್ಜುನ ಶ್ರೀಗಳು ಮುದನೂರು



ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲ ನೇತೃತ್ವದ ಮಂಡಳಿ ನಿಯೋಗ ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ಬುಧವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಉಪಾಧ್ಯಕ್ಷ ಸುಂದರ್ ರಾಜ್, ಖಜಾಂಚಿ ಜಯಸಿಂಹ ಮುಸುರಿ ಮತ್ತಿತರರು ಜತೆಗಿದ್ದರು.

## ದುಶ್ಚಟಗಳಿಂದ ಮುಕ್ತರಾಗಲು ಕರೆ




**ಭಾಲ್ಕಿ:** ಪಟ್ಟಣದ ಶ್ರೀ ಖಿಡಕೇಶ್ವರ ಪ್ರೌಢಶಾಲೆಯಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಘಟಕದ ವತಿಯಿಂದ ನಶಾಮುಕ್ತ ಭಾರತ ಅಭಿಯಾನ ಅಡಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಉದ್ಘಾಟಕರಾಗಿ ಆಗಮಿಸಿದ ಬಿ.ಕೆ. ರಾಧಾ ಬೆಹೆನ್ ಜೀ ಅವರು ಮಾತನಾಡಿ, "ಆರೋಗ್ಯವೇ ಭಾಗ್ಯ" ಇಂದಿನ ದಿನಗಳಲ್ಲಿ ಜನರು ಅನೇಕ ದುಶ್ಚಟಗಳಿಗೆ ತುತ್ತಾಗಿ ತಮ್ಮ ಅಮೂಲ್ಯ ಜೀವನ ಮತ್ತು ಕುಟುಂಬವನ್ನು ನಾಶಪಡಿಸಿಕೊಳ್ಳುತ್ತಿದ್ದಾರೆ.ನಶಾ ಮುಕ್ತರಾಗಲು ಕರೆ ಕೊಟ್ಟರು. ಪ್ರಾಸ್ತಾವಿಕ ಮಾತನಾಡಿದ ಶ್ರೀ ಖಿಡಕೇಶ್ವರ ಪ್ರೌಢಶಾಲೆಯ ಮುಖ್ಯ ಗುರುಗಳಾದ ಆನಂದ ಕಲ್ಯಾಣೆ, ಮನುಷ್ಯನ ಜೀವನ ಅಮೂಲ್ಯವಾದದ್ದು.ದುಶ್ಚಟಗಳಿಗೆ ಬಲಿಯಾಗದಂತೆ ಶುದ್ಧ ಜೀವನ ನಡೆಸುವಂತೆ ತಿಳಿಸಿದರು. ಉದಯಕುಮಾರ್ ಜೋಶಿ ಸ್ವಾಗತಿಸಿದರು ಬಿ.ಕೆ. ರೇಣುಕಾ ಬೆಹೆನ್ ಜೀ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರಕಾಶ್ ರೂದನೂರೆ, ಜಯಪ್ರಕಾಶ್ ಸಹಾನೆ, ಅಂಜಲಿ ಜೋಶಿ, ಬಾಬುರಾವ್ ಗಾಮಾ, ಶಿವಕುಮಾರ್ ಕಲ್ಯಾಣೆ,ಬಿ.ಕೆ. ರೂಪಾ ಬೆಹೆನ್ ಜೀ, ಬಾಬುರಾವ್ ಬಿಚಕುಂದೆ, ಮಲ್ಲಿಕಾರ್ಜುನ ನುಚ್ಚಾ, ಜಗನ್ನಾಥ ಧನೂರೆ ಉಪಸ್ಥಿತರಿದ್ದರು. ದಿಲೀಪ ಘಂಟೆ ನಿರೂಪಿಸಿದರು ಶುಭಂ ರಾಯವಾಡೆ ವಂದಿಸಿದರು.

## ಯತ್ನಾಳರೇ ಬಿಜೆಪಿ, ಯಡಿಯೂರಪ್ಪ ಅವರ ಬಗ್ಗೆ ಹಗುರ ಮಾತು ಬೇಡ




**ವಿಜಯಪುರ:** ಬಿಜೆಪಿಯಿಂದಲೇ ರಾಜಕೀಯ ಜೀವನ ಕಂಡುಕೊಂಡಿರುವ ಯತ್ನಾಳರು, ಈಗ ಆ ಪಾರ್ಟಿ ಎಂದು ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ, ಬಿಜೆಪಿ ರಾಜ್ಯಾಧ್ಯಕ್ಷರಿಗೂ ಅಗೌರವ ತೋರುತ್ತಿದ್ದಾರೆ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬಗ್ಗೆಯೂ ಏಕವಚನದಲ್ಲಿ ಪದ ಪ್ರಯೋಗಿಸಿ ನಾಲಿಗೆ ಹರಿದು ಬಿಡುವುದು ಸರಿಯಲ್ಲ ಎಂದು ಬಿಜೆಪಿ ಮುಖಂಡ, ನಗರಸಭೆ ಮಾಜಿ ಅಧ್ಯಕ್ಷ ಪರಶುರಾಮಸಿಂಗ್ ರಜಪೂತ ಯತ್ನಾಳ ವಿರುದ್ಧ ರಜಪೂತ ಕಿಡಿಕಾರಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಬಿಜೆಪಿಯಿಂದ ಕೇಂದ್ರ ಸಚಿವರಾಗಿ, ಅನೇಕ ಬಾರಿ ಶಾಸಕರಾಗಿ ಈಗ ಪಕ್ಷದ ಬಗ್ಗೆ 'ಆ ಪಾರ್ಟಿ' ಎಂದು ಹೇಳುವುದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಕೂಡಲೇ ಬಿಜೆಪಿ ಪಕ್ಷದಿಂದ ಉಚ್ಚಾಟಿತರಾಗಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳರು ನಿಲ್ಲಿಸಬೇಕು, ಇಲ್ಲವಾದರೆ ಬಿಜೆಪಿ ಕಾರ್ಯಕರ್ತರು ನಿಮ್ಮ ಕಾರ್ಯಕ್ರಮಗಳಿಗೆ ಘೇರಾವ್ ಹಾಕಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದರು. ನಿಮ್ಮ ಪಕ್ಷ ನಿಷ್ಠೆಯ ಬಗ್ಗೆ ಎಲ್ಲವೂ ಗೊತ್ತಿದೆ, ಮಾಜಿ ಸಿ.ಎಂ. ಬಿ.ಎಸ್. ಯಡಿಯೂರಪ್ಪ ಸಾಹೇಬರನ್ನು ಕೈಕಾಲು ಬಿದ್ದು ಪಕ್ಷಕ್ಕೆ ಮರು ಸೇರ್ಪಡೆಯಾಗಿದ್ದು ಮರೆತಂತಿದೆ, ಬಿ.ಎಸ್. ಯಡಿಯೂರಪ್ಪ ಅವರು ಸೈಕಲ್ ಮೇಲೆ ಸಂಚರಿಸಿ ಬಿಜೆಪಿ ಕಟ್ಟಿದ್ದಾರೆ, ಅದರ ಫಲವಾಗಿ ಯತ್ನಾಳರು ಶಾಸಕ, ಕೇಂದ್ರ ಸಚಿವರಾಗಲು ಸಾಧ್ಯವಾಗಿದ್ದು, ಇಂತಹ ಮಹಾನ್ ವ್ಯಕ್ತಿಯ ಬಗ್ಗೆ ಅಗೌರವ ತೋರುವ ಮಾತು ಶೋಭೆ ತರುವುದು ಸಲ್ಲದು. ಇನ್ನೂ ಬಿ.ವೈ. ವಿಜಯೇಂದ್ರ ಅವರು ಯುವಕರು, ಸಂಘಟನಾ ಚತುರರು ಎನ್ನುವ ಕಾರಣಕ್ಕಾಗಿಯೇ ಪಕ್ಷದ ವರಿಷ್ಠರು ಮತ್ತೊಮ್ಮೆ ಅವರ ರಾಜ್ಯಾಧ್ಯಕ್ಷರನ್ನಾಗಿ ಮರು ಆಯ್ಕೆ ಮಾಡಿದೆ, ಆದರೆ ಯತ್ನಾಳರು ಕೇವಲ ಭಾಷಣ ಬಿಟ್ಟು ಏನೂ ಮಾಡುವುದಿಲ್ಲ, ಹಿಂದೂತ್ವವೂ ಸಹ ನಿಷ್ಠೆಯಿಂದ ಮಾಡುವುದಿಲ್ಲ, ಅದು ಕೇವಲ ಅವರ ಭಾಷಣಕ್ಕೆ ಸೀಮಿತವಾಗಿದೆ, ಹೀಗಾಗಿ ಯತ್ನಾಳರು ಇನ್ನಾದರೂ ನಮ್ಮ ಭಾರತೀಯ ಜನತಾ ಪಕ್ಷದ ಬಗ್ಗೆ, ಬಿಜೆಪಿ ರಾಜ್ಯಾಧ್ಯಕ್ಷರ ಬಗ್ಗೆ ಹಾಗೂ ನಮ್ಮ ಪಕ್ಷದ ಮುಖಂಡರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಕೂಡಲೇ ಬಿಡಬೇಕು ಎಂದು ರಜಪೂತ ಒತ್ತಾಯಿಸಿದ್ದಾರೆ.

ಬಸನಗೌಡ ಪಾಟೀಲ ಯತ್ನಾಳರು ಬಿಜೆಪಿಯಿಂದ ಸಾಕಷ್ಟು ಬೆಳೆದಿದ್ದಾರೆ, ಈಗ ಅದೇ ಪಕ್ಷವನ್ನು ತೆಗಳುತ್ತಾರೆ, ಜೆಸಿಬಿ ಪಕ್ಷ ಸ್ಥಾಪನೆ ಮಾಡುವುದು ಬಿಡುವುದು ಅವರ ವಿವೇಚನೆಗೆ ಬಿಟ್ಟಿದ್ದು. ಆದರೆ ನಮ್ಮ ಪಕ್ಷದ ಬಗ್ಗೆ ಮಾತನಾಡುವುದು ಬೇಡ ಎಂದು ಕಿವಿಮಾತು ಹೇಳಿದ್ದಾರೆ.

## ಪ್ರತಿಷ್ಠಿತ ಅವ್ವ ಕೃತಿಗೆ ಪ್ರಶಸ್ತಿ




**ಕಲಬುರಗಿ:** ಮಾತೋಶ್ರೀ ಈರಮ್ಮ ವಡ್ಡನಕೇರಿ ಪ್ರತಿಷ್ಠಾನದ ವತಿಯಿಂದ ಹಾರಕೂಡದ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠದಲ್ಲಿ ನಿನ್ನೆ ನಡೆದ ಸಮಾರಂಭದಲ್ಲಿ ಬೆಂಗಳೂರಿನ ಗೊರೂರು ಪಂಕಜ ಅವರ ಬೆರಗು ರೇಖೆಗಳು ಕೃತಿಗೆ ಪ್ರತಿಷ್ಠಿತ ಅವ್ವ ಪ್ರಶಸ್ತಿ ಯನ್ನು ಪ್ರದಾನ ಮಾಡಲಾಯಿತು. ಹಾರಕೂಡು ಮಠದ ಡಾ. ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿದರು.

ಕಲಬುರಗಿಯ ಶರಣ ಬಸವ ವಿಶ್ವವಿದ್ಯಾಲಯದ ಕುಲಪತಿ ಡಾ. ದಾಕ್ಷಾಯಣಿ ಎಸ್. ಅಪ್ಪಾ, ಕಮಲಾಪುರ ಮಠದ ಡಾ. ಗುರುಪಾದಲಿಂಗ ಶಿವಯೋಗಿ, ಬಸವಕಲ್ಯಾಣ ಶಾಸಕರಾದ ಶರಣು ಸಲಗರ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಅಪ್ಪಾರಾವ ಅಕ್ಕೋಣಿ, ಸಂಸ್ಥೆಯ ಅಧ್ಯಕ್ಷರಾದ ಡಾ. ಶರಣಬಸಪ್ಪ ವಡ್ಡನಕೇರಿ ಉಪಸ್ಥಿತರಿದ್ದರು.

# ಸಫಾರಿ ಹಂತಹಂತವಾಗಿ ಪುನಾರಂಭ: ಈಶ್ವರ ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಮಾನವ–ವನ್ಯಜೀವಿ ಸಂಘರ್ಷ ಅದರಲ್ಲೂ ಹುಲಿ ದಾಳಿಯಿಂದ ಸರಣಿ ಸಾವು ಸಂಭವಿಸಿದ ಹಿನ್ನೆಲೆಯಲ್ಲಿ ಕಳೆದ ನವೆಂಬರ್ 7 ರಿಂದ ಸ್ಥಗಿತಗೊಳಿಸಲಾಗಿದ್ದ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಸಫಾರಿಯನ್ನು ತಾಂತ್ರಿಕ ಸಮಿತಿಯ ವರದಿ ಆಧರಿಸಿ ಹಂತ ಹಂತವಾಗಿ ಪುನಾರಂಭಿಸಲು ನಿರ್ಧರಿಸಿರುವುದಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿಂದು ಉನ್ನತಾಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮದ ಧಾರಣಾ ಸಾಮರ್ಥ್ಯವನ್ನು (Eco-Tourism carrying capacity) ವೈಜ್ಞಾನಿಕವಾಗಿ ನಿಗದಿ ಪಡಿಸಲು ರಚಿಸಲಾಗಿರುವ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತಾಂತ್ರಿಕ ಸಮಿತಿ ನೀಡಿರುವ ಪ್ರಾಥಮಿಕ ವರದಿಯ ಪರಾಮರ್ಶೆ ನಡೆಸಿದರು.

ಹೆಗ್ಗಡದೇವನಕೋಟೆಯಲ್ಲಿ ರೈತರೂ ಸೇರಿದಂತೆ ಸಾವಿರಾರು ಸ್ಥಳೀಯರು, ರೆಸಾರ್ಟ್ ಸಿಬ್ಬಂದಿ ಪ್ರತಿಭಟನೆ ನಡೆಸಿ ಸಫಾರಿ ನಿಲ್ಲಿಸಿರುವುದರಿಂದ ತಮ್ಮ ಜೀವನೋಪಾಯಕ್ಕೆ ಅಡ್ಡಿಯಾಗಿದ್ದು, ಸಫಾರಿ ಪುನಾರಂಭಿಸಬೇಕು ಎಂದು ಮನವಿ ಮಾಡಿರುವ ಹಿನ್ನೆಲೆಯಲ್ಲಿ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದ ಹಲವು ಮಾಧ್ಯಮಗಳಲ್ಲಿ ಸಫಾರಿ ಪುನಾರಂಭಿಸಬೇಕು ಎಂದು ವರದಿಗಳು ಪ್ರಕಟವಾಗುತ್ತಿರುವ ಹಿನ್ನೆಲೆಯಲ್ಲಿ ಜೀವವೂ ಉಳಿಯಬೇಕು, ಜೀವನೋಪಾಯವೂ ಇರಬೇಕು ಎಂಬ ಕಾರಣಕ್ಕಾಗಿ ಸಫಾರಿಯನ್ನು ನಿಯಂತ್ರಿತವಾಗಿ ಮತ್ತು ಹಂತಹಂತವಾಗಿ ಪುನಾರಂಭ ಮಾಡುವ ಕುರಿತು ಸುದೀರ್ಘ ಚರ್ಚೆ ನಡೆಸಿದರು.

ಈ ಹಿಂದೆ ಬಂಡೀಪುರದಲ್ಲಿ 8 ಗಂಟೆಗಳ ಕಾಲ ಸಫಾರಿ ನಡೆಯುತ್ತಿತ್ತು. ಈಗ ಅದನ್ನು 5 ಗಂಟೆಗೆ ತಗ್ಗಿಸಲಾಗಿದೆ. ಅದೇ ರೀತಿ ಸುಂಕದಕಟ್ಟೆಯಲ್ಲಿ 6 ಗಂಟೆ ಹಾಗೂ ನಾಗರಹೊಳೆಯಲ್ಲಿ 4 ಗಂಟೆ ಕಾಲ ಮಾತ್ರ ಸಫಾರಿಗೆ ಪ್ರಥಮ ಹಂತದಲ್ಲಿ ಅನುಮತಿಸಲಾಗಿದೆ ಎಂದೂ ವಿವರಿಸಿದರು.

**ಮುಖ್ಯಮಂತ್ರಿಗಳ ನೇತೃತ್ವದ ಸಭೆಯಲ್ಲಿ ನಿರ್ಧಾರ**

ಕಳೆದ ಜನವರಿ 2ರಂದು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಕರ್ನಾಟಕ ವನ್ಯಜೀವಿ ಮಂಡಳಿಯ 20ನೇ ಸಭೆಯಲ್ಲಿ ತಾಂತ್ರಿಕ ಸಮಿತಿ ರಚಿಸಿ, ಅಧ್ಯಯನ ವರದಿಯ ಆಧಾರದಲ್ಲಿ ಹಂತಹಂತವಾಗಿ ಸಫಾರಿ ಆರಂಭಿಸುವ ನಿರ್ಧಾರ ಕೈಗೊಳ್ಳಲಾಗಿತ್ತು. ಅದರಂತೆ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ ಅರಣ್ಯ ಇಲಾಖೆಯ ಇತರೆ ಅಧಿಕಾರಿಗಳು, ಭಾರತೀಯ ವನ್ಯಜೀವಿ ಸಂಸ್ಥೆ, ಡೆಹ್ರಾಡೂನ್ (WII) ವಿಜ್ಞಾನಿ, ಭಾರತೀಯ ಅರಣ್ಯ ನಿರ್ವಹಣಾ ಸಂಸ್ಥೆ, ಭೋಪಾಲ್ (IIFM) ರ ಪ್ರಾಧ್ಯಾಪಕರನ್ನು ಒಳಗೊಂಡ ತಾಂತ್ರಿಕ ಸಮಿತಿ ರಚಿಸಲಾಗಿತ್ತು. ಈ ಸಮಿತಿ ನೀಡಿದ ಮಧ್ಯಂತರ ವರದಿಯ ಬಗ್ಗೆ ಇಂದು ಕೂಲಂಕಷವಾಗಿ ಚರ್ಚಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

**ಸಫಾರಿ ಆದಾಯದ ಮೂರನೇ ಒಂದು ಭಾಗ ಸ್ಥಳೀಯ ಅಭಿವೃದ್ಧಿಗೆ**

ಪ್ರಸ್ತುತ ಪರಿಸರ ಪ್ರವಾಸೋದ್ಯಮ ಅಂದರೆ ಸಫಾರಿಯಿಂದ ಬರುವ ಒಟ್ಟು ಆದಾಯದ ಮೂರನೇ ಒಂದು ಭಾಗದಷ್ಟು ಹಣವನ್ನು ಅರಣ್ಯದಂಚಿನ ಗ್ರಾಮಗಳ ಸ್ಥಳೀಯ ಸಮುದಾಯದವರಿಗೆ ಕೌಶಲ್ಯ ಅಭಿವೃದ್ಧಿಗಾಗಿ, ಜಾನುವಾರುಗಳಿಗೆ ಮೇವು ಬೆಳೆಸಲು ಮತ್ತು ಪರಿಸರ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸುವ ಷರತ್ತಿನೊಂದಿಗೆ ಆರಂಭಿಸಲು ಮತ್ತು ವನ್ಯಜೀವಿ–ಮಾನವ ಸಂಘರ್ಷ ತಡೆಯಲು ಸೂಕ್ತ ಸಿಬ್ಬಂದಿಯನ್ನು ಸೂಕ್ಷ್ಮ ಪ್ರದೇಶಗಳಲ್ಲಿ ನಿಯೋಜಿಸುವ ಷರತ್ತಿನೊಂದಿಗೆ ಆರಂಭಿಸಲು ಸಮ್ಮತಿಸಲಾಗಿದೆ ಎಂದೂ ತಿಳಿಸಿದರು.

ಹಿಂದಿನ ಮುಖ್ಯ ವನ್ಯಜೀವಿ ಪರಿಪಾಲಕರು ಕಳೆದ ಡಿಸೆಂಬರ್ 28ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ, ಸರಗೂರು ಗಡಿ ಪ್ರದೇಶಗಳಲ್ಲಿ ಸ್ಥಾಪಿಸಿರುವ ಮಾನವ–ವನ್ಯಜೀವಿ ನಿರ್ವಹಣಾ ಶಿಬಿರಗಳಿಗೂ ಭೇಟಿ ನೀಡಿ ಪರಿಶೀಲಿಸಿದ್ದು, ಸಫಾರಿ ಸ್ಥಗಿತಗೊಳಿಸಿದ ಬಳಿಕ ಹೆಚ್ಚುವರಿ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಳೆದ 2 ತಿಂಗಳಲ್ಲಿ ಯಾವುದೇ ಪ್ರಮುಖ ಅಹಿತಕರ ಘಟನೆಗಳು ನಡೆಯದಿರುವ ಹಿನ್ನೆಲೆಯಲ್ಲಿ ಹಂತಹಂತವಾಗಿ ಸಫಾರಿ ಪುನಾರಂಭಿಸಬಹುದು ಎಂದು ಶಿಫಾರಸ್ಸು ಮಾಡಿದ್ದರು ಎಂದೂ ತಿಳಿಸಿದರು.

ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಪ್ರಧಾನ ಕಾರ್ಯದರ್ಶಿ ಮನೋಜ್ ಕುಮಾರ್, ಎಪಿಸಿಸಿಎಫ್ ಬಿಸ್ವಜಿತ್ ಮಿಶ್ರಾ ಮತ್ತಿತರರು ಪಾಲ್ಗೊಂಡಿದ್ದರು.

## ಜಾಮಿಯಾ ಮಸೀದಿಯ ಉದ್ಘಾಟನೆ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಆಧುನಿಕ ಶೈಲಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಿದ್ದು ಇಂದು ಅದನ್ನು ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಅಜೀಜುಲ್ಲಾ ಅಜ್ಜು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಗರದ ಹೃದಯ ಭಾಗದಲ್ಲಿರುವ ಬಜಾರ್ ರಸ್ತೆಯಲ್ಲಿರುವ ಜಾಮಿಯಾ ಮಸೀದಿಯ ಉದ್ಘಾಟನೆಯನ್ನು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ನಾವು ಈ ಒಂದು ನೂರಾನಿ ಮೆಫಿಲ್ ಅವರು ಮಸೀದಿ ನಿರ್ಮಾಣ ಮಾಡಿದವರಿಗೆ ಸ್ವರ್ಗದಲ್ಲಿ ಮನೆಯನ್ನು ಸಿಗುತ್ತದೆ ಅದು ಇಂದು ಈ ತಾಲೂಕಿನ ಯುವಕರು ಮುಖಂಡರು ಮಸೀದಿಯ ಕಮಿಟಿಯವರ ಕಾರ್ಯವೈಖರಿಗಳಿಗೆ ಶ್ಲಾಘನಿಸಿದರು. ನಾವು ಸ್ವರ್ಗ ಇಲ್ಲೇ ಕಾಣುತ್ತಿದ್ದೇವೆ ಎಂದು ವಿವರಿಸಿದರು.ಶ್ರಮಜೀವಿ ಆದರೆ ಇಷ್ಟು ವಯಸ್ಸಾದರೂ ಸಮಿತಿಯ ಸದಸ್ಯರು ಕುಗ್ಗದೆ ತಮ್ಮ ಕಾರ್ಯಗಳಿಗೆ ಮುಂಚೂಣಿಯಲ್ಲಿದ್ದು ಬೇರೆ



ಯವರಿಗೆ ಮಾದರಿ ಹಾಗಾಗಿ ನಮ್ಮ ವಕ್ಫ ಬೋರ್ಡ್ ವತಿಯಿಂದ ಅವರನ್ನು ಅಭಿನಂದಿಸುತ್ತೇನೆ ಎಂದರು.

ನಮ್ಮ ವಕ್ಫ್ ಬೋರ್ಡ್ ಅನುದಾನ ನೀಡಲು ಮುಂದಿನ ದಿನಗಳಲ್ಲಿ ಇನ್ನೆಚ್ಚು ಅಭಿವೃದ್ಧಿ ಪಡಿಸಲು ಸಂಪೂರ್ಣ ಸಹಕಾರ ನೀಡುತ್ತೇವೆ ಹಾಗೂ ಮುಂದಿನ ಬಜೆಟ್ಟಿನಲ್ಲಿ ಹೆಚ್ಚು ಅನುದಾನ ನೀಡಲು ಸಹಕರಿಸುತ್ತೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಮಿಉಲ್ಲಾ ಅಜ್ಜು, ಇಬ್ರಾಹಿಂ ಶರೀಫ್, ಅಮರ್, ಶಾಜಮ, ಅಫ್ರೋಜ ಅಹಮದ್, ಮಕಸೂದ್ ಅಲಿಖಾನ್ ಹಾಗೂ ಎಲ್ಲಾ ಮಸೀದಿಯ ಗುರುಗಳು ಹಾಗೂ ಮಾಜಿ ನಗರ ಸಭೆ ಸದಸ್ಯರಾದ ಕೃಷ್ಣರಾಜಗುಪ್ತ ಇನ್ನಿತರರು ಹಾಜರಿದ್ದರು.

## ಬಜೆಟ್: ಅನುದಾನ ನೀಡುವಂತೆ ಸರ್ಕಾರಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ

ದಾಸರಹಳ್ಳಿ ಕ್ಷೇತ್ರದಲ್ಲಿ ಅನೇಕ ಮೂಲಭೂತ ಸಮಸ್ಯೆಗಳು ಉಲ್ಬಣಗೊಳ್ಳುತ್ತಿದ್ದು ನಗರದ ವೇಗಕ್ಕೆ ತಕ್ಕಂತೆ ಅಭಿವೃದ್ಧಿ ಕೆಲಸ ಕೈಗೊಳ್ಳಲು ಮುಂಬರುವ ಬಜೆಟ್ ನಲ್ಲಿ ದಾಸರಹಳ್ಳಿ ಕ್ಷೇತ್ರಕ್ಕೆ ಹೆಚ್ಚು ಅನುದಾನ ನೀಡುವಂತೆ ಸರ್ಕಾರಕ್ಕೆ ಶಾಸಕ ಎಸ್. ಮುನಿರಾಜು ಅಗ್ರಹಿಸಿದರು.

ಕೆಂಪಾಪುರ ಮುಖ್ಯರಸ್ತೆಯ ಮಹಾರುದ್ರೇಶ್ವರ ನಗರ ಕಾಂಕ್ರೀಟ್ ರಸ್ತೆ, ಕಮ್ಮಗೊಂಡನಹಳ್ಳಿಯ ಧರ್ಮಸ್ಥಳ ಬೇಕರಿ ಹತ್ತಿರ ಹಾಗೂ ಚೊಕ್ಕಸಂದ್ರ ಹೆಚ್.ಎಂ.ಟಿ ಲೇಔಟ್ ವಾಟರ್ ಲೈನ್, ನೆಲಗದರನಹಳ್ಳಿ ಸರ್ಕಲ್ ಹತ್ತಿರ ಒಳಚರಂಡಿ ಪೈಪ್ ಅಳವಡಿಕೆ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೇರವೇರಿಸಿ ಮಾತಾನಾಡಿದರು.

ಕ್ಷೇತ್ರದಲ್ಲಿ ಇರುವಂತಹ ಸಮಸ್ಯೆಗಳಿಗೂ ಕ್ಷೇತ್ರಕ್ಕೆ ಬರುವ ಅನುದಾನಕ್ಕೂ ಅಜಗಜಾಂತರ ವ್ಯತ್ಯಾಸವಿದ್ದು ಸಮಸ್ಯೆ ಬಗೆಹರಿಸಲು ಅನುದಾನ ಸಾಲುತ್ತಿಲ್ಲ, ಜನಪ್ರತಿನಿಧಿಗಳಾದ ನಾವು ಬೆಂಗಳೂರಿನಂಥ



ಬೃಹತ್ ನಗರಗಳಲ್ಲಿ ವಾಸಿಸುವ ನಾಗರಿಕರಿಗೆ ಕನಿಷ್ಠ ಮೂಲಭೂತ ಸೌಕರ್ಯ ಒದಗಿಸಿ ಅವರ ಅಶೋತ್ತರಗಳಿಗೆ ಸ್ಪಂದಿಸಬೇಕಿದೆ,ಈ ನಿಟ್ಟಿನಲ್ಲಿ ಅಡಳಿತರೂಢ ಸರ್ಕಾರವೂ ಶಾಸಕರ ಭಾವನೆಗಳಿಗೆ ಪೂರಕವಾಗಿ ನಿಲ್ಲಬೇಕು' ಎಂದರು.

ಈ ಸಂಧರ್ಭದಲ್ಲಿ ಜಲಮಂಡಳಿಯ ಎಇಇ ಗಳಾದ ನಾಗರಾಜ್, ಗೌಸ್, ಎಇ ಕಾರ್ತಿಕ್, ಗುತ್ತಿಗೆದಾರ ಮಾದವರೆಡ್ಡಿ, ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷ ಜಿ. ಮರಿಸ್ವಾಮಿ, ಬಿ.ಎಂ. ಚಿಕ್ಕಣ್ಣ, ಭಾಗ್ಯಮ್ಮ, ನೆಲಗೆದರನಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ನಿಸರ್ಗ ಕೆಂಪರಾಜು, ಕೌಸಲ್ಯ, ಎಂ.ಕೆ. ಜಗದೀಶ್, ಬೆಲ್ಮಾರ್ ಸುರೇಶ್ ಗೌಡ, ವಿಜಯ್ ಕುಮಾರ್ ಮತ್ತಿತರರು ಇದ್ದರು.

## ಜೆಇಇ ಮೇನ್ಸ್ ಫಲಿತಾಂಶ: 90ಕ್ಕಿಂತ ಹೆಚ್ಚು ಪ್ರತಿಶತ ಪಡೆದ ವಿದ್ಯಾರ್ಥಿಗಳು

• ಪರಶುರಾಮ ಕರಣಂ ಭಾಲ್ಕಿ

ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪಿಯು ಕಾಲೇಜಿನ ವಿದ್ಯಾರ್ಥಿ ಪ್ರೀತಂ ಧೂಳಪ್ಪ ಜೆಇಇ ಮೇನ್ಸ್ ಮೊದಲ ಹಂತದ ಪರೀಕ್ಷೆಯಲ್ಲಿ 99.77 ಪರ್ಸಂಟೈಲ್ ಫಲಿತಾಂಶ ಪಡೆದು ಕಲ್ಯಾಣ ಕರ್ನಾಟಕ ವಿಭಾಗಕ್ಕೆ ಪ್ರಥಮ ಸ್ಥಾನ ಪಡೆದಿದ್ದಾನೆ ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ.

**ಸಾಧಕ ವಿದ್ಯಾರ್ಥಿಗಳ ವಿವರ:** ಶಿವಾಂಗ ವಿಕಾಸ 99.70, ವಿವೇಕ ವಿಜಯಕುಮಾರ 99.56, ಉಲ್ಲಾಸ ದೇವೇಂದ್ರ 99.37, ಆದರ್ಶರೆಡ್ಡಿ ಶ್ರೀಮಂತರೆಡ್ಡಿ 98.87, ನಿಧಿ ಅಶೋಕ 98.84, ಜಯಂತ ಭಾಸು 98.65, ರಿಷಭ್ ರಾಘವೇಂದ್ರ 98.47, ಸಾಕ್ಷಿ ಹಣಮಂತರಾವ್ 98.38, ಸೋಹನಕುಮಾರ ನಾಗರಾಜು 98.17, ಶಿವಕುಮಾರ ವಿಶ್ವನಾಥ 98.16, ಶ್ರೀಶೈಲ್ ಜಗನ್ನಾಥ 98.13, ಅಜಿಂಕ್ಯಾ ಸತೀಶ 98.05, ಶ್ರೇಯಸ್ ಹಿಬಾರೆ 98, ಕಾರ್ತಿಕಿ ದಿಗಂಬರ 98, ವೈಭವ ಸಿದ್ದಯ್ಯ 98, ಕಿರಣ ಶರಣಪ್ಪ 98, ಕಿಶನಸಿಂಗ್ 98, ಆರ್.ವಿ.ಅನಂತ 97.90,



ಶ್ರೇಯಾ ಉಡಚಣ 97.69, ಚಿನ್ಮಯ ಸಂತೋಷಕುಮಾರ 97.45, ಪಲ್ಲವಿ ಗಿರೀಶ 97.44, ಋಗ್ವೇದ ಪಂಡರಿನಾಥ 97.39, ನಾರಾಯಣರೆಡ್ಡಿ 97.36, ಅರುಣ ಝುಳಕಿ 97.30, ಪ್ರಥಮೇಶ ಪಾಟೀಲ 97.30, ಸಾಯಿನಾಥ ಗಂದಗೆ 97.23, ಅಖಿಲೇಶ ದಿಲೀಪ 97, ಆದಿತ್ಯ ಅವಧೇಶಕುಮಾರ 97, ರಾಮಕೃಷ್ಣ ನಾಗನಾಥ 97, ಚಿದಾನಂದ ಭೀಮಣ್ಣ 97, ಸತ್ಯಂ ಮಹೇಶ 97, ಹರ್ಷ ಮಠಪತಿ 97, ಹರ್ಷಿತ್ ರವೀಂದ್ರ 96.50, ಆದಿತ್ಯ ವಿರಾಜದಾರ್ 96.37, ಅಂಕಿತಾ ಅರವಿಂದ 96.35, ಹರ್ಷಿತ್ ಖೀಂಡಿ 96.33, ನಿಲೇಶ ರಾಜಶೇಖರ 96.31, ನರೇಶ ಶೇರಿಕಾರ 96.22, ರಾಹುಲ್ ಬಿರಾದಾರ 96.21, ಕೌಶಿಕ್ ಕಮಲಾಕಾರ 96, ಸಾಹಿತ್ಯ ಶಂಕರ 95.94, ವೈಭವ ದೀಪಕ 95.73, ಸಾಯಿಕುಮಾರ ಬಸವರಾಜ 95.73, ತುಕಾರಾಮ ಬಿರಾದಾರ 95.51, ಓಂಕಾರ ದಿಲೀಪಕುಮಾರ 95.50, ಖುಷಿ ಬಾವುಗೆ 95.49, ರೋಹಿತ್ ಚೆಲ್ಲರ್ಗೆ 95.40,



❝ ನಮ್ಮ ಕಾಜೇಜಿನಲ್ಲಿರುವ ದಿ ಬೆಸ್ಟ್, ಅನುಭವಿ ಪ್ರಾಧ್ಯಾಪಕರ ಪರಿಣಾಮಕಾರಿ ಬೋಧನೆ, ಮಾರ್ಗದರ್ಶನ, ನಿರಂತರ ಪರೀಕ್ಷೆಗಳ ಪರಿಣಾಮ ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಜೆಇಇ ಪರೀಕ್ಷೆಯಲ್ಲಿ ನಿಬ್ಬೆರಗಾಗುವಂತಹ ಸಾಧನೆ ಮಾಡಿದ್ದಾರೆ.

–ಪೂಜ್ಯ ಶ್ರೀ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಸಂಸ್ಥಾಪಕ ಅಧ್ಯಕ್ಷ



❝ ನಮ್ಮ ಕಾಲೇಜಿನಲ್ಲಿ ದೊರೆತ ಸೂಕ್ತ ಮಾರ್ಗದರ್ಶನ, ಗುಣಾತ್ಮಕ ಶಿಕ್ಷಣದಿಂದ ಗ್ರಾಮೀಣ ಭಾಗದ ಬಡ, ಪ್ರತಿಭಾನ್ವಿತ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಮಹೋನ್ನತ ಸಾಧನೆಗೈಯಲು ಸಾಧ್ಯವಾಗಿರುವುದು ಸಂತಸದ ಸಂಗತಿ.

–ಗುರುಬಸವ ಪಟ್ಟದ್ದೇವರು, ಪೀಠಾಧಿಪತಿ ಹಿರೇಮಠ ಸಂಸ್ಥಾನ ಭಾಲ್ಕಿ

ವೈಜಿನಾಥ ವಿಜಯಕುಮಾರ 95.28, ಚಿನ್ಮಯ ಸಂತೋಷಕುಮಾರ 95.22, ಗಿರೀಶ ನಿಡೋದೆ 95.18, ರಿಷಿಕೇಶ ಸಂಜೀವಕುಮಾರ 95.10, ದೇವಾನಂದ ಚಟೆ 95.04, ವೈಷ್ಣವಿ ರಾಜಕುಮಾರ 95, ಅಮೃತಾ ಜಗದೀಶಕುಮಾರ 95, ಎಚ್.ಮನೋಜಕುಮಾರ 95, ಬಸವರಾಜ ರಾಜಕುಮಾರ 95, ತರುಣ ಸಂತೋಷ 95, ತನುಶ್ರೀ ಬಿರಾದಾರ 95, ಧ್ರುವ ವೆಂಕಟೇಶ್ವರಲು 95, ರಾಕೇಶಕುಮಾರ ಸೂರ್ಯಕಾಂತ 95, ವರ್ಷಾ ಶರಣಬಸಪ್ಪಾ 95, ಶ್ರೀವತ್ಸ ಗುರುಬಸಪ್ಪ 95, ಸಾಯಿರಾಜ ಸಂತೋಷ 95 ಪರ್ಸಂಟೈಲ್ ಸೇರಿದಂತೆ ಸುಮಾರು 200 ವಿದ್ಯಾರ್ಥಿಗಳು 90ಕ್ಕಿಂತ ಹೆಚ್ಚು ಪರ್ಸಂಟೈಲ್ ಫಲಿತಾಂಶ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ.

## ಹರವಾಳದಲ್ಲಿ 130 ಕೋಟಿ ಸೇತುವೆ ನಿರ್ಮಾಣ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜಿಲ್ಲೆಯ ಜೇವರ್ಗಿ ತಾಲೂಕಿನ ಹರವಾಳ ಗ್ರಾಮದ ಬಳಿ ₹130 ಕೋಟಿ ವೆಚ್ಚದಲ್ಲಿ ಭೀಮಾ ನದಿಗೆ ಬಾಂದಾರು ಸಹಿತ ಸೇತುವೆ ನಿರ್ಮಾಣ ಮಾಡುವುದರ ಮೂಲಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಜಿಲ್ಲೆಗೆ ಮತ್ತೊಂದು ಗರಿ ಮೂಡಿಸಿದ್ದಾರೆ. ಈ ಮಹತ್ವಕಾಂಕ್ಷೆಯೋಜನೆಯಿಂದ ಜೇವರ್ಗಿ ಮತ್ತು ಅಫಜಲಪುರ ಜನ–ಜಾನುವಾರಗಳಿಗೆ ಮತ್ತು ನೀರಾವರಿ ಸೌಲಭ್ಯ ಪಡೆಯಲು ರೈತರಿಗೆ ವರದಾನವಾಗಲಿದೆ ಅನುಕೂಲವಾಗಲಿದೆ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಭೀಮಾ ನದಿಗೆ ಅಡ್ಡಲಾಗಿ ಬಾಂದಾರು ಮತ್ತು ಸೇತುವೆ ನಿರ್ಮಾಣದ ಕಾಮಗಾರಿಯು ಅತ್ಯಂತ ವೇಗವಾಗಿ ಸಾಗುತ್ತಿದೆ. ಈ ಸೇತುವೆಯಿಂದಾಗಿ ಪ್ರವಾಹ ಸಂದರ್ಭಗಳಲ್ಲಿ ಸುಗಮ ಹಾಗೂ ತ್ವರಿತ ಪ್ರಯಾಣಕ್ಕೆ ಅನುಕೂಲವಾಗಲಿದೆ.

**ಯೋಜನೆಯ ಉದ್ದೇಶಗಳು:** ಈ ಬಾಂದಾರಿನ ಯೋಜನೆಯಿಂದ ಜೇವರ್ಗಿ ತಾಲೂಕಿನ ಸುಮಾರು ಎಂಟು ಗ್ರಾಮಗಳು ಹಾಗೂ ಅಫಜಲಪೂರ ಮತಕ್ಷೇತ್ರದ ನಾಲ್ಕು ಗ್ರಾಮಗಳ ಕುಡಿಯುವ ನೀರು ಹಾಗೂ ಅಂತರ್ಜಲ ಮಟ್ಟ ವೃದ್ಧಿಸಬಹುದು. ಸುತ್ತ ಮುತ್ತಲಿನ ಈ ಎರಡು ತಾಲೂಕಿನ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದು ಹಾಗೂ ಈ ಸಂಪರ್ಕ ಸೇತುವೆಯಿಂದ ಎರಡು ತಾಲೂಕಿನ ರೈತರ ಕೃಷಿ ಉತ್ಪನ್ನಗಳು ಸರಕು ಸಾಗಾಣಿಕೆ ಚಟುವಟಿಕೆ ಕೈಗೊಳ್ಳಲು ಈ ಯೋಜನೆಯಿಂದ ಅನುಕೂಲವಾಗುವುದಲ್ಲದೆ ರೈತರ ಆದಾಯ ವೃದ್ಧಿಸಬಹುದಾಗಿದೆ. ಇದೆ ಬಾಂದರು





ಯೋಜನೆಯಿಂದ ಜೇವರ್ಗಿ ತಾಲ್ಲೂಕಿನ 20 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

**ಜೇವರ್ಗಿ ತಾಲೂಕಿನ ಫಲಾನುಭವಿ ಗ್ರಾಮಗಳು:** 'ರವಾಳ – ಕೋಟನೂರ – ನೆಲೋಗಿ – ರಾಸಣಗಿ, ಹಂದನೂರ – ಕೋಬಾಳ – ಬಣಮಿ ಕಲ್ಲಹಂಗರಗಾ, ಇಂದಿರಾನಗರ ತಾಂಡಾ

**ಅಫಜಲಪೂರ ಮತಕ್ಷೇತ್ರದ ಫಲಾನುಭವಿ ಗ್ರಾಮಗಳು:** ಹೇರೂರ (ಬಿ) – ಮೈನಾಳ – ಬೆಳಗುಂಪಾ – ಚಿನಮಳ್ಳಿ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರು ಮತ್ತು ನೀರಾವರಿ ಸೌಲಭ್ಯ ಒದಗಿಸಿದಂತಾಗುತ್ತದೆ. ಈ ಬಾಂದರು 32ಗೆಟುಗಳನ್ನು ಹೊಂದಿದೆ. ಸೇತುವೆಯ ಅಗಲ 7.5ಮೀಟರ್ ಇದ್ದು, 368.6 ಉದ್ದವನ್ನು ಹೊಂದಿದೆ. ಬಾಂದರಿನ ಎತ್ತರ 7 ಮೀಟರ್ ಇದ್ದು, 4 ಮೀಟರ್ ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ವಿಜಯಪುರ ಮುಖ್ಯ ಇಂಜಿನಿಯರ್ ಹೆಚ್. ಎಲ್. ವೆಂಕಟೇಶ್, ಕಲಬುರಗಿ ಅಧಿಕ್ಷಕ ಇಂಜಿನಿಯರ್ ವೃತದ ಸುಭಾಷ್ ಶಿಕ್ಷಣಕರ್, ಕಾರ್ಯಪಾಲಕ ಇಂಜಿನಿಯರ್ ನಾಗಣ್ಣಗೌಡ ಬಾವಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಾಜಶೇಖರ್ ಸಜ್ಜನಶೆಟ್ಟಿ ಹಾಗೂ ಶಾಖಾಧಿಕಾರಿ ಮಧುಸೂಧನ್ ಅವರ ತಂಡಕ್ಕೆ ಈ ಸೇತುವೆಯ ಜವಾಬ್ದಾರಿಯನ್ನು ನೀಡಲಾಗಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)